ಬೆಳ್ಳಿ ಮಾಲಿಕೆ



ದಾವಣಗೆರೆ ಜಿಲ್ಲೆಯ

# ಜನಪದ ಕಲಾವಿದರು

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ



# ದಾವಣಗೆರೆ ಜಿಲ್ಲೆಯ
# ಜನಪದ ಕಲಾವಿದರು

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೦೨

"DAVANGERI JILLEYA JANAPADA KALAVIDARU"
Written by Dr. Chikkanna Yennekatte,
Professor of Kannada, Govt. Arts College Sira, Dist :Tumukur
and Member, Karnataka Janapada and Yakshagan Academy,
Bangalore.

Published by : B. N. Paraddi,
Registrar,
Karnataka Janapada and
Yakshagana Academy;
Kannada Bhavan, J. C. Road,
Bangalore -02

Pages : 12 + 115 = 127

Price : Rs. 60-00

Rights : Author

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೮೯

ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

ಶ್ರೀ ಗವೀಶ ಹಿರೇಮಠ ಡಾ. ಹಂಪನಹಳ್ಳಿ ತಿಮ್ಮೇಗೌಡ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಡಾ. ಕೆ. ಚಿನ್ನಪ್ಪಗೌಡ

ಶ್ರೀ ಅರಾಟೆ ಮಂಜುನಾಥ ಡಾ. ಬಿ. ಎಸ್. ತಲ್ವಾಡಿ

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೬೦೬೩, ೯೮೮೦೯೦೪೭೦೭

# ಅಧ್ಯಕ್ಷರ ನುಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸುತ್ತಿರುವ ಕಲಾವಿದರ ಪರಿಚಯ ಪುಸ್ತಕಕ್ಕೆ ಮುನ್ನುಡಿ ರೂಪದಲ್ಲಿ ಕೆಲವು ಮಾತುಗಳನ್ನು ಇಲ್ಲಿ ದಾಖಲಿಸಲು ಅಣಿಯಾಗುತ್ತಿದ್ದೇನೆ.

ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ. ಕಲಾವಿದರ ಪರ ಈ ಧೋರಣೆಯನ್ನು ಅಕಾಡೆಮಿಯ ಸರ್ವ ಸದಸ್ಯರ ಸಮ್ಮುಖದಲ್ಲಿ ಇಟ್ಟಾಗ ಎಲ್ಲರೂ ಉತ್ಸಾಹದಿಂದಲೇ ಬೆಂಬಲಿಸಿದರು. ಅದರ ಫಲವೇ ಈ "ಬೆಳ್ಳಿ ಮಾಲಿಕೆ."

ಯೋಜನೆಯ ಕಾರ್ಯಸ್ವರೂಪವನ್ನು ವ್ಯವಸ್ಥಿತವಾಗಿ ಯೋಜಿಸಿದಾಗ ಜಿಲ್ಲೆಗೊಬ್ಬೊಬ್ಬ ಲೇಖಕರನ್ನು ನಿಯೋಜಿಸಿ, ಅಕಾಡೆಮಿ ಕಾರ್ಯಪ್ರವೃತ್ತವಾಯಿತು. ಆದರೆ ಕೆಲವು ಜಿಲ್ಲೆಗಳ ಕಲಾವಿದರ ಪರಿಚಯ ಕೃತಿಗಳು ಮಾತ್ರ ಬಂದಿದ್ದು, ಅವುಗಳನ್ನು ಪ್ರಕಟಿಸುತ್ತಿದ್ದೇವೆ. ಕಲಾವಿದರ ಪರಿಚಯ ಪುಸ್ತಕಗಳನ್ನು ಹೊರತರುತ್ತಿರುವ ಸಂದರ್ಭದಲ್ಲಿ, ಈ ಮಾಲಿಕೆಗೆ ಅಕಾಡೆಮಿಯು ಪುಟಗಳ ಮಿತಿ ಹಾಕಿಕೊಳ್ಳುವುದರೊಂದಿಗೆ ಹಿರಿಯ ವಯಸ್ಸಿನ ಕಲಾವಿದರನ್ನು ಮಾತ್ರ ದಾಖಲಿಸುವ ಉದ್ದೇಶದಿಂದ ವಯಸ್ಸಿನ ಮಿತಿಯನ್ನೂ ಹಾಕಿಕೊಂಡಿತು. ಜೊತೆಗೆ ಈ ಮಿತಿಯೊಳಗಿನ ಎಲ್ಲಾ ಕಲಾವಿದರನ್ನೂ ಪರಿಚಯಿಸಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಕ್ಷಮೆ ಇರಲಿ. ಉಳಿದ ಕಲಾವಿದರ ಪರಿಚಯ ಮುಂದೆ ಅಕಾಡೆಮಿಯಿಂದ ಆಗಲಿ ಎಂಬ ನಿರೀಕ್ಷೆ ನನ್ನದು.

ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ನೆರವಾದ ಎಲ್ಲರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಅಕಾಡೆಮಿಯ ಎಲ್ಲ ಸದಸ್ಯರೂ ಉತ್ಸಾಹದಿಂದ ಪ್ರೋತ್ಸಾಹಿಸಿದ್ದಾರೆ. ಕೆಲವು ಜಿಲ್ಲೆಯ ಕಲಾವಿದರ ಮಾಹಿತಿಯನ್ನು ಲೇಖಕರು ಬರೆದುಕೊಟ್ಟಿರುತ್ತಾರೆ. ಮುದ್ರಣದ ಹೊಣೆಗಾರಿಕೆಯನ್ನು ಶ್ರೀ ಗವೀಶ ಹಿರೇಮಠ ಎಚ್ಚರದಿಂದ ನಿರ್ವಹಿಸಿದ್ದಾರೆ. ಯೋಜನೆ ಪ್ರಸ್ತಾಪದ ಹಂತದಲ್ಲಿದ್ದಾಗ ರಿಜಿಸ್ಟ್ರಾರ್ ಆಗಿದ್ದ ಶ್ರೀ ಎಂ. ಮುನಿರಾಜು ಅವರು, ಕಾರ್ಯರೂಪಕ್ಕೆ ಬರುವಾಗ ರಿಜಿಸ್ಟ್ರಾರ್ ಆಗಿರುವ ಶ್ರೀ ಬಿ. ಎನ್. ಪರಡ್ಡಿ ಅವರೂ, ಕಛೇರಿಯ ಸಿಬ್ಬಂದಿ ವರ್ಗದವರಾದ ಶ್ರೀ ಹೆಚ್. ಪ್ರಕಾಶ್, ಶ್ರೀಮತಿ ಎಂ. ನಾಗರತ್ನ, ಶ್ರೀ ಶಿವಲಿಂಗಯ್ಯ ಇವರುಗಳು ಎಲ್ಲಾ ಹಂತಗಳಲ್ಲಿಯೂ ನೆರವಾಗಿದ್ದಾರೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು.

ಅಕಾಡೆಮಿಯ ಎಲ್ಲ ಪ್ರಕಟಣೆಗಳನ್ನು ಆದರದಿಂದ ಬರಮಾಡಿಕೊಂಡಂತೆ ಕಲಾವಿದರ ಪರಿಚಯ ಪುಸ್ತಕಗಳನ್ನು ಓದುಗರು ಬರಮಾಡಿಕೊಳ್ಳುತ್ತಾರೆಂಬ ಭರವಸೆ ನನ್ನದು.

ದಿನಾಂಕ : ೧೬-೧-೨೦೦೮ **ಕೆರೆಮನೆ ಶಂಭು ಹೆಗಡೆ**

ಬೆಂಗಳೂರು ಅಧ್ಯಕ್ಷರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಬೆಳ್ಳಿಮಾಲಿಕೆಗೆ ಬಂಗಾರದ ತೋರಣ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ 25 ವರ್ಷ ತುಂಬಿದ್ದರಿಂದ ಬೆಳ್ಳಿಹಬ್ಬ ಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಅಧ್ಯಕ್ಷರ ಸಂಕಲ್ಪ, ಸದಸ್ಯರ ಹುಮ್ಮಸ್ಸಿನ ಕಾರ್ಯತತ್ಪರತೆ ಬೆಳ್ಳಿಹಬ್ಬಕ್ಕೆ ಹೊಸ ಮೆರುಗು ತಂದಿದೆ. ಹೊರಗಡೆ ಅಕಾಡೆಮಿಯ ಕಾರ್ಯಕಲಾಪಗಳ ಸಾಧನೆ ಬಗ್ಗೆ ಮಾತನಾಡಿದ್ದು ಕೇಳಿದಾಗ ಹೆಮ್ಮೆ ಎನಿಸುತ್ತದೆ.

25 ವರ್ಷಗಳ ಹಿಂದಿನ ಪುಟಗಳನ್ನು ತಿರುಗಿಸಿದಾಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿ ಅನೇಕ ಸಮಸ್ಯೆಗಳ ನಡುವೆಯೂ ಸಾಧಿಸಿ, ಅಕಾಡೆಮಿಗೊಂದು ರೂಪ ಕೊಟ್ಟು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟ ದಿ : ಶ್ರೀ ಹೆಚ್. ಎಲ್. ನಾಗೇಗೌಡ ಅವರ ಸ್ಮರಣೆ ಅಗತ್ಯವಾದುದು. ಮುಂದೆ ದಿ. ಡಾ. ಎಸ್. ಕೆ. ಕರೀಂಖಾನ್, ದಿ : ಡಾ. ಜೀ ಶಂ. ಪರಮಶಿವಯ್ಯ, ಡಾ. ಕಾಳೇಗೌಡ ನಾಗವಾರ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ. ಹಿ. ಶಿ. ರಾಮಚಂದ್ರೇಗೌಡ ಈ ವಿದ್ವಾಂಸರುಗಳ ಸಾಂದರ್ಭಿಕ ಸಾಧನೆಗಳು, ಪ್ರಕಟಣೆಗಳು, ಅಕಾಡೆಮಿಯನ್ನು ಹೊಸದಿಕ್ಕಿನತ್ತ ಬೆಳೆಸುವಲ್ಲಿ ಪ್ರೇರಕವಾಗಿವೆ. ಇವರೆಲ್ಲರ ಸಹಾಯದಿಂದ ಅಕಾಡೆಮಿ ಇಂದು ಸಶಕ್ತವಾಗಿ ಬೆಳೆದಿದೆಯೆಂದು ಭಾವಿಸುತ್ತೇನೆ ಮತ್ತು ಈ ಎಲ್ಲ ಮಹನೀಯರನ್ನು ಬೆಳ್ಳಿಹಬ್ಬದ ಆಚರಣೆಯ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

25 ವರ್ಷಗಳ ಅಕಾಡೆಮಿಯ ಸಾಧನೆಗಳ ಬಗ್ಗೆ ನಮಗೆ ತೃಪ್ತಿ ಇದೆ. ಇದುವರೆವಿಗೆ ನಾಡಿನಲ್ಲಿ, ಹೊರನಾಡಿನಲ್ಲಿ ಜನಪದ ಸಾಹಿತ್ಯ, ಕಲೆ, ಕಲಾವಿದರನ್ನು ಕುರಿತು ನಡೆಸಿದ ವಿಚಾರ ಸಂಕಿರಣಗಳು, ಚರ್ಚೆಗಳು, ಶಿಬಿರಗಳು, ಪ್ರದರ್ಶಿಸಿದ ಕಲೆಗಳು ಜಾನಪದದ ಬೆಳವಣಿಗೆಗೆ ಕಾರಣವಾಗಿವೆ. ನಾಡಿನ, ಹೊರನಾಡಿನ ವಿದ್ವಾಂಸರನ್ನು, ಕಲಾವಿದರನ್ನು

ಗುರುತಿಸಿ, ಅವರ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ಪಾರಿತೋಷಕ ನೀಡಿ ಗೌರವಿಸುತ್ತಾ ಬಂದಿದೆ.

ಅಕಾಡೆಮಿಯ ಇಡೀ ಸಾಧನೆಗೆ ಹಿಂದಿನ ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್ ಹಾಗೂ ಅಕಾಡೆಮಿಯ ಸಿಬ್ಬಂದಿಗಳ ಪರಿಶ್ರಮವಿದೆ. ಸರಕಾರ, ಸಂಘ–ಸಂಸ್ಥೆಗಳ ಸಹಕಾರಗಳನ್ನು ನಾವು ಮರೆಯುವಂತಿಲ್ಲ.

"ಜಾನಪದ ತಲೆಮಾರು" ಮಾಲಿಕೆಯಲ್ಲಿ ನಾಡಿನ ವಿದ್ವಾಂಸರ, ತಜ್ಞರ ಬದುಕು, ಸಾಧನೆ, ಕೊಡುಗೆಗಳನ್ನೊಳಗೊಂಡಂತೆ ಅವರ ಪರಿಚಯದ ಲೇಖನಗಳನ್ನು ಪ್ರಕಟಿಸಿ ನೂರಾರು ಜನರನ್ನು ದಾಖಲಿಸಿದೆ.

ಜೊತೆಗೆ ಜಾನಪದ ಕಲೆ ಸಾಹಿತ್ಯ ಕುರಿತು ಮೌಲಿಕ ಗ್ರಂಥಗಳನ್ನು ಹೊರತರುತ್ತಾ ಪ್ರಕಟಣೆಯ ಕಾರ್ಯದಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತಲೇ ಬಂದಿರುವುದು ಸಮಾಧಾನದ ಸಂಗತಿಯಾಗಿದೆ.

ನಮ್ಮ ಜನಪದ ಕಲೆ ಸಂಸ್ಕೃತಿ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಪ್ರತಿಭಾನ್ವಿತ ಕಲಾವಿದರ ಪರಿಚಯ ಪುಸ್ತಕ ಬರಬೇಕೆನ್ನುವ ಆಲೋಚನೆ ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಶ್ರೇಷ್ಠ ಪ್ರತಿಭಾನ್ವಿತ ಯಕ್ಷಗಾನ ಕಲಾವಿದರು, ನಮ್ಮ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಕೆರೆಮನೆ ಶಂಭು ಹೆಗಡೆಯವರ ಅಧ್ಯಕ್ಷರ ಅವಧಿಯಲ್ಲಿ ಬಂದದ್ದು ಸಮಂಜಸವಾದದ್ದು. ಅಧ್ಯಕ್ಷರು ಸ್ವತಃ ಕಲಾವಿದರಾಗಿದ್ದರಿಂದಲೇ ಕಲಾವಿದರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಅವರಿಗಾಗಿ ಹತ್ತಾರು ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುವತ್ತ ಈಗ ಸಮಗ್ರ ನಾಡಿನ ಕಲಾವಿದರ ಪರಿಚಯ ಪುಸ್ತಕ ತರುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

ನಾಡಿನ ಎಲ್ಲಾ ಜಿಲ್ಲೆಗಳಿಂದ ಆಸಕ್ತಿಯುಳ್ಳ ಲೇಖಕರನ್ನು ಕರೆಯಿಸಿ ಗ್ರಂಥದ ರೂಪು–ರೇಷೆಯ ಬಗ್ಗೆ, ಪುಟಗಳ ಸಂಖ್ಯೆ ಬಗ್ಗೆ ಸಭೆಯಲ್ಲಿ ತಿಳಿಸಿ, ಹಸ್ತಪ್ರತಿ ಕಳುಹಿಸಲು ಸಾಕಷ್ಟು ಸಮಯ ನೀಡಲಾಯಿತು. ಆದರೂ ಕೆಲವು ಜಿಲ್ಲೆಗಳ ಲೇಖಕರು ಕೊನೆಯವರೆಗೂ ಹಸ್ತಪ್ರತಿ ಕಳಿಸದಿದ್ದದು ನಿರಾಶೆಯನ್ನುಂಟುಮಾಡಿದೆ. ಬಂದ ಹಸ್ತಪ್ರತಿಗಳನ್ನೆಲ್ಲಾ ಪರಿಶೀಲಾ ಸಮಿತಿ ಪರಿಶೀಲಿಸಿ, ತಕ್ಷಣ ಅಕಾಡೆಮಿಯು ಮುದ್ರಣಕಾರ್ಯ ಕೈಗೆತ್ತಿಕೊಂಡು 10 ಜಿಲ್ಲಾ ಕಲಾವಿದರ ಪರಿಚಯ ಪುಸ್ತಕ ಹಾಗೂ 3 ವಿಶೇಷ ಗ್ರಂಥಗಳು ಸೇರಿದಂತೆ ಒಟ್ಟು 13 ಪುಸ್ತಕಗಳನ್ನು ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಕೊನೆಯದಾಗಿ ಕೃತಜ್ಞತೆಯ ಒಂದೆರೆಡು ಮಾತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಐ. ಎಂ. ವಿಠ್ಠಲಮೂರ್ತಿಯವರನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಅವರು ಈ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕೆ ಆಸಕ್ತಿ ತೋರಿಸಿ,

ಹೆಚ್ಚಿನ ಧನ ಸಹಾಯ ಮಾಡಿದ್ದರಿಂದಲೇ ಪ್ರಕಟಣೆಗಳು, ವಿಶೇಷ ಕಾರ್ಯಕ್ರಮಗಳು ಜರುಗುತ್ತಿವೆ. ಅವರಿಗೆ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಸಮಯಕ್ಕೆ ಸರಿಯಾಗಿ ಸಹಾಯ, ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮಾನ್ಯ ಶ್ರೀ ಮನು ಬಳಿಗಾರ ಅವರಿಗೂ ಅಕಾಡೆಮಿ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗೊತ್ತುಪಡಿಸಿದ ಅವಧಿಯಲ್ಲಿ ತಮ್ಮ ತಮ್ಮ ಜಿಲ್ಲೆಯ ಹಿರಿಯ ಹಾಗೂ ಪ್ರತಿಭಾನ್ವಿತ ಕಲಾವಿದರ ಮಾಹಿತಿ ಸಂಗ್ರಹಿಸಿ, ಹಸ್ತಪ್ರತಿ ಸಿದ್ಧಪಡಿಸಿಕೊಟ್ಟ ಲೇಖಕರಿಗೆ, ಆಗಾಗ ಸಭೆ ಸೇರಿ ಈ ಪ್ರಕಟಣಾ ಕಾರ್ಯಕ್ಕೆ ಚಾಲನೆ ನೀಡಿ ಸಹಕರಿಸಿದ ಪ್ರಕಟಣಾ ಸಮಿತಿ ಅಧ್ಯಕ್ಷರು, ಸದಸ್ಯರಿಗೆ, ಪ್ರಕಟಣೆಯ ಜವಾಬ್ದಾರಿ ಹೊತ್ತು ಎಲ್ಲ ಪುಸ್ತಕಗಳ ವಿನ್ಯಾಸ, ಕರಡು ತಿದ್ದುವಿಕೆ, ಮುದ್ರಣ ಸಮೀಕ್ಷೆಯ ಕಾರ್ಯ ನಿರ್ವಹಿಸಿದ ಅಕಾಡೆಮಿ ಸದಸ್ಯರಾದ ಶ್ರೀ ಗವೀಶ್ ಹಿರೇಮಠ ಅವರಿಗೆ, ಕಡಿಮೆ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪ್ರಭು ಗ್ರಾಫಿಕ್ಸ್ ಮಾಲೀಕರಾದ ಶ್ರೀ ಶಾಂತವೀರ ಜಂಗಮನಿಯವರಿಗೆ ಹಾಗೂ ಅಕಾಡೆಮಿಯ ಪ್ರಕಟಣೆಗಳನ್ನು ಆಸಕ್ತಿಯಿಂದ ಬರಮಾಡಿಕೊಳ್ಳುವ ಸಹೃದಯಿಗಳಿಗೆ ಅನಂತ ಕೃತಜ್ಞತೆಗಳು.

**– ಬಿ. ಎನ್. ಪರಡ್ಡಿ**

ರಿಜಿಸ್ಟ್ರಾರ್,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು.

# ಪ್ರಸ್ತಾವನೆ

●

ದಾವಣಗೆರೆ, ಕರ್ನಾಟಕ ಹೃದಯ ಭಾಗದಲ್ಲಿರುವ ಸ್ಥಳ. ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ೨೬೫ ಕಿ.ಮೀ. ದೂರದಲ್ಲಿದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಪ್ರದೇಶಗಳ ಬೆಸುಗೆಯಾಗಿಯೂ ದಾವಣಗೆರೆ ನಿಂತಿದೆ. ಹತ್ತು ತಾಲೂಕುಗಳನ್ನು ಒಳಗೊಂಡ ಚಿತ್ರದುರ್ಗ ಈ ಹಿಂದೆ ದಾವಣಗೆರೆಯನ್ನು ತನ್ನಲ್ಲಿಯೇ ಅಳವಡಿಸಿಕೊಂಡಿತ್ತು. ಆದರೆ ಒಂದು ದಶಕಗಳಿಂದೀಚೆಗೆ ಚಿತ್ರದುರ್ಗದ ಹರಿಹರ, ದಾವಣಗೆರೆ, ಜಗಳೂರು ತಾಲೂಕುಗಳು, ಶಿವಮೊಗ್ಗದ ಹೊನ್ನಾಳಿ ಮತ್ತು ಚನ್ನಗಿರಿ ಹಾಗೂ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕುಗಳನ್ನು ಪ್ರತ್ಯೇಕಗೊಳಿಸಿ ಈ ಇಲ್ಲ ತಾಲೂಕನ್ನು ಒಳಗೊಂಡ ದಾವಣಗೆರೆ ಜಿಲ್ಲೆಯನ್ನಾಗಿ ರಚಿಸಲಾಗಿದೆ. ಹಾಗಾಗಿ ಇಲ್ಲಿನ ಭೌಗೋಳಿಕ ವಿನ್ಯಾಸ, ಸಾಂಸ್ಕೃತಿಕ ವಿವಿಧತೆ, ನಂಬಿಕೆ, ಸಂಪ್ರದಾಯ, ಆಚಾರ-ವಿಚಾರಗಳಲ್ಲೂ ವೈವಿಧ್ಯತೆಗಳಿಂದ ಕೂಡಿದೆ.

ದಾವಣಗೆರೆ ಜಿಲ್ಲೆಯ ಜನಪದ ಸಂಸ್ಕೃತಿಯೂ ಅನನ್ಯವಾದುದು. ಗೊರವರು, ವೀರಗಾಸೆ, ನಂದಿಧ್ವಜ, ಚೌಡಿಕೆಯವರು, ಗಣೆಯವರು, ಡೊಳ್ಳಿನವರು, ತಮಟೆ, ಬಯಲಾಟ, ಯಕ್ಷಗಾನ ಈ ಪ್ರಕಾರಗಳ ಕಲಾವಿದರು ಈ ಭಾಗದಲ್ಲಿ ವ್ಯಾಪಕವಾಗಿದ್ದಾರೆ. ವಿರಳವಾಗಿ ಸೂತ್ರದ, ತೊಗಲುಗೊಂಬೆ ಕಲಾವಿದರೂ ಹರಪನಹಳ್ಳಿ ಭಾಗದಲ್ಲಿ ಕಂಡುಬರುತ್ತಾರೆ.

ಡಾ. ಎಂ. ಜಿ. ಈಶ್ವರಪ್ಪ, ಶ್ರೀ ಕುಂ. ಬಾ. ಸದಾಶಿವಪ್ಪ, ಪ್ರೊ. ಕಲಮರಹಳ್ಳಿ ಮಲ್ಲಿಕಾರ್ಜುನ ಮೊದಲಾದ ಜಾನಪದ ವಿದ್ವಾಂಸರೂ ಈ ಭಾಗದಲ್ಲಿ ಸಂಶೋಧನಾ ಕಾರ್ಯ ನಡೆಸಿದ್ದಾರೆ. ಸೂತ್ರದ ಗೊಂಬೆ ಕಲೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಮೆರೆಸಿದ ಹಲುವಾಗಲು ದೇವೇಂದ್ರಪ್ಪ, ಕರ್ನಾಟಕದ ದೊಡ್ಡಾಟ ಯಕ್ಷಗಾನ ಪ್ರಕಾರಕ್ಕೆ ಹೊಸ ಆಯಾಮವನ್ನಿತ್ತ ರೇವಣಸಿದ್ದಪ್ಪ ಅವರಂಥ ಅಪೂರ್ವ ಕಲಾವಿದರೂ ಈ ಜಿಲ್ಲೆಯ ಮರೆಯಲಾರದ ಜಾನಪದ ಸಂಪನ್ನರು. ಹೊನ್ನಾಳಿ, ಚನ್ನಗಿರಿ ತಾಲೂಕುಗಳಲ್ಲಿ ಡೊಳ್ಳು ಕಲಾವಿದರು ವ್ಯಾಪಕವಾಗಿ ಕಂಡುಬರುತ್ತಾರೆ.

ಈ ಬಗೆಯ ಅಪೂರ್ವ ಜನಪದ ಕಲಾವಿದರನ್ನು ಕುರಿತ ಪರಿಚಯಾತ್ಮಕ ವಿವರವೇ ಈ ಪುಸ್ತಕದ ಆಶಯ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕದ ಜಿಲ್ಲಾವಾರು ಕಲಾವಿದರನ್ನು ಪರಿಚಯಿಸುವ ಮಹತ್ವದ ಯೋಜನೆಯನ್ನು ರೂಪಿಸಿ ಒಂದೊಂದು ಜಿಲ್ಲೆಯಿಂದ ಜಾನಪದ ಪ್ರಕಾರದಲ್ಲಿ ಸಾಧನೆ ಮಾಡಿರುವ, ಮಾಡುತ್ತಿರುವ ಅರವತ್ತರ ವಯೋಮಿತಿಯ ಐವತ್ತು ಕಲಾವಿದರನ್ನು ಪರಿಚಯಿಸುವ ಪುಸ್ತಕವನ್ನು ಪ್ರಕಟಿಸಲು ಉದ್ದೇಶಿಸಿದೆ. ಹೀಗೆ ಮಾಡುವುದರಿಂದ ಕೂಡ ಹೊಂಬಾಳೆಯಂತೆ, ಬಾಡಿ ಹೋಗಬಹುದಾದ ಕಲಾವಿದರ ಪರಿಚಯ ದಾಖಲೆಯ ಮೂಲಕ ಮುಂದಿನ ತಲೆಮಾರಿನವರಿಗೆ ಸಾಂಸ್ಕೃತಿಕ ವಿನಿಮಯ, ಅಧ್ಯಯನಕ್ಕೆ ಪ್ರೇರಕವಾಗಲೆಂಬ ಆಶಯದಿಂದ ಈ ಪುಸ್ತಕ ರಚಿಸಲಾಗಿದೆ. ಇಲ್ಲಿ ಅರವತ್ತು ವರ್ಷ ವಯಸ್ಸಿನ ಐವತ್ತಾರು ಕಲಾವಿದರನ್ನು ಪರಿಚಯಿಸಲಾಗಿದೆ. ಇದರಲ್ಲಿ ಕೆಲವರು ಈಗ ದಿವಂಗತರು, ಆದರೂ ಅವರ ಜಾನಪದೀಯ ಕೊಡುಗೆ ಅನನ್ಯ.

ಜನಪದ ಕಲಾವಿದರ ಪರಿಚಯ, ಮಾಹಿತಿ ಸಂಗ್ರಹ ನಿಜಕ್ಕೂ ಶ್ರಮ ಸಾಧ್ಯವಾದ ಕೆಲಸ. ನಮ್ಮ ಜನಪದರು ತಮ್ಮ ಬಗೆಗೆ ಒಂದಿಷ್ಟು ಮಾಹಿತಿ ನೀಡಲೂ ತಂಡದ ನಾಯಕರ ಒಪ್ಪಿಗೆ ಪಡೆಯಬೇಕೆಂಬ ಮುಗ್ಧತೆಗೆ ಒಳಗಾಗುತ್ತಿರುವುದು ಆಶ್ಚರ್ಯಕರ ಸಂಗತಿ. ಇಂಥ ಹಲವು ಮಿತಿಗಳ ಒಳಗೂ ಅಕಾಡೆಮಿಯ ನಿಯಮದಂತೆ ಇಲ್ಲಿ ಕಲಾವಿದರನ್ನು ಪರಿಚಯ ಮಾಡಿಕೊಡಲಾಗಿದೆ. ಕೆಲವರು ಬರೆದು ಕಳುಹಿಸಿ, ಮಾಹಿತಿ ನೀಡುವಲ್ಲಿ ನೆರವಾಗಿದ್ದಾರೆ. ಚಿತ್ರದುರ್ಗ ಆಕಾಶವಾಣಿ, ದಿನಪತ್ರಿಕೆಗಳೂ ಮಾಹಿತಿ ನೀಡುವಲ್ಲಿ ಸಹಕರಿಸಿವೆ. ಸಂಪರ್ಕದ ಕೊರತೆ, ಮಾಹಿತಿಯ ಅಲಭ್ಯದಿಂದಾಗಿ ಕೆಲವರು ಬಿಟ್ಟುಹೋಗಿರಲೂಬಹುದು. ಆ ಕೊರತೆಯನ್ನು ಮುಂದಿನ ದಿನಗಳಲ್ಲಿ ತುಂಬಿಕೊಳ್ಳಬಹುದು ಅಂದಿಕೊಂಡಿರುವೆನು.

ಬಂದ ಮಾಹಿತಿ ಪತ್ರಗಳನ್ನು ಒಪ್ಪವಾಗಿ ಜೋಡಿಸಿ, ನಿರೂಪಣೆಯಲ್ಲಿ ನನಗೆ ಸಹಕರಿಸಿದವರು ನನ್ನ ಮಕ್ಕಳಾದ ಚಿ. ಅಕ್ಷತ್ ಯಣ್ಣೆಕಟ್ಟೆ ಮತ್ತು ಯಶಸ್ವಿ ಯಣ್ಣೆಕಟ್ಟೆ

ಅವರ ಅಕ್ಕರೆಯ ಸಹಕಾರಕ್ಕೆ ನನ್ನ ನೆನಕೆಗಳು ಸಲ್ಲುತ್ತವೆ. ಈ ಬಗೆಯ ಯೋಜನೆಯನ್ನು ನನಗೆ ಒಪ್ಪಿಸಿದ ಜನಪದ ಅಕಾಡೆಮಿಗೆ ನನ್ನ ಕೃತಜ್ಞತೆಗಳು.

ನವೆಂಬರ್, ೨೦೦೭

ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ,
ಪ್ರಾಧ್ಯಾಪಕ ಮತ್ತು ಪಿಎಚ್.ಡಿ. ಮಾರ್ಗದರ್ಶಕ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ.

# ಪರಿವಿಡಿ


| | | |
|---|---|---|
| ೧. | ದೊಡ್ಡಾಟದ ರೇವಣಸಿದ್ದಪ್ಪ | ೧ |
| ೨. | ಅಜ್ಜಣ್ಣ ಬಡಿಗೇರ | ೩ |
| ೩. | ಚೌಡಿಕೆ ರಾಮಣ್ಣ | ೫ |
| ೪. | ಎಸ್. ಕೆ. ಗೋವಿಂದಪ್ಪ | ೭ |
| ೫. | ಸಾರಂಗಿ ರಾಮನಾಯಕ | ೯ |
| ೬. | ಸರಸ್ವತಮ್ಮ | ೧೧ |
| ೭. | ಯುಗಧರ್ಮ ರಾಮಣ್ಣ | ೧೩ |
| ೮. | ರಂಗಮ್ಮ ಸೂರಗೊಂಡನಹಳ್ಳಿ | ೧೬ |
| ೯. | ಗೌಡರ ನಾಗಜ್ಜಿ | ೧೮ |
| ೧೦. | ಮಾಳಗಿ ಬಸಪ್ಪ | ೨೦ |
| ೧೧. | ಕಡಬಗೇರಿ ಉಚ್ಚಂಗಪ್ಪ | ೨೨ |
| ೧೨. | ಹಲುವಾಗಲು ದೇವೇಂದ್ರಪ್ಪ | ೨೪ |
| ೧೩. | ಬೇಗಾರರ ಎಲಿಸವ್ವ | ೨೭ |
| ೧೪. | ಪಲವನಹಳ್ಳಿ ಹನುಮಂತಪ್ಪ | ೨೯ |
| ೧೫. | ಗೊಂಡೇರ ಗೋವಿಂದಪ್ಪ | ೩೧ |
| ೧೬. | ಕುಂ. ಬಾ. ಸದಾಶಿವಪ್ಪ | ೩೩ |
| ೧೭. | ಮಾಳ್ಗಿ ಚನ್ನಬಸಪ್ಪ | ೩೫ |
| ೧೮. | ಜಿ. ಮಹಾಂತೇಶ | ೩೭ |
| ೧೯. | ಗೂಡಾಳ ಜಯಪ್ಪ | ೩೯ |
| ೨೦. | ಕೆ. ಬಿ. ಷಣ್ಮುಖಪ್ಪ | ೪೧ |
| ೨೧. | ಟಿ. ಹಾಲಪ್ಪ | ೪೩ |
| ೨೨. | ಗೊಂದಳಿ ದುರುಗಪ್ಪ | ೪೫ |
| ೨೩. | ಬಿ. ಎಸ್. ಸ್ವಾಮಿನಾಥನ್ | ೪೭ |
| ೨೪. | ಟಿ. ಗಂಗಾಧರಪ್ಪ | ೪೯ |
| ೨೫. | ಶಿವನಾಗಪ್ಪ | ೫೧ |

೨೬. ಪರಶುರಾಮಪ್ಪ . . . . ೫೩
೨೭. ಡಿ. ಕೊಳ್ಳಪ್ಪ . . . . ೫೫
೨೮. ಬಿಳಿಚೋಡು ಕರಿಯಪ್ಪ . . . . ೫೭
೨೯. ಫಕೀರಪ್ಪ . . . . ೫೯
೩೦. ಪಿರೀಬಾಯಿ . . . . ೬೧
೩೧. ಸೋಬಾನೆ ರತ್ನಮ್ಮ . . . . ೬೩
೩೨. ಬಸವರಾಜು ಎಚ್. ಬಿ. . . . . ೬೫
೩೩. ಎಚ್. ಬಸಪ್ಪ . . . . ೬೭
೩೪. ತಂಬೂರಿ ಉಮಾನಾಯಕ . . . . ೬೯
೩೫. ಡೊಳ್ಳಿನ ರಾಮಪ್ಪ . . . . ೭೧
೩೬. ವೀರಗಾಸೆ ಮಲ್ಲಪ್ಪ . . . . ೭೩
೩೭. ಖಡ್ಗದ ಸಿದ್ಧಪ್ಪ . . . . ೭೫
೩೮. ಬಸಪ್ಪ . . . . ೭೭
೩೯. ಪಿ. ಆರ್. ಹನುಮಂತಪ್ಪ . . . . ೭೯
೪೦. ಕೋಲುಕಾರ ಭೀಮಪ್ಪ . . . . ೮೧
೪೧. ಚೌಡಿಕೆ ಬಸಪ್ಪ . . . . ೮೩
೪೨. ಗೊರಪ್ಪರ ಲಕ್ಕಮ್ಮ . . . . ೮೫
೪೩. ದೊಡ್ಡಮಲ್ಲಪ್ಪ . . . . ೮೭
೪೪. ಗಂಗಾಧರಯ್ಯ . . . . ೮೯
೪೫. ಶಾರದಮ್ಮ . . . . ೯೧
೪೬. ಲಾವಣಿ ಬುಡನ್ ಸಾಬ್ . . . . ೯೩
೪೭. ಚಿಕ್ಕಸಿದ್ದಪ್ಪ . . . . ೯೫
೪೮. ಲಕ್ಷ್ಮಪ್ಪ . . . . ೯೭
೪೯. ಮಹೇಶ್ವರಪ್ಪ . . . . ೯೯
೫೦. ಎಂ. ಎಸ್. ವೀರಪ್ಪ . . . . ೧೦೧
೫೧. ಜಿ. ಆರ್. ವೀರಣ್ಣ . . . . ೧೦೩
೫೨. ನರಸಿಂಹಮೂರ್ತಿ . . . . ೧೦೫
೫೩. ಪಾಪಮ್ಮ . . . . ೧೦೭
೫೪. ದೇವಿಕೆರೆ ಭೀಮಕ್ಕ . . . . ೧೦೯
೫೫. ಸಿ. ಮಲ್ಲಿಕಾರ್ಜುನ . . . . ೧೧೧
೫೬. ಮಲ್ಲಪ್ಪ ಅಸಗೋಡು . . . . ೧೧೩
೫೭. ಮಾಹಿತಿದಾರರ ಪರಿಚಯ . . . . ೧೧೫

# ದೊಡ್ಡಾಟದ ರೇವಣ ಸಿದ್ಧಪ್ಪ

ಯಕ್ಷಗಾನದ ಸ್ವರೂಪವನ್ನು ಹೊಂದಿ, ಅದಕ್ಕಿಂತ ಕೊಂಚ ಕುಣಿತ ಹಾಗೂ ಮಾತಿನ ಶೈಲಿಯಲ್ಲಿ ಭಿನ್ನರೂಪವಾಗಿರುವ ದೊಡ್ಡಾಟ ಉತ್ತರ ಕರ್ನಾಟಕ ಭಾಗದಲ್ಲಿ ಜನಪ್ರಿಯ ಕಲೆ. ತುಂಗಭದ್ರಾ ನದಿ ದಾಟಿ ಮುಂದೆ ಹೋದಂತೆಲ್ಲಾ, ಸಣ್ಣಾ, ದೊಡ್ಡಾಟದ ಪ್ರಭಾವ ವ್ಯಾಪಕವಾಗಿದೆ. ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ ಹಾಗೂ ಹಾಸನ ಜಿಲ್ಲೆಗಳಲ್ಲಿ ಮೂಡಲಪಾಯ ಯಕ್ಷಗಾನ ಜನಪ್ರಿಯ ಕಲೆ. ಇಂಥ ನೆಲದಲ್ಲಿ ಹುಟ್ಟಿ, ಮೂಡಲಪಾಯ ಹಾಗೂ ದೊಡ್ಡಾಟ ಈ ಎರಡೂ ಕಲಾ ಪ್ರಕಾರಗಳಲ್ಲಿ ಭಾಗವಂತಿಕೆ, ಹಿಮ್ಮೇಳ, ಸೂತ್ರಧಾರ, ಮೃದಂಗ ಕಲಾ ವಾದಕರಾಗಿಯೂ, ಕೆಲಸ ಮಾಡಿರುವ ಹಿರಿಯ ಕಲಾವಿದರು, ಶಾಮನೂರು ರೇವಣಸಿದ್ದಪ್ಪನವರು ೮೭ನೇ ವಯಸ್ಸಿಗೆ ಕಾಲಿಡುತ್ತಿರುವ ರೇವಣಸಿದ್ದಪ್ಪನವರ ವೃತ್ತಿ ಕ್ಷೌರಿಕ ಕಾಯಕ. ಕ್ಷೌರಿಕ ಕಾಯಕದೊಂದಿಗೆ ಕಲಾ ಬದುಕನ್ನು ಅದ್ಭುತವಾಗಿ ರೂಪಿಸಿಕೊಂಡಿರುವ ರೇವಣಸಿದ್ದಪ್ಪ, ಕಲಾ ಸಂಘಟಕರೂ ಹೌದು. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಈ ಭಾಗಗಳಲ್ಲಿ ಭಾಗವತರಾಗಿ ಚಿರ ಪರಿಚಿತರು. ದುಶ್ಯಾಸನ ಕಾಳಗ, ಶಶಿಕಲಾ ಪರಿಣಯ, ಚಿತ್ರಾಂಗದ, ಗದಾಯುದ್ಧ, ದಕ್ಷಯಾಗ, ಗಿರಿಜಾ ಕಲ್ಯಾಣ, ಈ ಮೊದಲಾದ ಯಕ್ಷಗಾನಗಳನ್ನು ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಜಿಲ್ಲೆಯಲ್ಲಿ ಕಲಿಸಿದ್ದಾರೆ. ಮೂಲತಃ ಕಲಾ ಪರಂಪರೆಯ ಇವರು ತಮ್ಮ ತಂದೆ ಸಿದ್ಧಪ್ಪನವರೂ ಕಲಾವಿದರೆ ಯಕ್ಷಗಾನದಲ್ಲಿ ಘೋರ ಪಾತ್ರಗಳಲ್ಲಿ ಅಭಿನಯ. ಇದೇ ಸಾಲು ಮಗನಿಗೂ ಬಂದಿದೆ. ವೃತ್ತಿ ಕ್ಷೌರಿಕಕ್ಕೆ ಧಕ್ಕೆ ಬಾರದ ಹಾಗೆ ಕಲೆಯನ್ನು ಬೆಳೆಸಬೇಕೆಂಬ ವರ್ತನೆಗೆ ವಿರುದ್ಧವಾಗಿ ಕಲೆಗಾಗಿ ಕಲೆಯನ್ನು ಹುಡುಕಿಕೊಂಡು ಹೊರಟವರು ರೇವಣ ಸಿದ್ದಪ್ಪನವರು ಇಂದಿಗೂ ಬಡತನದ ಬೇಗೆಯಿಂದ ಹೊರಬಂದಿಲ್ಲ. ಇಬ್ಬರು ಮಕ್ಕಳು, ಮೊಮ್ಮಕ್ಕಳೊಂದಿಗೆ ಕಲಾ ಪ್ರಪಂಚದ ಆಗು ಹೋಗುಗಳಿಗೆ ಧ್ವನಿಯಾಗುತ್ತಲೇ ನಿರ್ಲಿಪ್ತ

ಭಾವನೆಯೊಂದಿಗೆ ತಾಳ, ಮೃದಂಗದೊಂದಿಗೆ ಕಲಾ ಬದುಕನ್ನು ಸವೆಸುತ್ತಿರುವುದು ವಿಶೇಷವಾಗಿದೆ.

೧೯೮೩ರಲ್ಲಿ ಸಮುದಾಯ ತಂಡದವರು ಕೊಂಡಜ್ಜಿಯಲ್ಲಿ ಏರ್ಪಡಿಸಿದ್ದ 'ದೊಡ್ಡಾಟ' ಆಧುನಿಕ ರಂಗಭೂಮಿ ಅನ್ವಯ ಎಂಬ ಕಮ್ಮಟದಲ್ಲಿ ಶಿಬಿರದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿರುವ ರೇವಣಸಿದ್ದಪ್ಪನವರು, ಕಮ್ಮಟದಲ್ಲಿ ಶಿಬಿರಾರ್ಥಿಗಳಿಗೆ ಕಲಿಸಿದ ಸುಂದೋಪ ಸುಂದರ ಎಂಬ ಯಕ್ಷಗಾನವನ್ನು ಬೆಂಗಳೂರು ಚಂದನ ದೂರದರ್ಶನದಲ್ಲಿಯೂ ಪ್ರಸಾರ ಮಾಡಲಾಗಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರ ಯಕ್ಷಗಾನದ ಸಾಧನೆಯನ್ನು ಪರಿಗಣಿಸಿ ೧೯೮೭ರಲ್ಲಿ ಅಕಾಡೆಮಿ ಗೌರವ ನೀಡಿ ಪುರಸ್ಕರಿಸಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಸಿರಿಗೆರೆ, ಬಳ್ಳಾರಿ, ಹೊಸಪೇಟೆ, ಚಿತ್ರದುರ್ಗ, ಹಾವೇರಿಗಳಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಭಾಗವತರಾಗಿ ಕೆಲಸ ಮಾಡಿದ್ದಾರೆ. ಚಿತ್ರದುರ್ಗ ಜಿಲ್ಲಾ ಕಲೋತ್ಸವ ದಾವಣಗೆರೆ ಕನ್ನಡ ಸಾಹಿತ್ಯ ಪರಿಷತ್ತು ಇವರ ಕಲಾಸಾಧನೆಯನ್ನು ಮೆಚ್ಚಿ ಗೌರವಿಸಿವೆ.

**ಶಾಮನೂರು ರೇವಣಸಿದ್ಧಪ್ಪ,**
**ದಾವಣಗೆರೆ ತಾಲೂಕು.**

# ಅಜ್ಜಣ್ಣ ಬಡಿಗೇರ

ಬಡಗಿ ಕಾಯಕದೊಂದಿಗೆ ಕುಸ್ತಿ ಕಲೆಯಲ್ಲಿ ಅಪಾರ ಪಾಂಡಿತ್ಯ ಹೊಂದಿರುವ ಶ್ರೀ ಅಜ್ಜಣ್ಣ ಅತ್ಯುತ್ತಮ ಕಲಾವಿದರೂ ಹೌದು. ವಿಶೇಷವಾಗಿ ಯಕ್ಷಗಾನ ಬಯಲಾಟಗಳಲ್ಲಿ ಸ್ತ್ರೀಪಾತ್ರಗಳಿಗೆ ಅತ್ಯಂತ ಜನಪ್ರಿಯ ಕಲಾವಿದರೆಂದೇ ಹೆಸರಾದವರು. ಕೊಂಡಜ್ಜಿಯ ಬಡಿಗೇರ ಮನೆತನಕ್ಕೆ ಸೇರಿದ ಅಜ್ಜಣ್ಣ ಇಲ್ಲಿನ ಮೈಲಾರಲಿಂಗೇಶ್ವರ ದೇವಾಲಯದ ಅರ್ಚಕರೂ ಆಗಿದ್ದರು. ತಂದೆ ಶ್ರೀ ಬಡಿಗೇರ ಯಕ್ಷಗಾನ. ಜನಪದ ಗೀತಗಾಯನ ಇವುಗಳ ಜೊತೆಗೆ ಬಡಗಿ ಕಾಯಕದಿಂದ ಹಲವಾರು ರೈತೋಪಯೋಗಿ ಪರಿಕರಗಳನ್ನು ತಯಾರಿಸುತ್ತಿದ್ದರು. ಹಾಗಾಗಿ ರೈತರೊಂದಿಗೆ ಆತ್ಮೀಯ ಒಡನಾಟ, ಸಂಪರ್ಕ ಹೊಂದಿದ್ದರು. ಅಜ್ಜಣ್ಣ ಬಡಿಗೇರ ಅವರಿಗೆ ನಾಲ್ವರು ಮಕ್ಕಳು. ರೈತಾಪಿ ಬದುಕು, ಯಕ್ಷಗಾನ ಭಾಗವತರಾಗಿ, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ, ಹೊಸಪೇಟೆ, ಹರಪನಹಳ್ಳಿ, ಕೂಡ್ಲಿಗಿ ಈ ಭಾಗಗಳಲ್ಲಿ ಯಕ್ಷಗಾನ ಪ್ರಸಂಗಗಳನ್ನು ಕಲಿಸಿದರು.

ಭೀಮಾರ್ಜುನರ ಕಾಳಗ, ಶಶಿರೇಖಾ ಪರಿಣಯ, ಕಮಲಗಂಧಿ, ಕನಕಾಂಗಿ ಕಲ್ಯಾಣ, ಲಕ್ಷ್ಮೀ ಸ್ವಯಂವರ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಭಾಗವತ ಪ್ರಸಂಗಗಳು. ಇದಲ್ಲದೆ ಸಂಗ್ಯಾಬಾಳ್ಯಾ. ಜೋಕುಮಾರಸ್ವಾಮಿ ಈ ಮೊದಲಾದ ಸಣ್ಣಾಟಗಳಲ್ಲಿಯೂ ಆಸಕ್ತಿ. ಹರಪನಹಳ್ಳಿ, ಹೊಸಪೇಟೆ, ಕೊಂಡಜ್ಜಿ ಇಲ್ಲಿ ಈ ಪ್ರಸಂಗಗಳನ್ನು ಕಲಿಸಿದ್ದರು.

ಕೊಂಡಜ್ಜಿಯ ಸ್ಕೌಟ್ ಅಂಡ್ ಗೈಡ್ಸ್ ಇಲಾಖೆಯ ವತಿಯಿಂದ ನಡೆಯುತ್ತಿದ್ದ ತರಬೇತಿ ಕಾರ್ಯಕ್ರಮದಲ್ಲಿ ಸ್ವಯಂಸೇವಕರಾಗಿ ಹಲವು ವರ್ಷ ಸೇವೆ ಮಾಡಿದ್ದಾರೆ. ಸಮಾರೋಪ ಮತ್ತು ಮುಕ್ತಾಯ ಸಮಾರಂಭಗಳಲ್ಲಿ ಇವರ ಹಾಡುಗಾರಿಕೆ ಎಲ್ಲರಿಗೂ ಇಷ್ಟವಾಗುತ್ತಿತ್ತು.

ಬಡಗೇರ ಅವರು ಒಳ್ಳೆಯ ಕುಸ್ತಿಪಟುಗಳೂ ಆಗಿದ್ದರು. ಇಲ್ಲಿನ ಮೈಲಾರಲಿಂಗೇಶ್ವರ ದೇವಾಲಯದ ಆವರಣದಲ್ಲಿ ಕುಸ್ತಿಪಡೆಯೊಂದನ್ನು ತಯಾರಿಸಿ, ತಾವೇ ಮಾಸ್ತರರಾಗಿಯೂ ಕಾಯಕ ಮಾಡಿದ್ದಾರೆ. ಹರಿಹರದ ಶ್ರೀ ಬೀರಲಿಂಗೇಶ್ವರ ಕುಸ್ತಿ ತಂಡದಲ್ಲಿಯೂ ಇವರು ಭಾಗವಹಿಸಿದ್ದುಂಟು. ಕುಸ್ತಿ, ದೇವರ ಪೂಜೆ ಕೊನೆಗೆ ಅಭಿನಯ, ಕಲಾ ಸಂಘಟನೆ ಹೀಗೆ ಬಹುಮುಖಿ ಕಲಾಸಾಧನೆ, ಸಂಘಟನೆಯಲ್ಲಿ ತೊಡಗಿಕೊಂಡಿದ್ದ ಬಡಿಗೇರ ಅಜ್ಜಣ್ಣ ಈಗ ದಿವಂಗತರು. ಇವರ ಕಲಾಸಾಧನೆಯನ್ನು ಮೆಚ್ಚಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೯ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಚಿತ್ರದುರ್ಗ ಜಿಲ್ಲಾಡಳಿತ, ಹರಿಹರ ತಾಲೂಕು ಆಡಳಿತ ಹಲವು ಸಾಂಸ್ಕೃತಿಕ ಸಂದರ್ಭಗಳಲ್ಲಿ ಇವರನ್ನು ಗೌರವಿಸಿದೆ.

# ಚೌಡಿಕೆ ರಾಮಣ್ಣ

ಚೌಡಿಕೆ ರಾಮಣ್ಣನವರು ಸವದತ್ತಿ ರೇಣುಕಾ ಎಲ್ಲಮ್ಮನ ಭಕ್ತರು. ದಾವಣಗೆರೆ ಸಮೀಪದ ಗಾಂಧಿನಗರದ ವಾಸಿಗಳು. ೮೬ ವರ್ಷದ ಹಿರಿಯ ಜೀವ. ಇಂದಿಗೂ ಭಿಕ್ಷಾಟನೆಯೇ ಜೀವನಾಧಾರ. ಆದರೂ ಚೌಡಿಕೆ ಕಲೆಗೆ ವಿಸ್ತೃತ ರೂಪ ನೀಡಿದ ಮಧುರ ಕಂಠದ ಗಾಯಕ. ಅಂಥ ಕಲಾವಿದನಾದರೂ ಆತನೊಳಗಣ ಕಲಾಸರಸ್ವತಿ ಆತನಿಗೆ ಸಾಟಿ ಇಲ್ಲದಂತೆ ಬೆಳೆಸಿದ್ದಾಳೆ.

ಚೌಡಿಕೆ ಒಂದು ವಾದ್ಯಪ್ರಕಾರ. ಶಕ್ತಿದೇವತೆಯ ಮಹಿಮೆ, ಪವಾಡಗಳನ್ನು ಕೊಂಡಾಡುವಾಗ ಹಿನ್ನೆಲೆ ವಾದ್ಯವಾಗಿ ಸಂಗೀತಕ್ಕೆ ಪೂರಕವಾಗಿ ಚೌಡಿಕೆಯನ್ನು ಬಳಸಿಕೊಳ್ಳಲಾಗುವುದು. ಪ್ರಧಾನವಾಗಿ ಚೌಡಿಕೆಯವರ ಕಾವ್ಯಗಳು ಮೂವರು ಶಕ್ತಿದೇವತೆಗಳ ವಸ್ತುವನ್ನು ಪ್ರತಿಬಿಂಬಿಸುತ್ತದೆ. ಬಳ್ಳಾರಿ ಜಿಲ್ಲೆಯ ಉಚ್ಚಂಗಿದುರ್ಗ, ಬೆಳಗಾವಿ ಜಿಲ್ಲೆಯ ಸವದತ್ತಿದುರ್ಗ, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ಎಲ್ಲಮ್ಮನ ದುರ್ಗ. ಈ ಮೂರು ದೇವತೆಗಳನ್ನು ಕುರಿತು ಜನಪದ ಪರಂಪರೆಯಲ್ಲಿ ಅಪಾರ ವಾಙ್ಮಯವಿದೆ. ಜನಪದ ಕಾವ್ಯಗಳೂ ರಚನೆಯಾಗಿವೆ.

ರಾಮಣ್ಣನವರು ಬಳ್ಳಾರಿ ಜಿಲ್ಲೆಯ ಉಚ್ಚಂಗಮ್ಮನ ಭಕ್ತ. ಇದು ಇವರ ಮೂಲ ಸ್ಥಳವೂ ಹೌದು. ಅಲ್ಲಿಂದ ಭಿಕ್ಷಾಟನೆಯ ನಿಮಿತ್ತ ವಲಸೆ ಬಂದು ದಾವಣಗೆರೆ ತಾಲ್ಲೂಕಿನ ಗಾಂಧಿನಗರದಲ್ಲಿ ನೆಲೆನಿಂತು ಜೀವನೋಪಾಯಕ್ಕೆ ಚೌಡಿಕೆ ವಾದ್ಯದೊಂದಿಗೆ ಹಾಡುಗಾರಿಕೆಯನ್ನು ಇಟ್ಟುಕೊಂಡಿದ್ದಾರೆ.

ರಾಮಣ್ಣ ಅಂಥ ಕಲಾವಿದ. ಅಮ್ಮ ಅಥವಾ ಸಿಡುಬಿಗೆ ತುತ್ತಾಗಿ ತಮ್ಮ ಏಳನೇ ವಯಸ್ಸಿಗೆ ಕಣ್ಣು ಕಳೆದುಕೊಂಡವರು. ಮನೆದೇವರು ರೇಣುಕಾ ಎಲ್ಲಮ್ಮನಾದುದರಿಂದ

ದೇವರ ಹೆಸರಲ್ಲಿ ತಮ್ಮ ಹದಿನೈದನೇ ವಯಸ್ಸಿನಲ್ಲಿ ಜೋಗಪ್ಪನ ದೀಕ್ಷೆ ಪಡೆದರು. ಅಂದಿನಿಂದ ಮೊನ್ನೆಮೊನ್ನೆಯ ತನಕ ಭಿಕ್ಷಾಟನೆಯೊಂದಿಗೆ ಬದುಕಿದ್ದ ರಾಮಣ್ಣ, ಎಲ್ಲಮ್ಮನ ಕಥೆ, ಪರಶುರಾಮನ ಕಥೆ, ಬಡವಿ ಲಕ್ಕಮ್ಮನ ಕಥೆ, ಮಡಿವಾಳ ಮಾಚಿದೇವರ ಕತೆ ಮೊದಲಾದ ಕಾವ್ಯಗಳನ್ನು ಸೊಗಸಾಗಿ ಹಾಡುತ್ತಾರೆ. ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಪ್ರಚಾರವನ್ನು ಜನಪದ ಕಾವ್ಯಗಳ ಮೂಲಕ ಪ್ರಚಾರ ಮಾಡುವುದಲ್ಲದೆ ವಿವಿಧ ಬಗೆಯ ರೋಗಗಳನ್ನು ತಡೆಗಟ್ಟುವ, ಯುವಜನತೆ ಈ ಬಗೆಯ ಭಯಾನಕ ರೋಗಕ್ಕೆ ಬಲಿಯಾಗದಿರುವ ಬಗ್ಗೆ ಜಾಗೃತಿ ಮೂಡಿಸುವ ರೀತಿಯಲ್ಲಿ ಹಲವಾರು ಪ್ರಗತಿಪರ ಗೀತೆಗಳನ್ನು ಹಾಡುವುದು ರಾಮಣ್ಣನವರ ವಿಶೇಷವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಬಹುತೇಕ ಸಾಂಸ್ಕೃತಿ ಸಮಾರಂಭದಲ್ಲಿ ರಾಮಣ್ಣನವರಿಂದ ಚೌಡಿಕೆ ಮೇಳ ಏರ್ಪಡಿಸಿ ಇವರ ಹಾಡುಗಾರಿಕೆಗೆ ಉತ್ತೇಜನ ನೀಡಿದೆ.

ಈ ಬಗೆಯ ಚೌಡಿಕೆ ಕಲೆಯ ಅಪೂರ್ವತೆಗಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೫ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

**ಚೌಡಿಕೆ ರಾಮಣ್ಣ,**
**ಗಾಂಧಿನಗರ, ದಾವಣಗೆರೆ ತಾಲೂಕು.**

## ಎಸ್. ಕೆ. ಗೋವಿಂದಪ್ಪ

ದಾವಣಗೆರೆ ಜಿಲ್ಲೆಯ ಹಿರಿಯ ಜಾನಪದ ಕಲಾವಿದ ಶ್ರೀ ಗೋವಿಂದಪ್ಪನವರು ಲಾವಣಿ ಗೋವಿಂದಪ್ಪ ಎಂದೇ ಚಿರಪರಿಚಿತರು. ಮಾಯಕೊಂಡದವರು. ಹಾಡುಗಾರರ ಕುಟುಂಬ. ತಂದೆ ಕೃಷ್ಣಪ್ಪ ಚಿರಪರಿಚಿತ ಹಾಡುಗಾರರು. ಸ್ವಾತಂತ್ರ್ಯ ಚಳುವಳಿಗೆ ಹಾಡುಗಳ ಮೂಲಕ ಜೀವ ತುಂಬಿದ ಕುಟುಂಬ. ಜೊತೆಗೆ ಆಯುರ್ವೇದ ಪದ್ಧತಿಯನ್ನು ವಂಶಪಾರಂಪರ್ಯವಾಗಿ ಮುಂದುವರಿಸಿಕೊಂಡು ಬರುತ್ತಿರುವ ಕುಟುಂಬ. ೧೯೧೯ರಲ್ಲಿ ಮಾಯಕೊಂಡದಲ್ಲಿ ಜನಿಸಿದ ರಾಮಣ್ಣ ಮಾಧ್ಯಮಿಕ ಶಾಲೆಯ ಹಂತದವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದವರು. ಪ್ರಬಲವಾಗುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಕೂಗಿಗೆ ಓಗೊಟ್ಟು ಶಾಲೆ ಬಿಟ್ಟು ಅಸಹಕಾರ ಚಳುವಳಿಯಲ್ಲಿ ತೊಡಗಿದರು. ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹ, ೧೯೪೨ರಲ್ಲಿ "ಬ್ರಿಟಿಷರೆ ಭಾರತ ಬಿಟ್ಟು ತೊಲಗಿ" ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಭಾರತದ ಹಿರಿಮೆ, ಸಂಸ್ಕೃತಿ ಕುರಿತು ಲಾವಣಿ ಪದಗಳನ್ನು ಬರೆದು ಹಾಡುತ್ತಾ ಬ್ರಿಟಿಷರ ವಿರುದ್ಧ ರಣಕ್ರಾಂತಿಗೆ ಭಾರತೀಯರನ್ನು ಪ್ರೇರೇಪಿಸುತ್ತಿದ್ದರು. ಈ ಕಾರಣಕ್ಕಾಗಿ ಮೂರು ವರ್ಷಗಳ ಕಾಲ ಸೆರೆಮನೆ ಸೇರಿದರು. ಅಲ್ಲಿಯೂ ದೇಶಭಕ್ತಿಯ ಲಾವಣಿಗಳ ಮೂಲಕ ದೇಶೀ ಚಳುವಳಿಗೆ ಪ್ರೇರಕರಾಗಿ ದುಡಿದವರು.

ಸಿದ್ದವ್ವನಹಳ್ಳಿ ನಿಜಲಿಂಗಪ್ಪ, ಶಿವಮೊಗ್ಗದ ಸಿದ್ಧಯ್ಯನವರು ರಾಮಣ್ಣನವರ ಆಕರ್ಷಣೆಯನ್ನು ಸಮರ್ಥವಾಗಿ ಬಳಸಿಕೊಂಡರು. ವೇದಿಕೆಗಳಲ್ಲಿ ಇವರ ಹಾಡಿಗೆ ವಿಶೇಷ ಗಮನ ನೀಡಿದರು. ಹಾಗಾಗಿ ಜನಪದ ಸಂಗೀತದ ಜೊತೆ ಜೊತೆಗೆ ಹಲವು ಹಾಡುಗಳನ್ನೂ ಬರೆದರು.

ರಾಮಣ್ಣನವರು ಹಾಡಿದ ಹಲವು ಹಾಡುಗಳನ್ನು ಜೀಶಂಪ, ಪಿ. ಆರ್. ತಿಪ್ಪೇಸ್ವಾಮಿ, ಕ.ರಾ.ಕೃ ಸಂಗ್ರಹಿಸಿದ್ದಾರೆ. ಜೊತೆಗೆ ಇವರ 'ಕಲ್ಗಿತುರಾ' ಲಾವಣಿ ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದೆ. ಚಿತ್ರದುರ್ಗ, ಭದ್ರಾವತಿ, ಬೆಂಗಳೂರು ಆಕಾಶವಾಣಿ ಕೇಂದ್ರಗಳಿಂದ ಇವರ ಲಾವಣಿಗಳು ಪ್ರಸಾರವಾಗಿವೆ. ಜೊತೆಗೆ ದೂರದರ್ಶನದಿಂದಲೂ ಹಾಡಿನ ಸೊಬಗನ್ನು ತೋರಿಸಿರುವ ರಾಮಣ್ಣ ಹತ್ತಾರು ಯುವಜನ ಮೇಳಗಳ ಕಲಾವಿದರಾಗಿ, ತೀರ್ಪುಗಾರರಾಗಿ ಭಾಗವಹಿಸಿದ್ದಾರೆ. ನಾಡಿನಾದ್ಯಂತ ಹಲವು ಪ್ರತಿಷ್ಠಿತ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿರುವುದು ವಿಶೇಷ. ಸುವರ್ಣ ಸ್ವಾತಂತ್ರ್ಯ ಮಹೋತ್ಸವದಲ್ಲಿ ಸನ್ಮಾನಗೊಂಡಿರುವ ರಾಮಣ್ಣನವರಿಗೆ ೧೯೯೦ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕಲಾವಿದರು ಈಗ ದಿವಂಗತರಾಗಿದ್ದಾರೆ.

# ಸಾರಂಗಿ ರಾಮನಾಯಕ

ರಾಮನಾಯಕರು ದಾವಣಗೆರೆ ತಾಲ್ಲೂಕಿನ ಚಿನ್ನಸಮುದ್ರದವರು. ಬಂಜಾರ ಕುಟುಂಬ. ಇವರನ್ನು ಗಾಜುಗೋಣಿಯವರು ಎಂದು ಕರೆಯಲಾಗುತ್ತದೆ. ಇವರದು ವಿಶಿಷ್ಟ, ವಿಚಿತ್ರ ಸಂಸ್ಕೃತಿ. ಲಂಬಾಣಿ ಮುಸ್ಲಿಂ ಸಂಸ್ಕೃತಿಗಳ ಮೈತ್ರಿ. ರಾಮಾನಾಯ್ಕರ ತಂದೆಯ ಹೆಸರು ಸಾಖ್ಯಾನಾಯಕ, ತಾಯಿ ರೂಪ್ಲಿಬಾಯಿ. ವೃತ್ತಿ ಗಾಯಕ ಪರಂಪರೆಗೆ ಸೇರಿದ ಇವರದು ದೊಡ್ಡ ಕುಟುಂಬ. ಆರುಜನ ಗಂಡುಮಕ್ಕಳು, ಒಂದು ಹೆಣ್ಣು. ಮಕ್ಕಳೆಲ್ಲರೂ ಈಗ ಬೇರೆ ಬೇರೆ ಕಸುಬನ್ನು ಅವಲಂಬಿಸಿದ್ದಾರೆ. ರಾಮನಾಯ್ಕರೂ ತಮ್ಮ ಹಾಡಿನ ಮಾಧುರ್ಯದಿಂದಾಗಿ ದಾವಣಗೆರೆ, ಚಿತ್ರದುರ್ಗ, ಹೊಸಪೇಟೆ, ಶಿವಮೊಗ್ಗಗಳಲ್ಲಿ ಹೆಸರುವಾಸಿಯಾಗಿದ್ದರು. ಗಾಜುಗೋಣಿಯ ಸಾಂಸ್ಕೃತಿಕ ನಾಯಕರ ಹುಟ್ಟು, ಸಾಂಸ್ಕೃತಿಕ ಮಹತ್ವ ಈ ಮೊದಲಾದ ಅಂಶಗಳನ್ನು ನೆಲೆಯಾಗಿಸಿಕೊಂಡು ಲಂಬಾಣಿ ತಾಂಡಾಗಳಲ್ಲಿ ರಾತ್ರಿಯೆಲ್ಲ ಹಾಡುತ್ತಾರೆ, ಕಥೆ ಮಾಡುತ್ತಾರೆ. ಧಾರ್ಮಿಕ ಮಹತ್ವವುಳ್ಳ ಈ ಕಲಾವಿದರನ್ನು ಆದರದಿಂದ ಬರಮಾಡಿಕೊಂಡು ಕಥೆ ಮಾಡಿಸುತ್ತಾರೆ. ಆರಂಭದಲ್ಲಿ ಪೂಜೆ ನಂತರ ಕಾಳು, ದವಸ ನೀಡಿ ಗೌರವಿಸುತ್ತಾರೆ. ಇವರನ್ನು ಢಾಡಿ ಎಂದು ತಾಂಡದ ಜನ ಕರೆಯುತ್ತಾರೆ.

ಸಾರಂಗಿ ರಾಮನಾಯ್ಕ ಸಾರಂಗಿಯನ್ನು ವಿಶೇಷವಾದ ರೀತಿಯಲ್ಲಿ ನುಡಿಸುತ್ತಾರೆ. ತಂಬೂರಿಯಂತೆ ಕಾಣುವ ಸಾರಂಗಿ, ರಾಮನಾಯ್ಕರಿಗೆ ಸಾರಂಗಿಯಾಗಿತ್ತು. ಸಾಂಪ್ರದಾಯಕ ವೇಷಭೂಷಣಗಳೊಂದಿಗೆ ಸಾರಂಗಿ ನುಡಿಸುತ್ತಾ, ಕಥನ ಗೀತೆಗಳನ್ನು ಲಯಬದ್ಧವಾಗಿ ಹಾಡುತ್ತಾ ಬರುವ ಈ ಪರಂಪರೆ ಕರ್ನಾಟಕದ ಹೆಳವರ ಸಂಸ್ಕೃತಿಯನ್ನು ನೆನಪಿಸುತ್ತದೆ. ಆದರೆ ಅದಕ್ಕಿಂತ ಇಂಪು ಹಾಗೂ ಅಪರೂಪದ ವಾದ್ಯವಿಶೇಷ. ಕಲಾವಿದರೂ ಅಪರೂಪ. ಅಂಥ ಅಪರೂಪದವರಲ್ಲಿ ರಾಮಾನಾಯ್ಕರೂ

ಒಬ್ಬರು. ಶ್ರವಣಕುಮಾರ, ಗುಣಸಾಗರಿ, ಬಾಲನಾಗಮ್ಮ ಮುಂತಾದ ಪುರಾಣ ಜನಪದ ಕಥನ ಗೀತೆಗಳಿಂದ ಹಿಡಿದು ಆಧುನಿಕ ವಸ್ತುವಾದ ಮಹಾತ್ಮ ಗಾಂಧೀಜಿಯವರ ತನಕ ಇವರ ಕಥನ ಗೀತೆಗೆ ವಸ್ತುವಾಗುತ್ತಿದ್ದವು. ಬೇಂದ್ರೆ, ಶಿಶುನಾಳ ಷರೀಫ ಮೊದಲಾದವರ ಹಾಡುಗಳನ್ನು ಸಾರಂಗಿಗೆ ಅಳವಡಿಸಿಕೊಂಡು ಹಾಡುತ್ತಿದ್ದರು. ಬಹುತೇಕ ಬದುಕನ್ನು ಭಿಕ್ಷಾಟನೆಯಲ್ಲಿಯೇ ಕಳೆದವರು. ಹೆಚ್. ಎಲ್. ನಾಗೇಗೌಡರ ಕಣ್ಣಿಗೆ ಬಿದ್ದ ಈ ಕಲಾವಿದ ೧೯೮೧ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ  ಅಕಾಡೆಮಿ ಪ್ರಶಸ್ತಿ ಪಡೆದರು. ಡಾ. ಎಂ. ಜಿ. ಈಶ್ವರಪ್ಪ ಇವರ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಸಂಶೋಧನೆಗೂ ಬಳಸಿಕೊಂಡಿದ್ದಾರೆ. ೧೯೮೪ರಲ್ಲಿ ತೀರಿಕೊಂಡಾಗ ತನ್ನವರಿಗಾಗಿ ಏನನ್ನೂ ಬಿಟ್ಟು ಹೋಗಿರಲಿಲ್ಲ. ಕಲೆಗಾಗಿ ಹೋರಾಡಿ ಅಮರವಾದ ಅದ್ಭುತ ಕಲಾವಿದ.

## ಸರಸ್ವತಮ್ಮ

ಸರಸ್ವತಮ್ಮನವರು ದಾವಣಗೆರೆಯವರು. ಮೂಲತಃ ಹರಿಹರದ ಈಶ್ವರಪ್ಪ ಅವರ ಮಗಳು. ಮುಂದೆ ದಾವಣಗೆರೆಯ ಚಂದ್ರ ಶೇಖರಪ್ಪ ಅವರೊಂದಗೆ ವಿವಾಹವಾಗಿ ದಾವಣಗೆರೆಗೆ ಬಂದರು. ರೈತಾಪಿ ಬದುಕು, ಜೊತೆಗೆ ಕೂಲಿಕೆಲಸ. ನಾಲ್ಕು ಮಕ್ಕಳ ತಾಯಿಯಾಗಿ ೭೫ ವಸಂತಗಳನ್ನು ಕಳೆದರೂ ಇಂದಿಗೂ ಹಾಡುಗಾರಿಕೆ ನಿಲ್ಲಿಸಿಲ್ಲ. ಸರಸ್ವತಮ್ಮನವರು ವೀರಶೈವ ಜನಾಂಗಕ್ಕೆ ಸೇರಿದವರು. ಇವರ ತಾಯಿ ಹರಿಹರದ ರುದ್ರಕ್ಕನೂ ಹಾಡುಗಾರ್ತಿ. ಇವರಿಂದ ಬಾಲ್ಯದಲ್ಲಿಯೇ ಹಾಡುವುದನ್ನು ಕಲಿತಿರುವುದಾಗಿ ಹೇಳುತ್ತಾರೆ. ಇವರು ಹಾಡಿರುವ ಹಲವಾರು ಗೀತೆಗಳನ್ನು ಕರಾಕ್ರ, ಪಿ.ಆರ್‌ಟಿ. ಜೀಶಂಪ ಸಂಗ್ರಹಿಸಿರುವುದಾಗಿ ಹೇಳುತ್ತಾರೆ.

೧೯೭೮ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜನಪದ ಪ್ರಕಟಣಾಮಾಲೆಯಲ್ಲಿ ಪ್ರಕಟಗೊಂಡಿರುವ ಹನ್ನೊಂದು ಪುಸ್ತಕಗಳಲ್ಲಿ ಅಂದನೂರು ಶೋಭ ಅವರ 'ಕೊಂಬೆರೆಂಬೆಲ್ಲ ಎಳಗಾಯಿ' ಪುಸ್ತಕವೂ ಒಂದು. ಈ ಜನಪದಗೀತ ಸಂಕಲನದಲ್ಲಿ ದಾವಣಗೆರೆಯ ಸರಸ್ವತಮ್ಮ ಹಾಡಿರುವ ಹನ್ನೊಂದು ಗೀತೆಗಳನ್ನು ಸಂಗ್ರಹವಾಗಿ ಪ್ರಕಟನೆಗೊಂಡಿರುವುದು ವಿಶೇಷ. ಇದಲ್ಲದೆ ಗುಣಸಾಗರಿ, ಮದಕರಿನಾಯಕ, ಮುರಿಗೇಮಠ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯ ಕಥನ ಗೀತೆಗಳನ್ನು ಹಾಡುವುದು ಇವರ ವಿಶೇಷವಾಗಿದೆ.

ಮಧುರ ಕಂಠದ ಕಥನಕ್ಕೆ ಒಂದು ಚೂರು ಧಕ್ಕೆ ಬಾರದ ಹಾಗೆ ಮೂಲ ಸೊಗಡಿನಲ್ಲೇ ಜನಪದ ಗೀತೆಗಳನ್ನು ಹಾಡುವುದು ಸರಸ್ವತಮ್ಮ ಅವರ ವಿಶೇಷವಾಗಿದೆ. ಇವರು ಹಾಡಿರುವ ಗೀತೆಗಳಲ್ಲಿ ನೀತಿ, ಸಂಪ್ರದಾಯ, ಹಾಸ್ಯ, ಇತಿಹಾಸ, ರಸಿಕತೆ,

ಮಳೆ ಕುರಿತ ದೈನ್ಯತೆಯೂ ಪ್ರಕಟವಾಗುತ್ತದೆ. ರಸಿಕ ತಮ್ಮನ ಬಗೆಗಿನ ಪ್ರೀತಿ ಹೀಗೆ ಪ್ರಕಟವಾಗುತ್ತದೆ.

ಸಣ್ಣ ಶಾವಿಗೆ ಒಲ್ಲ ಚಿನ್ನಿ ಸಕ್ಕರೆ ಒಲ್ಲ
ಹೆಣ್ಣೆಂಬಾ ಶಬ್ದ ಬಿಡವಲ್ಲಾ । ನನ ತಮ್ಮ
ಹೆಣ್ಣೆ ಕೊಡುತೀನೀ ಉಣ್ಣೇಳೋ ॥

ಪ್ರೀತಿ ಪ್ರಣಯ ಆ ಸಂಬಂಧಿ ವೈವಾಹಿಕ ಜೀವನಕ್ಕೆ ಸಂಬಂಧಿಸಿದ ನೂರಾರು ಹಾಡುಗಳನ್ನು ಚುಟುಕಾಗಿ, ದೀರ್ಘವಾಗಿಯೂ ಹಾಡುವ ಸರಸ್ವತಮ್ಮ ತೌರು ಕುರಿತ ಹತ್ತಾರು ಪದ ಹಾಡುತ್ತಾರೆ. ಮಾದರಿಗಾಗಿ ಒಂದು ಪದ್ಯವನ್ನು ಗಮನಿಸಬಹುದು.

ಅಳ್ಳೆ ಕೂಲಾರೆ ಅಳಕಾಯಿ ಕೀಳಲಾರೆ
ಕಲ್ಯಾಣದ ನೀರ ಹೊರಲಾರೆ । ನನ್ನಣ್ಣ
ಕಲ್ಲುಬಾವಿ ನೀನು ತೆಗೆಸಣ್ಣ । ನನ್ನಣ್ಣ
ತಾಯೊತ್ತಿದೆಣ್ಣೆ ತಲೆಭಾರ ॥

ಅಂದರೆ ಮತ್ತೊಂದು ಪದ್ಯದಲ್ಲಿ ತಾಯಿ ತನ್ನ ಮಗಳನ್ನು ಕಣ್ಣಿಟ್ಟು ಸಲಹೋ ನನ ಮಗಳ ಎಂದು ಅಳಿಯನಿಗೆ ಹಿತವಚನ ಹೇಳುವುದು ವಿಶೇಷವಾಗಿದೆ.

ಕಣಗಾಲ ಗಿಡದಾಗ ಗಿಣಿ ಹಿಂಡು ಕಾದಂಗೆ
ಸಣ್ಣ ನೀಲಮ್ಮನಾs ಬಳಗಾದ । ಕಣ್ಣೀರು
ಹನ್ನೊಂದು ಹೊಳೆಯಾಗಿ ಹರದಾವು
ಎಣ್ಣೋಳಿಗೆ ತುಪ್ಪ ಜನಕಾದೆ ಮಾದೇವರೆ
ಕಣ್ಣಿಟ್ಟು ಸಲಹೋ ನನ ಮಗಳ

ಹೀಗೆ ಸರಸ್ವತಮ್ಮ ಹಾಡಲು ಕುಳಿತರೆ ಜನಪದ ಗೀತೆಗಳ ಸಾರಸರ್ವಸ್ವವನ್ನೇ ತೆರೆದು ಕೊಂಡಂತಾಗುತ್ತದೆ. ಅಪ್ಪಟ ಸಂಪ್ರದಾಯ, ದೇವರು, ಧಾರ್ಮಿಕ ಸಭೆ, ಕುಲಸ್ಥರ ಮದುವೆ, ಸೋಬನ ಪ್ರಸಂಗಗಳಲ್ಲಿ ಮಾತ್ರ ಹಾಡುವ ರುದ್ರಮ್ಮ-ಸರಸ್ವತಮ್ಮ ಎಂದೂ ಹಾಡುಗಾರ್ತಿಯಾಗಿ ಗುರುತಿಸಿ ಕೊಂಡವರಲ್ಲ. ತಮ್ಮ ತೊಂಬತ್ತರ ಈ ಇಳಿವಯಸ್ಸಿನಲ್ಲಿಯೂ ಬೊಚ್ಚುಬಾಯಿಂದ ಹಾಡಲು ಉತ್ಸುಕಳಾಗುವ ಸರಸ್ವತಮ್ಮ ನಗರವಾಸಿಯಾದರೂ ಹಳ್ಳಿಯ ಜನಪದ ಸಂಪತ್ತನ್ನು, ಕಲಾಸೊಬಗಿನ ಬಗೆಗೆ ಅಪಾರ ಗೌರವ, ಅಭಿಮಾನ ತಾಳುವುದು ಈ ಹಿರಿಯ ಕಲಾವಿದರ ವಿಶೇಷ.

ಸರಸ್ವತಮ್ಮ,
ದಾವಣಗೆರೆ ಟೌನ್, ದಾವಣಗೆರೆ.

# ಯುಗಧರ್ಮ ರಾಮಣ್ಣ

ಯುಗಧರ್ಮ ಎಂಬ ಹೆಸರಲ್ಲೇ ರಾಜ್ಯಾದ್ಯಂತ ಹೆಸರುವಾಸಿಯಾಗಿರುವ ರಾಮಣ್ಣ; ಚನ್ನಗಿರಿ ತಾಲೂಕು ಸಿದ್ದನಮಠದವರು. ಅವಿದ್ಯಾವಂತ ಮನೆತನ, ಕುರಿ ಪೋಷಣೆ, ಜೊತೆಗಿಷ್ಟು ವ್ಯವಸಾಯ. ಮಗ ಅಮಲ್ದಾರನಾಗಬೇಕೆಂಬ ಕನಸು ಹೆತ್ತವರದು. ಹಾಗಾಗಿ ಹಲವು ಪ್ರಯತ್ನ. ಆದರೆ ರಾಮಣ್ಣ ೨ನೇ ತರಗತಿಯಿಂದ ಮುಂದೆ ಬರಲಿಲ್ಲ. ತನ್ನ ೬ನೇ ವರ್ಷದಲ್ಲಿಯೇ ಊರಲ್ಲಿ ನಡೆಯುತ್ತಿದ್ದ ಶಿವಭಜನೆ, ಕೋಲುಪದ, ಫಂಡರಾಪುರಿ ಭಜನೆ ಹಾಗೂ ಬೇಸಿಗೆ ಕಾಲಕ್ಕೆ ಆಡುತ್ತಿದ್ದ ಯಕ್ಷಗಾನ ಕುಣಿತ, ಪೌರಾಣಿಕ ನಾಟಕಗಳು ಇವರನ್ನು ಕಲಾಪುರುಷರನ್ನಾಗಿ ರೂಪಿಸಿತು. ಹಾಗಾಗಿಯೇ ಸ್ಲೇಟು, ಬಳಪ ಹಿಡಿಯುವುದನ್ನು ಬಿಟ್ಟು ತಾಳವಾದ್ಯ ಹಿಡಿಯಿತು. ಅಗಲವಾದ ಗಟ್ಟಿಚರ್ಮದ ಹಲಗೆಯನ್ನು ಕೈಲಿ ಹಿಡಿದು ನಿಂತರೆ ಜನಸ್ತೋಮವನ್ನು ಚುಂಬಕದಂತೆ ಆಕರ್ಷಿಸಿಬಿಡುವ ರಾಮಣ್ಣ ನಿರಕ್ಷರಕುಕ್ಷಿಯಾದರೂ ಗಳಿಸಿದ ಮನ್ನಣೆ ಅಪಾರ, ಕೀರ್ತಿ ನಾಡಿನ ಉದ್ದಗಲ.

ಜಾನಪದ ಕವಿಕುಲ ತಿಲಕ, ಜಾನಪದ ಕಸ್ತೂರಿ. ಜಾನಪದ ಜಂಗಮ, ಜಾನಪದ ರತ್ನ ಈ ಬಿರುದು ಗೌರವಗಳಿಂದ ಎದೆತುಂಬಿ ಕರೆಯಲ್ಪಡುವ ಜಾನಪದ ಲಾವಣಿ ಹಾಡುಗಾರ, ಯುಗಧರ್ಮ ರಾಮಣ್ಣ ಹುಟ್ಟಿದ್ದು ೧೦-೬-೧೯೩೮ರಲ್ಲಿ. ತಂದೆ ಕೆಂಚಪ್ಪ, ತಾಯಿ ಹುಚ್ಚಮ್ಮ. ಈ ದಂಪತಿಗಳಿಗೆ ಜನಿಸಿದ ಒಂದು ಗಂಡು, ಎರಡು ಹೆಣ್ಣುಗಳಲ್ಲಿ ರಾಮಣ್ಣ ಒಬ್ಬ ಅಕ್ಕ, ಒಬ್ಬಳು ತಂಗಿಯ ಮುದ್ದಿನ ಸೋದರ. ರೈತಾಪಿ ಕುಟುಂಬವಾದರೂ ಕೆಂಚಪ್ಪನವರದು ಸುಸಂಸ್ಕೃತ ಕುಟುಂಬ. ಊರ ಗೌಡಿಕೆಯ ಜೊತೆಗೆ ಗುಡಿಕಾರರೆಂಬ ಹಿರಿಮೆಯೂ ಇವರದು. ಹಾಗಾಗಿ ಮಗ ಅಮಲ್ದಾರನಾಗಬೇಕೆಂಬ ಬಯಕೆ ಕೆಂಚಪ್ಪ ಕುಟುಂಬದವರದು. ಊರ ಗೌಡಿಕೆಯನ್ನು ಒಲ್ಲದ ರಾಮಣ್ಣ ಹಿಡಿದದ್ದು ಕಲಾಗೌಡಿಕೆಯನ್ನು ಮಾತ್ರ. ಇದೇ ಇವರ ವಿಶೇಷ. ಕೆಂಚಪ್ಪನವರು ಮಗ ಶಾಲೆ

ಕಲಿಯದೆ, ಕಲೆ–ಸಂಸ್ಕೃತಿಯ ಬೆನ್ನು ಹತ್ತಿದಾಗ ಮದುವೆಯ ಮೂಲಕ ಮಗನನ್ನು ಮನೆಯ ಒಕ್ಕಲುತನ ನೋಡಿಕೊಳ್ಳಲು ಯೋಜಿಸಿ, ಮಾಯಕೊಂಡದ ಲಕ್ಷ್ಮೀದೇವಮ್ಮ ಎಂಬುವವರೊಂದಿಗೆ ೧೯೫೯ರಲ್ಲಿ ವಿವಾಹ ಮಾಡಿದರು. ಸಂಸಾರದ ನೊಗ ಹೊತ್ತರೂ ರಾಮಣ್ಣ ಕೋಲಾಟದ ತಂಡ, ಭಜನೆ, ನಾಟಕದ ಗೀಳು ಹತ್ತಿ ಊರೂರು ತಿರುಗುವುದನ್ನು ಬಿಡಲಿಲ್ಲ.

ಸಿದ್ದನಮಠ, ಸಂತೆಬೆನ್ನೂರು, ಚನ್ನಗಿರಿ, ದಾವಣಗೆರೆಯ ಹೊನ್ನೂರು, ಮಾಯಕೊಂಡ ಇಲ್ಲೆಲ್ಲಾ ಯುವಕರನ್ನು ಸಂಘಟಿಸಿ ನಾಟಕ ನಿರ್ದೇಶನ, ಪ್ರದರ್ಶನದ ವ್ಯವಸ್ಥೆ ಮಾಡಿದರು. ತ್ಯಾಗಿ, ಧರ್ಮಸಂಘರ್ಷ, ಅಣ್ಣ ತಂಗಿ ಮೊದಲಾದ ನಾಟಕದ ನಿರ್ದೇಶಕ, ಪಾತ್ರಧಾರರಾಗಿಯೂ ಕಾರ್ಯನಿರ್ವಹಣೆ. ಕಲಾವಿದ ರಾಮಣ್ಣ ಮೊದಲಿಗೆ ರಂಗಕರ್ಮಿಯಾದರೂ ಜನಪದ ಗಂಗೆಯ ಜಲಧಾರೆಯಾದದ್ದು ವಿಶೇಷ. ಜನಪದ ಲಾವಣಿಕಾರ ರಾಮಣ್ಣ ಯುಗಧರ್ಮ ಎಂಬ ಹೆಸರಲ್ಲಿ ಖ್ಯಾತರಾಗಿದ್ದಾರೆ. ಸರ್ಕಾರ, ಸಂಘಸಂಸ್ಥೆಗಳೂ ಸೇರಿದಂತೆ ನಾಡಿನ ಉದ್ದಗಲ ಎಲ್ಲಾ ಸಾಂಸ್ಕೃತಿಕ ಸಂಸ್ಥೆಗಳೂ ಇವರನ್ನು ಕರೆಸಿ ಹಾಡಿಸಿವೆ, ಗೌರವ ನೀಡಿ ಸತ್ಕರಿಸಿವೆ. ಅನಕ್ಷರಕುಕ್ಷಿಯಾದರೂ ರಾಮಣ್ಣ ಹಾಡಿರುವ ಧ್ವನಿಸುರುಳಿ ಒಂದು ಕಡೆ ಕ್ರಾಂತಿಗೀತೆಗಳಾಗಿ ಹೆಸರಾದರೆ, ಮತ್ತೊಂದು ಕಡೆ ಇವರ ಗೀತೆಗಳ ಐದು ಪುಸ್ತಕಗಳೂ ಪ್ರಕಟವಾಗಿವೆ. ತೋಚಿದ್ದು ಗೀಚು, ಕನ್ನಡಮ್ಮನ ತೇರು, ಯುಗಧರ್ಮನ ತತ್ವಪದ, ಯುಗಧರ್ಮನ ತ್ರಿಪದಿ, ಯುಗಧರ್ಮನ ವಚನಧರ್ಮ ಈ ಪುಸ್ತಕಗಳು ಕನ್ನಡ ತತ್ವಪದಗಳ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುತ್ತವೆ.

ಕೃಷಿಕಾಯಕ ರಾಮಣ್ಣನವರಿಗೆ ಪರಿಸರ, ಜಾತ್ಯಾತೀತ ಬಗೆಗೆ ಅಪಾರ ಕಾಳಜಿ. ಇದೇ ಇವರ ಹಾಡುಗಾರಿಕೆಯ ಸ್ಥಾಯಿರೂಪ. ಪರಿಸರ ಜಾಗೃತಿ, ಆಧುನಿಕ ಬೇಸಾಯ, ಕುಟುಂಬ ಯೋಜನೆ, ಸಾಕ್ಷರತೆ ಹಾಗೂ ರಾಷ್ಟ್ರೀಯ ಭಾವೈಕ್ಯತೆ ಕುರಿತು ಸಾವಿರಾರು ಕಾರ್ಯಕ್ರಮ ನೀಡಿದ್ದಾರೆ. ರಾಜ್ಯಸರ್ಕಾರ ರಾಜ್ಯ ವಿಜ್ಞಾನ ಕೇಂದ್ರದ ಸಂಪನ್ಮೂಲ ಹಾಡುಗಾರರನ್ನಾಗಿ ನೇಮಿಸಿದೆ. ಆರು ದಶಕದಿಂದಲೂ ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ. ರಾಜ್ಯಸರ್ಕಾರ ೧೯೯೯ ರಲ್ಲಿ ಶ್ರೀರಂಗಪಟ್ಟಣದಲ್ಲಿ ಏರ್ಪಡಿಸಿದ್ದ ಟಿಪ್ಪುಸುಲ್ತಾನ್ ಶತಮಾನೋತ್ಸವ ಕಲಾಮೇಳವನ್ನು ಉದ್ಘಾಟಿಸಲು ಇವರನ್ನು ಆರಿಸಿತ್ತು. ಮೂಡುಬಿದರೆಯಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಲಾಪ್ರದರ್ಶನದ ಉದ್ಘಾಟನೆ ಹಾಗೂ ಕರ್ನಾಟಕ ಕಲಾಶ್ರೀ ಪ್ರಶಸ್ತಿ ನೀಡಿಕೆ. ೨೦೦೪ನೇ ಸಾಲಿನಲ್ಲಿ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಶ್ರೇಷ್ಠ ಕಲಾವಿದ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

ವೈಚಾರಿಕತೆಯ ನೆಲೆಗಟ್ಟಿನ ಮೇಲೆ ಧರ್ಮಸಮನ್ವಯತೆ, ಮೂಢನಂಬಿಕೆ, ಮಾನವೀಯ ಮೌಲ್ಯಗಳ ಪುನರ್‌ನಿರ್ಮಾಣ ಇವುಗಳೇ ರಾಮಣ್ಣನವರ ಲಾವಣಿಯ ಆಶಂಸುವಾಗಿವೆ. ಜಾನಪದವನ್ನು ಉಳಿಸಿ ಮುಂದಿನ ತಲೆಮಾರಿಗೆ

ಕೊಂಡೊಯ್ಯಬೇಕೆಂಬ ತೀವ್ರ ಪ್ರಯತ್ನದಲ್ಲಿರುವ ರಾಮಣ್ಣ ತನ್ನ ಮನೆಯನ್ನೇ ಜಾನಪದ ವಿಶ್ವವಿದ್ಯಾಲಯ ಎಂಬ ಜನಪದ ಸಂಸ್ಥೆ ತೆರೆದು ಜನಪದ ತರಬೇತಿ ನೀಡುತ್ತಿದ್ದಾರೆ. ದಾವಣಗೆರೆ, ಹೊನ್ನೂರುಗಳಲ್ಲಿಯೂ ಈ ಕೇಂದ್ರದ ಶಾಖಾಕೇಂದ್ರಗಳಿವೆ. ಇಬ್ಬರು ಗಂಡುಮಕ್ಕಳಿರುವ ರಾಮಣ್ಣನವರ ಒಬ್ಬ ಮಗ ಶಿಕ್ಷಕ, ಇನ್ನೊಬ್ಬರು ಕೃಷಿಕರು. ಶಿಕ್ಷಕ ನೀಲಪ್ಪ ಇವರ ಕಲಾವಂತಿಕೆಗೆ ಪ್ರೇರಕರಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ.

ಯುಗಧರ್ಮ ರಾಮಣ್ಣ,<br>ಸಿದ್ಧನಮಠ, ಚನ್ನಗಿರಿ ತಾಲೂಕು.

# ರಂಗಮ್ಮ ಸೂರಗೊಂಡನಹಳ್ಳಿ

ಸೂರಗೊಂಡನಹಳ್ಳಿ ರಂಗಮ್ಮ ಅಪರೂಪದ ಜನಪದ ಹಾಡುಗಾರ್ತಿ. ಸ್ವಾತಂತ್ರ್ಯಪೂರ್ವದಲ್ಲಿ ಅಪ್ಪಟ ಹಳ್ಳಿಗರಾಗಿ, ಜನಪದ ಹೆರಿಗೆಗೆ ಹೆಸರುವಾಸಿಯಾಗಿದ್ದರು. ಹೆರಿಗೆ ಮಾಡಿಸುವ ಕಾಲಕ್ಕೆ ಹಾಡುವ ಸಂಗೀತ ಮುಂದೆ ಈಕೆಯನ್ನು ಹೆಸರುವಾಸಿಯನ್ನಾಗಿಸಿತು. ಕೂಲಿ ಬದುಕಿನಲ್ಲೇ ಬದುಕು ಸವೆಸಿದ ಬೆಸ್ತರ ಕುಲಕ್ಕೆ ಸೇರಿದ ದೊಡ್ಡರಂಗಪ್ಪನವರನ್ನು ವಿವಾಹವಾದರು. ಒಂದೇ ಊರಲ್ಲಿ ಹುಟ್ಟು, ಬೆಳವಣಿಗೆ, ವಿವಾಹ ಎಲ್ಲವೂ ನಡೆಯಿತು.

ರಂಗಮ್ಮನವರಿಗೆ ನಾಲ್ಕುಜನ ಗಂಡುಮಕ್ಕಳು. ಇಬ್ಬರು ಹೆಣ್ಣು. ಇವರೆಲ್ಲರೂ ಇಂದು ಮದುವೆ ಮಾಡಿಕೊಂಡು ತಾತಂದಿರಾಗಿದ್ದಾರೆ. ಆದರೆ ತನ್ನ ತಾಯಿ ರಂಗಮ್ಮ ಹಾಡುತ್ತಿದ್ದ ಹಾಡುವ ಕಲೆಯನ್ನು ಮಾತ್ರ ಯಾರೊಬ್ಬರೂ ಕಲಿತಿಲ್ಲ. ಇದೇ ಈ ಕಲಾವಿದೆಯನ್ನು ಇಂದು ಸಂಪೂರ್ಣ ಮರೆತಿರುವುದಕ್ಕೆ ಕಾರಣವಾಗಿದೆ. ತಾನು ಮಹಾನ್ ಹಾಡುಗಾರ್ತಿಯಾಗಿ ಕೂಲಿ ಬದುಕಿನಲ್ಲಿ ಜೀವನ ಸಾಗಿಸಿದ ರಂಗವ್ವ ತಂದೆ ತಾಯಿಯವರೇ ಹಾಡುಗಳ ಗುರುಗಳು. ತಂದೆ ಪುಟ್ಟರಂಗಪ್ಪ ಕೋಲುಮೇಳದ ಭಾಗವತ. ಸುಣ್ಣಗಾರಿಕೆಯ ಮಧ್ಯೆಯೂ ಕೋಲುಮೇಳ ಕಲಿಸಲು ಊರೂರು ತಿರುಗುತ್ತಿದ್ದರು. ತಾಯಿ ನರಸಮ್ಮ ಒಳ್ಳೆಯ ಹಾಡುಗಾರ್ತಿ. ಈಕೆಯೂ ಹೆರಿಗೆ ತಜ್ಞೆಯಾಗಿದ್ದರು. ಒಂದಿಷ್ಟು ಹರಳೆಣ್ಣೆ, ಒಂದು ದೀಪ, ಹಳೆಯ ಬಟ್ಟೆ ಇವಿಷ್ಟು ಸಲಕರಣೆ ಸಿಕ್ಕರೆ ಸಾಕು ಕ್ಷಣಾರ್ಧದಲ್ಲಿ ಹೆರಿಗೆ ಮಾಡಿಸಿಬಿಡುತ್ತಿದ್ದರು. ಅಷ್ಟರ ಮಟ್ಟಿಗೆ ಚಾಲೂಕಿನಿಂದ ಜನಪದ ವೈದ್ಯಗಾರಿಕೆ ಮಾಡುತ್ತಿದ್ದರು. ತನ್ನ ತಾಯಿಯ ಇದೇ ಕಸುಬನ್ನು ಮಗಳು ರಂಗವ್ವನೂ ಅಚ್ಚುಕಟ್ಟಗಿ ಕಲಿತಿದ್ದಳು. ಹೆರಿಗೆಯನ್ನು ಯಾವುದೇ ಕುಲ, ಜಾತಿ ನೋಡದೆ ರಾತ್ರಿ ಹಗಲೆನ್ನದ ಪರಿಶ್ರಮದಿಂದ ಮಾಡಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ಒಂದಿಷ್ಟು

ಅಡಿಕೆ, ವೀಳೆಯದೆಲೆಯನ್ನು ಮತ್ರ ಸಂಭಾವನೆ ಪಡೆಯುತ್ತಿದ್ದುದು ಈಕ್ಕೆಯ ವಿಶೇಷ. ನೂರಾರು ತತ್ವಪದ, ಕಥನಗೀತೆ, ಗಂಗೆಗೌರಿ ಕಥನಗಳನ್ನು ಮಾಡುತ್ತಿದ್ದ ರಂಗವ್ವ ಕೋಲುಪದಗಳನ್ನೂ ಹಾಡುತ್ತಿದ್ದರು. ಚಿತ್ರದುರ್ಗದ ಇತಿಹಾಸವನ್ನು ಜನಪದ ಗೀತೆಯಲ್ಲಿ ಕಟ್ಟಿಕೊಡುತ್ತಿದ್ದುದು ಈಕೆಯ ವಿಶೇಷ. ೧೯೭೫ರಲ್ಲಿ ಜೀಶಂಪ ಅವರೊಂದಿಗೆ ಸಂಪರ್ಕ ಸಾಧಿಸಿ ಅಣಜಿಯ ಲಕ್ಷ್ಮಣಪ್ಪನವರೊಂದಿಗೆ ಮೈಸೂರು ವಿಶ್ವವಿದ್ಯಾಲಯಕ್ಕೆ ಹೋಗಿ, ಅಲ್ಲಿನ ಕನ್ನಡ ಜಾನಪದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಗಂಗೆಗೌರಿ, ಚಿತ್ರದುರ್ಗದ ಪಾಳೆಯಗಾರರ ಪದಗಳನ್ನು ಹಾಡಿಬಂದರು.

೧೯೬೦ರಲ್ಲಿಯೇ ಪಿ.ಆರ್. ತಿಪ್ಪೇಸ್ವಾಮಿ ಅವರೊಂದಿಗೆ ಕರಾಕೃ ಈಕೆಯನ್ನು ಸಂಪರ್ಕಿಸಿ, ಒಂದು ರಾತ್ರಿ ಪೂರಾ ಹಾಡಿಸುವ ಜೊತೆಗೆ ಹಲವು ಕಥನಗೀತೆಗಳನ್ನು ಸಂಗ್ರಹಿಸಿದರು. ಇವರು ಹಾಡಿರುವ ದುರ್ಗ ಕುರಿತ ಕಥನಗೀತೆಗಳು ೧೯೭೫ರಲ್ಲಿ ಜನಪದ ಅಕಾಡೆಮಿ, ರಾಜಾಜಿನಗರ, ಬೆಂಗಳೂರು ಇವರು ಪ್ರಕಟಿಸಿರುವ ಕರಾಕೃ ಸಂಪಾದಕತ್ವದ 'ಚಿತ್ರಕಲ್ಲು ಮದಕರಿ' ಗೀತ ಸಂಕಲನದಲ್ಲಿ ಸಂಗ್ರಹಗೊಂಡಿವೆ.

ಚಿತ್ರದುರ್ಗದ ಮದಕರಿನಾಯಕ ಹೈದರಾಬಾದಿನ ಅರಸರೊಂದಿಗೆ ನಡೆಸಿದ ಕದನದ ವಿವರನ್ನು ಹೇಳುವ ಈ ಗೀತೆ ದುರ್ಗಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ದಾಖಲೆ ಒದಗಿಸುತ್ತದೆ.

ದಣಿರೆಂಬೋ ಕಂಚಿನ ಘಂಟೆ ನಿಡಿಸಿದ
ಬೋರ್ಗಾಳೆನಿಡಿಸಿದ ಮದಕೇರಣ್ಣ
ಉಗ್ರ ದಂಡಿನ ಮೇಲೆ ಭೂಪ ಪಂತ ನಡೆಸಿದ
ಮಿಕ್ಕ ಬಂದ ಹಲ್ಲು ಮುರಿದ
ಪರಶುರಾಮ ಭೂಪನೇ ದಣಿರೆಂದೋ ॥

೯೯ ವರ್ಷ ಚೆನ್ನಾಗಿಯೇ ಬಾಳಿದ ಈ ವಿಶಿಷ್ಟ ಕಲಾವಿದೆ ಈಗ ದಿವಂಗತರು.

# ಗೌಡರ ನಾಗಜ್ಜಿ

ನಾಗಜ್ಜಿ ಜಗಳೂರು ತಾಲೂಕಿನ ಹಿರಿಯ ಜನಪದ ಕಲಾವಿದೆ. ಕಾಡುಗೊಲ್ಲರ ಸಂಸ್ಕಾರ, ಆಚಾರ, ನಂಬಿಕೆ, ಸಂಪ್ರದಾಯಗಳನ್ನು ಬದುಕಿನುದ್ದಕ್ಕೂ ಪಾಲಿಸುತ್ತಾ, ಬಿತ್ತರಿಸುತ್ತಾ ಬಂದವರು. ಉಚ್ಚಂಗಿಪುರದ, ಗೌಡರ ಚಿತ್ತಯ್ಯ ಎಂಬುವರೊಂದಿಗೆ ವಿವಾಹವಾದರು. ಒಂದು ನೂರು ವರ್ಷ ಬದುಕಿದ್ದ ಈ ಹಿರಿಯ ಕಲಾವಿದೆ ಸಂಗೀತ ಶಾರದೆ ಅಂದೆನಿಸಿದ್ದರು. ತಮಗಿದ್ದ ನಾಲ್ಕು ಮಕ್ಕಳಿಗೂ ಅಲ್ಪಸ್ವಲ್ಪ ಹಾಡನ್ನು ಕಲಿಸಿದ್ದಾರೆ. ಆದರೆ ಇವರಲ್ಲಿ ಯಾರೊಬ್ಬರೂ ಪೂರ್ಣ ಪ್ರಮಾಣದ ಕಲಾವಿದರಾಗಿಲ್ಲ.

ನಾಗಜ್ಜಿ ತಮ್ಮ ಹತ್ತನೇ ವಯಸ್ಸಿನಲ್ಲಿಯೇ ಅದೇ ಗ್ರಾಮದ ಗೌಡಯ್ಯ ಎಂಬುವರೊಂದಿಗೆ ವಿವಾಹವಾದರು. ಗೌಡಯ್ಯ ಅವರಿಗೆ ಆಗ ಇಪ್ಪತ್ತು ವರ್ಷ ವಯಸ್ಸು. ಬಾಲಕಿಯಾಗಿದ್ದ ನಾಗಮ್ಮ ತನ್ನ ತಾಯಿ ತಿಪ್ಪಮ್ಮರಿಂದ ಹಾಡುವುದನ್ನು ಕಲಿತಿದ್ದರು. ಕಾಡುಗೊಲ್ಲರ ಸಂಪ್ರದಾಯದಂತೆ ದೇವರು ಕರೆಯುವ ಪದ, ಒಸಿಗೆ ಪದ, ಮಂಗಳಾರತಿ ಪದಗಳನ್ನು ತಾಯಿಯಿಂದ ಕಲಿತರು. ತಿಪ್ಪೇಸ್ವಾಮಿ ಮೇಲಿನ ಪದವನ್ನು ಹಿರಿಯೂರು ತಾಲೂಕು ಬಿದರಕೆರೆ ಗೊಲ್ಲರಹಟ್ಟಿಯ ತೋಪಜ್ಜಿಯಿಂದ ಕಲಿತರು. ಚಿತ್ರದೇವರ ಕಥೆ, ಜುಂಜಪ್ಪನ ಕಥೆಗಳನ್ನು ಇದೇ ತೋಪಜ್ಜಿಯಿಂದ ಕಲಿತರು. ಉಳಿದ ಹಾಡುಗಳಾದ ಮದುಗದ ಕೆಂಚಮ್ಮ, ಬಾಲನಾಗಮ್ಮ, ಪಾಳೆಯಗಾರರ ಹಾಡುಗಳನ್ನು ತಾನು ಹೊಲದಲ್ಲಿ ಕೆಲಸ ಮಾಡಲು ಹೋದಾಗ ಹಿರಿಯರು ಹೇಳುತ್ತಿದ್ದು ಹಾಗೂ ಬೇಡರ ಈರೋಬಮ್ಮ ಹಾಡುತ್ತಿದ್ದ ಮದಕರಿ ನಾಯಕನ ಮೇಲೆ ಪದ ಕಲಿತರು ಎಂದು ವಿವರಿಸುತ್ತಾರೆ. ಚಿತ್ರದುರ್ಗದ ಪಾಳೆಯಗಾರ ವೀರನಾಯಕ ಮದಕರಿನಾಯಕ ಹಾಗೂ ಆತನ ಸಾಹಸ, ಯುದ್ಧ ಚಿತ್ರ, ಕೊನೆಯ ದಿನಗಳಲ್ಲಿ ಮುಸ್ಲಿಮರ ದಾಳಿಗೆ ತುತ್ತಾದನು ಎಂಬುದನ್ನು ತುರುಕರ ಹಾದ್ಯವರ ಬಾಯಿಗೆ ಋಣವಾದ ಎಂಬ ಸುಧೀರ್ಘ ಕಥನಗೀತೆಯಿಂದ ತಿಳಿದುಬರುತ್ತದೆ.

ಜಾಲಿಮರದಡಿಯ ಜೋಡುಗಂಬಳಿ ಹಾಸಿ
ಜಾಣ ಮದಕೇರಿ ಪಗಡೆಯ ಆಡುವಾಗ
ಜಾವೊತ್ತಿಗೆ ನೂರು ತಲೆ ಕಾಳಗ ।

ಏರೀಯ ಹಿಂದೆ ಆರ್ಥೆಮ್ಮ ಈಯಲಾದೊ
ಆರ್ಥೆಮ್ಮೆ ಈಯದು ಋಣವಿಲ್ಲ ಮದಕೇರಿ
ತುರುಕರ ಹಾದ್ಯವದ ಬಾಯಿಗೆ ತುತ್ತಾದ ।

ಚಿತ್ರದುರ್ಗದ ಪಾಳೆಯಗಾರರ ಇತಿಹಾಸ ಅಧ್ಯಯನಕಾರರಿಗೆ ಹಲವು ಆಕೃತಿಯನ್ನು ಒದಗಿಸುವ ಈ ಮೇಲ್ಕಂಡ ಗೀತೆಗಳ ತರಹದ ಹಲವು ಕಥನಗೀತೆಗಳನ್ನು ಕಾಡುಗೊಲ್ಲರ ನಾಗಜ್ಜಿ ಹಾಡುತ್ತಿದ್ದರು.

ಇವರು ಹಾಡಿರುವ ಹಲವು ಕಥನಗೀತೆಗಳನ್ನು ಹೆಸರಾಂತ ಜಾನಪದ ಸಂಗ್ರಹಕಾರರಾದ ಕ.ರಾ.ಕೃ ಸಂಗ್ರಹಿಸಿದ್ದರು. ಕಾಡುಗೊಲ್ಲರ ಹಾಡುಗಳನ್ನು ಮೈಸೂರು ವಿಶ್ವವಿದ್ಯಾಲಯದ ಡಾ. ಅಂಬಳಿಕೆ ಹಿರಿಯಣ್ಣ ಅವರೂ ನಾಗಜ್ಜಿ ಹಾಡಿರುವ ಗೀತೆಗಳನ್ನು ೧೯೮೫ರಲ್ಲಿ ಸಂಗ್ರಹಿಸಿರುವುದು ವಿಶೇಷವಾಗಿದೆ.

ಕುರಿಗೆ ಸಂಬಂಧಿಸಿದ ಔಷಧೋಪಚಾರವನ್ನು ಮಾಡುತ್ತಿದ್ದ ಈ ಕುಟುಂಬ ಕುರಿ ಸಾಕಾಣಿಕೆಯಲ್ಲಿಯೂ ಹೆಸರುವಾಸಿಯಾದ ಕುಟುಂಬವಾಗಿತ್ತು.

# ಮಾಳಗಿ ಬಸಪ್ಪ

ಮಾಳಗಿ ಬಸಪ್ಪನವರು ಹಿರಿಯ ಯಕ್ಷಗಾನ ಕಲಾವಿದರು. ಎಪ್ಪತ್ತೈದು ವರ್ಷ ವಯಸ್ಸಿನ ಈ ಕಲಾವಿದ ಕೋಲುಮೇಳ, ಶಿವಭಜನೆ, ಪಾಂಡುರಂಗ ಭಜನೆಯಲ್ಲಿ ಪರಿಣಿತರು. ತಮ್ಮ ಬದುಕಿನ ಅರ್ಧಭಾಗವನ್ನು ಪಂಢರಾಪುರದ ಪಾಂಡುರಂಗನ ಯಾತ್ರೆಯಲ್ಲಿ ತೊಡಗುವ ಭಕ್ತರಿಗೆ ಪಾಂಡುರಂಗನ ಪದ, ಹಾಡು, ನೃತ್ಯವನ್ನು ಕಲಿಸಿಕೊಟ್ಟಿರುವ ಹಿರಿಮೆ ಇವರದು. ಇವರ ತಂದೆ ಕೆಂಚಪ್ಪನವರಿಗೆ ಜನಿಸಿದ ನಾಲ್ವರು ಮಕ್ಕಳಲ್ಲಿ ಇವರು ಮೊದಲಿಗರು. ದಾವಣಗೆರೆ, ಹೊಸಪೇಟೆ, ಕೂಡ್ಲಿಗಿ ಹಾಗೂ ಹರಪನಹಳ್ಳಿ ಭಾಗಗಳಲ್ಲಿ ಮೊದಲಿಗೆ ಡಪ್ಪಿನಾಟವನ್ನು ಪ್ರಯೋಗಿಸಿದ ಹಿರಿಮೆಯೂ ಇವರದು. ಸಣ್ಣಾಟ ಕಲಾವಿದರಾಗಿ ಕಡ್ಲೆಮಟ್ಟಿ ಸ್ಟೇಷನ್ ಮಾಸ್ತರು, ಸಂಗ್ಯಾ ಬಾಳ್ಯಾ, ತಿರುನೀಲಕಂಠ ಇವುಗಳನ್ನು ಕಳೆದ ೪೦ ವರ್ಷಗಳಿಂದಲೂ ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಮರಾಠಿ ಭಾಷೆಯಲ್ಲಿಯೂ ಪರಿಣತಿ. ಮರಾಠಿ ಭಾಗವತ ಹಾಗೂ 'ಅಭಂಗ' ಪ್ರವಚನವನ್ನು ದಸರಾ ಸಂದರ್ಭದಲ್ಲಿ ಆಸಕ್ತರ ಮನೆ ಹಾಗೂ ದೇವಾಲಯಗಳಲ್ಲಿ ಇಂದಿಗೂ ನೆರವೇರಿಸುತ್ತಾ ಬರುತ್ತಿರುವುದು ಇವರ ವಿಶೇಷವಾಗಿದೆ.

ಕೋಲುಮೇಳ ಇವರ ಮೊದಲ ಆಸಕ್ತಿಯ ನೆಲೆ. ಪಾರಂಪರಿಕ ಕೋಲುಮೇಳದ ಜೊತೆಗೆ ಆಧುನಿಕ ಸಂಗೀತವನ್ನು ಬೆರೆಸಿ ಕೋಲುಮೇಳದಲ್ಲಿ ಕೃಷ್ಣಗೋಪಿಯ ಸರಸ, ಕಂಸಮರ್ಧನ, ಕೊರವಂಜಿಕೋಲು, ಕೃಷ್ಣಾರ್ಜುನರ ಸಂಭಾಷಣೆ ಹೀಗೆ ಕೋಲುಗಳಲ್ಲಿ ರೂಪಕದ ಮಾದರಿಯಲ್ಲಿ ಕೋಲುಮೇಳ ನಡೆಸುವುದು ಇವರ ವಿಶೇಷವಾಗಿದೆ. ಮರಾಠಿಯಲ್ಲಿಯೂ ಕೋಲುಪದ ಹಾಡುತ್ತಾರೆ. ಭಜನೆ ಪದಗಳನ್ನು ಕೋಲುಮೇಳಕ್ಕೆ ಸಂವೇದಿಯಾಗಿ ಬಳಸಿಕೊಂಡು, ಕೃಷ್ಣನ ಲೀಲಾವಳಿಯನ್ನು ಹಾಡುವುದು ಇವರ ವಾಡಿಕೆಯಾಗಿದೆ.

ಪುರುಷರಂತೆ ಕೋಲಾಟವಾಡುವುದು ಮಹಿಳೆಯಲ್ಲಿಯೂ ವಾಡಿಕೆಯಾಗಿದೆ. ಪಾಂಡುರಂಗ ಭಜನಾ ಸಮಿತಿಯಲ್ಲಿನ ಭಜನಾ ಯಾತ್ರಾರ್ಥಿಗಳಿಗೆ ಕೋಲುಮೇಳವನ್ನು ಹೇಳಿಕೊಡುವುದು ಇವರ ಮತ್ತೊಂದು ಕಾಯಕವಾಗಿದೆ. ಆದುದರಿಂದಲೇ ಇವರನ್ನು ಈ ಭಾಗದಲ್ಲಿ ಭಾಗವತರೆಂದೇ ಕರೆಯಲಾಗುವುದು.

ಯಕ್ಷಗಾನ ಕಲಾವಿದರೂ ಆಗಿರುವ ಮಾಳಗಿ ಬಸಪ್ಪನವರು ತಮ್ಮ ತಂದೆ ಕೆಂಚಪ್ಪನವರಿಂದಲೇ ಪ್ರೇರಣೆ. ಭಕ್ತ ಸುಧನ್ವ, ವಿರಾಟಪರ್ವ, ದೇವಿಮಹಾತ್ಮೆ, ಶತಕಂಠ ರಾಮಾಯಣ, ಜಯವಿಜಯ, ರಾಮಾಂಜನೇಯ ಯುದ್ಧ ಈ ಪ್ರಸಂಗಗಳಲ್ಲಿ ನಾರದ, ಧರ್ಮರಾಯ, ಅರ್ಜುನ ಪಾತ್ರಗಳಲ್ಲಿ ಅಭಿನಯ ನೀಡಿದ್ದಾರೆ.

ಹಿಮ್ಮೇಳ ಭಾಗವತರಾಗಿಯೂ ಕಾರ್ಯನಿರ್ವಹಣೆ, ತಾಳವಾದ್ಯ ಕಲಾವಿದರಾಗಿ, ಕಲಾ ಸಂಘಟಕರಾಗಿ ಕಳೆದ ಐವತ್ತು ವರ್ಷಗಳಿಂದಲೂ ಹರಪನಹಳ್ಳಿ ಭಾಗಗಳಲ್ಲಿ ತೊಡಗಿಸಿಕೊಂಡಿರುವ ಮಾಳಗಿ ಬಸಪ್ಪನವರು, ಒಂದು ನೂರಕ್ಕೂ ಹೆಚ್ಚು ಕೋಲಾಟ, ಭಜನೆ, ಯಕ್ಷಗಾನ ಪದಗಳಲ್ಲಿ, ನೃತ್ಯ, ವೇಷಗಾರಿಕೆಯಲ್ಲಿ ತರಬೇತಿ ನೀಡಿದ್ದಾರೆ. ಇತ್ತೀಚೆಗೆ ಹರಪನಹಳ್ಳಿ ತಾಲ್ಲೂಕಿನ ಹಲವು ಶಾಲೆಗಳಲ್ಲಿ ಜನಪದ ಸಂಗೀತ, ಕೋಲುಮೇಳವನ್ನು ಮಕ್ಕಳಿಗೆ ಕಲಿಸಿ, ಪ್ರತಿಭಾ ಕಾರಂಜಿಗೆ ಮಕ್ಕಳನ್ನು ಸಿದ್ಧಗೊಳಿಸುವಲ್ಲಿ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯನಿರ್ವಹಿಸಿರುವುದು ಇವರ ವಿಶೇಷವಾಗಿದೆ.

**ಮಾಳಗಿ ಬಸಪ್ಪ,**
**ಕಲಾವಿದರು, ಕಸವನಹಳ್ಳಿ,**
**ಕಡಬಗೇರಿ ಅಂಚೆ, ಹರಪನಹಳ್ಳಿ ತಾಲೂಕು.**

# ಕಡಬಗೇರಿ ಉಚ್ಚಂಗಪ್ಪ

ಉಚ್ಚಂಗಪ್ಪನವರು ಹುಟ್ಟಿದ್ದು ೧೯೨೦ರಲ್ಲಿ ಚಮ್ಮಾರ ಕುಟುಂಬ. ಚರ್ಮ ಹದಮಾಡುವ ಕಾಯಕದಿಂದಾಗಿ ಸುತ್ತೇಳು ಹಳ್ಳಿಗೂ ಇವರು ಪ್ರಸಿದ್ಧರಾಗಿದ್ದ ಕುಟುಂಬ. ತಂದೆ ಎಲ್ಲಪ್ಪ, ತಾಯಿ ದ್ಯಾಮವ್ವ. ಇವರಿಗೆ ಜನಿಸಿದ ಮೊದಲ ಮಗನೇ ಉಚ್ಚಂಗಪ್ಪ. ಪ್ರಾಥಮಿಕ ಮೂರನೇ ತರಗತಿಯ ತನಕ ವಿದ್ಯಾಭ್ಯಾಸ ಮಾಡಿರುವ ಉಚ್ಚಂಗಪ್ಪ. ತನ್ನ ತಂದೆಯ ಮೂಲ ಕಸುಬಾದ ಚರ್ಮ ಹದಮಾಡುವ ಕಾಯಕಕ್ಕೆ ನಿಂತರು. ಹಗಲೆಲ್ಲ ಚರ್ಮ ಹದಗೊಳಿಸುತ್ತಾ ಸುತ್ತಲ ಹಳ್ಳಿಗಳಲ್ಲೆಲ್ಲಾ ಚರ್ಮ ಹಂಚಿಕೆಯ ಸಗಟು ಖರೀದಿದಾರರಾಗಿ ಕಾರ್ಯನಿರ್ವಹಣೆ ಮಾಡಿದರು.

ಕಡಬಗೇರಿ ಮೂಲತಃ ಸಂಗೀತ, ಯಕ್ಷಗಾನ, ಬಯಲಾಟ ಭಜನೆ ತಂಡಗಳ ಸ್ಥಳ. ನೂರಾರು ಭಜನೆ ಕಲಾವಿದರು ಶಿವಭಜನೆ, ಪಂಢರಾಪುರ ಭಜನೆಗಳಲ್ಲಿ ವಾರಗಟ್ಟಲೆ ಭಜನೆ ಕಾರ್ಯಕ್ರಮ ನಡೆಸುತ್ತಿದ್ದರು. ಸುಗ್ಗಿಕಾಲ ಬಂತೆಂದರೆ ಬಯಲಾಟ, ಯಕ್ಷಗಾನ ಅಭ್ಯಾಸ, ಶಿವರಾತ್ರಿ, ಯುಗಾದಿಯ ವರ್ಷದಡಕು, ಗಣಪತಿ ಹಬ್ಬಗಳಂದು ರಾತ್ರಿಯೆಲ್ಲಾ ಯಕ್ಷಗಾನ ಪ್ರದರ್ಶಿಸುತ್ತಿದ್ದರು. ಇವರ ತಾತನವರೂ ಯಕ್ಷಗಾನದಲ್ಲಿ ಐರಾವತ ನಾಟಕದಲ್ಲಿ ಧರ್ಮರಾಯನ ವೇಷದಲ್ಲಿ ಅಭಿನಯ ಮಾಡುತ್ತಿದ್ದರು. ತಂದೆಯವರೂ ಗಂಗೆ–ಗೌರಿ, ಪಾಂಡವರ ವನವಾಸ, ವಿರಾಟಪರ್ವಗಳಲ್ಲಿ ಕ್ರಮವಾಗಿ ಅರ್ಜುನ, ಶಿವ, ಕರ್ಣನ ಪಾತ್ರಗಳಲ್ಲಿ ಅಭಿನಯ.

ಕಡಬಗೇರಿ ಉಚ್ಚಂಗಪ್ಪ ಮೊದಲು ತಾತನವರಿಂದ ಪ್ರೇರಣೆ, ಶಾರದೆ, ದ್ರೌಪದಿ, ಗಾಂಧಾರಿ ಪಾತ್ರಗಳಲ್ಲಿ ಅಭಿನಯ, ನಂತರ ಕರ್ಣಾರ್ಜುನರ ಕಾಳಗದಲ್ಲಿ ಕರ್ಣನಾಗಿ, ಪಾಂಡವರ ವನವಾಸದಲ್ಲಿ ಅರ್ಜುನನಾಗಿ, ವೀರ ಅಭಿಮನ್ಯು ಕಾಳಗದಲ್ಲಿ ಅಭಿಮನ್ಯು ಪಾತ್ರದಲ್ಲಿ ಅಭಿನಯ ನೀಡಿದರು. ಬಯಲಾಟ ಪ್ರದರ್ಶನದಲ್ಲಿ ಹಿಮ್ಮೇಳ ಗಾಯಕರಾಗಿ,

ಪಾಂಡವರ ವನವಾಸ, ವಿರಾಟಪರ್ವ, ಲಂಕಾದಹನ, ಕೀಚಕನ ವಧೆ, ಅಭಿಮನ್ಯು ಕಾಳಗದಲ್ಲಿ ಭಾಗವಹಿಸಿದರು.

ಒಮ್ಮೆ ಯಕ್ಷಗಾನ ಪ್ರದರ್ಶನ ಏರ್ಪಾಡಾಗಿತ್ತು. ಬಣ್ಣದ ವೇಷ, ಪೂಜೆ, ಎಲ್ಲವೂ ನಡೆಯಿತು. ಭಾಗವತರಿಗೆ ಹೊಸಬಟ್ಟೆ, ಗುರುಕಾಣಿಕೆ ನೀಡಿ ಪೂಜೆ ನಡೆಸಿ ಪ್ರದರ್ಶನವನ್ನು ಆರಂಭಿಸಿದರು. ಕೊನೆಗೆ ಭಾಗವತರಿಗೆ ಕುಡಿಯುವುದಕ್ಕೆ ಕೊಡುವುದರಲ್ಲಿ ಏನು ವ್ಯತ್ಯಾಸ ಆಯಿತೋ ಕಾಣೆ, ಭಾಗವತರು ದೊಡ್ಡ ರಂಪ ಮಾಡಿಬಿಟ್ಟರು. ಕೊನೆಗೆ ತಾಳ ಹಿಡಿಯುವುದೇ ಇಲ್ಲ ಎಂದು ಷರತ್ತು ವಿಧಿಸಿ ಹೊರ ನಡೆದರು. ಅರೆಕ್ಷಣ ಕಲಾವಿದರೆಲ್ಲರೂ ಮಂಕಾದರು. ನಾಟಕ 'ವಿರಾಟ ಪರ್ವ', ಶಿವರಾತ್ರಿಯ ಕಾಲ. ತುಂಬಾ ಜನ ಸೇರಿದ್ದರು. ನಾಟಕ ನಿಂತೇ ಹೋಯಿತು ಅನ್ನುವಾಗ ಕೆಲವರು ನನ್ನ ಒಂದು ಮಾತು ಕೇಳಿ, 'ನೀವು ಮುಂದುವರಿಸಲು ಸಾಧ್ಯವೇ?' ಎಂದರು. ಮುಖವೀಣೆ, ಮೃದಂಗ ಕಲಾವಿದರೂ 'ಮಾಡೋಣ ಬನ್ನಿ' ಎಂದರು. ನನಗೆ ತಿಳಿದ ರೀತಿಯಲ್ಲಿ ನಾಟಕ ಮುಂದುವರಿಸಿದೆ. ನಾಟಕ ತುಂಬಾನೇ ಕಳೆಕೊಟ್ಟಿತು. ನಿಂತುಹೋಗಿದ್ದ ಯಕ್ಷಗಾನ ಮುಂದುವರಿಸಿದ ಬಗೆಗೆ ಮೆಚ್ಚುಗೆ ವ್ಯಕ್ತವಾಯಿತು. ಮುಂದೆ ಆ ಊರಿಗೆ ನಾನೇ ಖಾಯಂ ಭಾಗವತನಾಗಿ ನೇಮಕವಾದೆ.

ನನ್ನ ೮೦ ವರ್ಷ ವಯೋಮಾನದಲ್ಲಿ ಏನಿಲ್ಲ ಅಂದರೂ ಒಂದು ನೂರು ಪ್ರಯೋಗ ಮಾಡಿಸಿರಬಹುದು ಎನ್ನುತ್ತಾರೆ. ದಾವಣಗೆರೆ, ಹರಪನಹಳ್ಳಿ, ಸಾಣೆಹಳ್ಳಿ, ಹೊಸದುರ್ಗ, ಕೂಡ್ಲಿಗಿ, ಹೊಸಪೇಟೆ, ಮೈಲಾಪುರ ಇಲ್ಲೆಲ್ಲ ಯಕ್ಷಗಾನ ಕಲಿಸಿದ್ದಾರೆ. ಇವರ ಶಿಷ್ಯರೂ ಯಕ್ಷಗಾನ ಭಾಗವತರಾಗಿದ್ದಾರೆ. ದುಶ್ಯಾಸನ ಕಾಳಗ, ಪಾಂಡವರ ವನವಾಸ, ವೀರ ಅಭಿಮನ್ಯು, ಶಿವಜಲಂಧರ, ಕರ್ಣಾರ್ಜುನರ ಕಾಳಗ, ಚಿತ್ರಾಂಗದ ಇವು ನಾನು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು.

ಯಾವುದೇ ಪ್ರಶಸ್ತಿ ಪುರಸ್ಕಾರಕ್ಕೂ ಕಿವಿಗೊಡೆ ಚರ್ಮಗಾರಿಕೆ ಹಾಗೂ ಚರ್ಮವಾದ್ಯ ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವ ಹಿರಿಯ ಕಲಾವಿದ ಹುಚ್ಚಂಗಪ್ಪನವರು.

**ಹುಚ್ಚಂಗಪ್ಪ,**
**ಕಡಬಗೆರೆ ಅಂಚೆ, ಹರಪನಹಳ್ಳಿ ತಾಲೂಕು.**

## ಹಲುವಾಗಲು ದೇವೇಂದ್ರಪ್ಪ

ಕರ್ನಾಟಕ ತೊಗಲುಗೊಂಬೆ, ಸೂತ್ರದ ಗೊಂಬೆ ಆಟಕ್ಕೆ ಹೊಸ ಆಕೃತಿಯನ್ನು, ಆಯಾಮವನ್ನು ಒದಗಿಸಿದ ಹಿರಿಯ ಕಲಾವಿದ, ಶಿಲ್ಪಿ ಭಾಗವತ, ನಾಟಕಕಾರ ಈ ಎಲ್ಲ ಹಿರಿಮೆಗೆ ಪಾತ್ರರಾದವರು ಹಲುವಾಗಲು ದೇವೇಂದ್ರಪ್ಪನವರು. ೭-೮-೧೯೨೨ರಲ್ಲಿ ಜನನ. ತಂದೆ ಶ್ರೀ ರುದ್ರಪ್ಪ, ತಾಯಿ ಕಾಶವ್ವನವರು. ಈ ಪುಣ್ಯದಂಪತಿಗಳಿಗೆ ಜನಿಸಿದ ಐವರು ಗಂಡು, ಆರು ಹೆಣ್ಣುಮಕ್ಕಳಲ್ಲಿ ದೇವೇಂದ್ರಪ್ಪನವರು ಎರಡನೆಯವರು. ತಮ್ಮ ಅಪೂರ್ವ ಗೊಂಬೆಕಲೆಯ ಪ್ರಸಾರ, ತಯಾರಿಕೆಯ ವಿಶೇಷತೆಗಾಗಿ ೧೯೮೩ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದ ಅಪ್ಪಟ ಕಲಾವಿದರು. ಆಕರ್ಷಕ ಗೊಂಬೆ ತಯಾರಿಕೆ, ಅವುಗಳನ್ನು ಸೂತ್ರದ, ತೊಗಲಿನ ಸೂತ್ರಗಳಿಗೆ ಅಳವಡಿಸಿ, ಅದಕ್ಕೆ ಒಪ್ಪುವ ಯಕ್ಷಗಾನ ಕಥಾ ಪ್ರಸಂಗಗಳನ್ನು ತಾವೇ ಸೃಷ್ಟಿಸಿ, ಕಥೆ ಮಾಡುವುದು ಇವರ ವಿಶಿಷ್ಟ ಕಲೆಗಾರಿಕೆ.

ದೇವೇಂದ್ರಪ್ಪನವರು ಓದಿದ್ದು ಕೇವಲ ೪ನೇ ತರಗತಿಯವರೆಗೆ ಮಾತ್ರ. ಆ ಕಾಲದಲ್ಲಿ ಸರ್ಕಾರಿ ಶಾಲೆಗಳೂ ಇಲ್ಲದ ಸಂದರ್ಭದಲ್ಲಿ ತಮ್ಮ ಗ್ರಾಮಕ್ಕೆ ಬಂದ ತಾಲ್ಲೂಕು ಬೋರ್ಡ್ ಶಾಲೆಯ ಸಹಾಯ ಇವರಿಗೆ ವರವಾಗಿ ಪರಿಣಮಿಸಿತು. ಆದರೆ ಆ ಗ್ರಾಮದಲ್ಲಿ ಎಟುಕಬಹುದಾದ ಶಿಕ್ಷಣ ಮಾತ್ರ ಪಡೆದು ಮುಂದಿನ ವ್ಯಾಸಂಗ ಮಾಡಲು ಸಾಧ್ಯವಾಗಲಿಲ್ಲ. ತಂದೆ, ತಾತರ ಕಾಲದಿಂದಲೂ ಬಂದಿದ್ದ ಬಡಗಿ ಕಾಯಕದ ಮುಂದುವರಿಕೆ ಇವರಿಗೆ ಉದ್ಯೋಗ ದೃಷ್ಟಿಯಿಂದ ಮುಖ್ಯವಾಯಿತು. ಆದರೆ ತಂದೆ, ತಾತರಿಗಿಂತ ಭಿನ್ನವಾಗಿ ಮರದ ಕೆಲಸದಿಂದಲೇ ಕಲಾ ನೈಪುಣ್ಯತೆ ರೂಢಿಸಿಕೊಳ್ಳುವುದರ ಜೊತೆಗೆ ಅಂದವಾದ ಗೊಂಬೆ ಕೆತ್ತನೆಯ ಕೆಲಸಕ್ಕೆ ಚಾಲನೆ ನೀಡಿದರು. ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿಯೇ ಮರದಿಂದ ಗೊಂಬೆ ಕೆತ್ತುವ, ಬಣ್ಣಗಳಿಂದ ಅಲಂಕರಿಸುವ ಪ್ರೌಢಿಮೆಯನ್ನು ರೂಢಿಸಿಕೊಂಡರು. ಜೊತೆಗೆ ಹಾಡುಗಾರಿಕೆ, ಭಾಗವಂತಿಕೆ, ನೃತ್ಯ

ಪ್ರದರ್ಶನವನ್ನು ಗುರುಮೂಲದಿಂದ ಕಲಿತರು. ತಂದೆ ರುದ್ರಪ್ಪನವರೂ ಸಂಗೀತ ಕಲಾವಿದರು. ಇವರ ಜೊತೆಗೆ ಮದ್ದಳೆ ನಾಗೇಂದ್ರಪ್ಪ, ಶಂಭುಲಿಂಗಾಚಾರಿ, ಲಕ್ಷ್ಮಣ ಮಲ್ಲಾಡದ ಇವರ ಸಂಪರ್ಕ, ಸಹವಾಸದಿಂದ ಕಲಾತಂಡವನ್ನು ಕಟ್ಟುವ ಆಲೋಚನೆಯೂ ಬೆಳೆಯಿತು. ೧೯೫೩ರಲ್ಲಿ ಈ ಎಲ್ಲ ರಂಗಸಂಪನ್ಮೂಲ ಕಲಾವಿದರನ್ನು ಬಳಸಿಕೊಂಡು ತಮ್ಮ ಹುಟ್ಟೂರು ಹಲುವಾಗಲು ಗ್ರಾಮದಲ್ಲಿ ಶ್ರೀ ಮಾರುತಿ ಯಕ್ಷಗಾನ ಗೊಂಬೆ ನಾಟ್ಯ ಸಂಘವನ್ನು ಸ್ಥಾಪಿಸಿದರು. ಈ ಸಂಘದ ಮೂಲಕ ರಾಮರಾವಣರ ಯುದ್ಧ, ಗಿರಿಜಾ ಕಲ್ಯಾಣ, ಸೀತಾಪಹರಣ, ದುಶ್ಯಾಸನ ಕಥೆ, ಗಜಗೌರಿ ವ್ರತ, ಸೀತಾ ಸ್ವಯಂವರ. ಈ ಪ್ರಸಂಗಗಳನ್ನು ಗೊಂಬೆಗಳ ಮೂಲಕ ಅಭಿನಯಿಸಿ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು, ಹೊಸಪೇಟೆ, ಧಾರವಾಡ, ರಾಣೆಬೆನ್ನೂರು, ಹಾವೇರಿ ಪ್ರಾಂತ್ಯಗಳಲ್ಲಿ ಪ್ರಸಿದ್ಧರಾದರು. ಹದಿನಾಲ್ಕು ವರ್ಷಗಳ ಸಮರ್ಥ ಕಲಾಸಂಘಟನೆ, ಪ್ರದರ್ಶನಗಳಿಂದ ಆಕರ್ಷಿತರಾದ ಕಲಾವಿದರು ೧೯೬೮ರಲ್ಲಿ ದೇವೇಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀಶಕ್ತಿ ಗೊಂಬೆ ಆಟ ಮಂಡಳಿಯನ್ನು ಆರಂಭಿಸಿಕೊಂಡು ಇವರ ಮಾರ್ಗದರ್ಶನಲ್ಲಿ ಗೊಂಬೆ ಆಟ ಪ್ರದರ್ಶನವನ್ನು ನಡೆಸುತ್ತಾ ಬಂದರು. ಜೊತೆಗೆ ಗೊಂಬೆ ರಚನಾ ಕಲೆಯನ್ನು ಆಸಕ್ತಿಗೆ ಗುರು–ಶಿಷ್ಯ ಮಾದರಿಯಲ್ಲಿ ಹೇಳಿಕೊಡುವುದಕ್ಕೆ ಮುಂದಾದರು. ತ್ಯಾಗಿ, ಹಾಲುವಾಣ, ಮಳಗಿ ಮರಗಳಿಂದ ಗೊಂಬೆ ತಯಾರಿಕೆಯ ಕಲೆಯನ್ನು ಕಲಿಸಿದರು. ಇವರಿಗೆ ಸಹಾಯಕರಾಗಿ ತಮ್ಮ ರಾಮಚಂದ್ರಪ್ಪನವರು ಜೊತೆಗೂಡಿದರು. ಗೊಂಬೆ ಕಾಯಕದ ಜೊತೆಗೆ ಸೋಮ, ಸ್ತ್ರೀ ದೇವತೆಗಳ ವಿಗ್ರಹ, ಹರಿಗೆ ತಯಾರಿಕೆ, ಮರದ ಗೊಂಬೆಗಳಿಗೆ ಆಕರ್ಷಕ ಬಣ್ಣ ಹಾಕುವುದು ಇವರ ನಿತ್ಯದ ಕಾಯಕವಾಯಿತು.

ದೇವೇಂದ್ರಪ್ಪನವರು ೧೯೫೩ರಿಂದ ಗೊಂಬೆ ತಯಾರಿಕೆ, ಬಣ್ಣ ಹಾಕುವ ಕಾಯಕವನ್ನು ಒಂದು ಕಲೆಯಾಗಿ ರೂಢಿಸಿಕೊಂಡು ಬಂದರೂ ಇವರ ಕಲೆಯ ಹಿರಿಮೆ ಪ್ರಸಾರವಾಗಿದ್ದು ೧೯೯೦ ರಿಂದ ೧೯೯೨ ರಲ್ಲಿ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ವೀರ ಅಭಿಮನ್ಯು ಗೊಂಬೆ ಮೇಳವನ್ನು ಮೂರು ದಿನಗಳ ಕಾಲ ನಡೆಸಿದರು. ಮದ್ರಾಸ್, ದೆಹಲಿ, ತಂಜಾವೂರು, ತ್ರಿವೇಂಡ್ರಂ, ಹೈದರಾಬಾದ್, ನಾಗಪುರಗಳಲ್ಲಿಯೂ ಸರ್ಕಾರದ ಸಾಂಸ್ಕೃತಿಕ ವಿನಿಮಯ ಯೋಜನೆಯಡಿಯಲ್ಲಿ ಕಲಾಪ್ರದರ್ಶನ ನೀಡುತ್ತಾ ಬಂದರು. ಪುರಾಣ ಪ್ರಸಂಗವನ್ನು ಗೊಂಬೆ ಮೇಳಕ್ಕೆ ಬಳಸಿಕೊಳ್ಳುತ್ತಿದ್ದುದರಿಂದ ಈ ವಸ್ತುಗಳು ರಾತ್ರಿ ಪೂರಾ ಬೇಕಾಗುತ್ತಿದ್ದುದರಿಂದ ಸಾಂದರ್ಭಿಕ ಪ್ರಯೋಗಕ್ಕೆ ಅನುಕೂಲವಾಗುವ ಹಾಗೆ ವೀರ ಅಭಿಮನ್ಯು, ಸೀತಾಪಹಾರಣ, ಗಿರಿಜಾಕಲ್ಯಾಣ, ದುಶ್ಯಾಸನ ವಧೆ, ಸುಭದ್ರ ಕಲ್ಯಾಣ, ಗಜಗೌರಿವ್ರತ, ರಾಮರಾವಣರ ಯುದ್ಧ ಇವುಗಳ ಹಸ್ತಪ್ರತಿ ರಚಿಸಿ ತಮ್ಮ ಕಲಾಪ್ರದರ್ಶನದಲ್ಲಿ ಬಳಸಿಕೊಳ್ಳ ತೊಡಗಿದರು.

ದೇವರುಗಳ ರಥ ತಯಾರಿಸುವುದು ಇವರ ಇನ್ನೊಂದು ಹವ್ಯಾಸ. ಮೈಲಾರದ ಮೈಲಾರಲಿಂಗೇಶ್ವರ ತೇರು, ಹಲುವಾಗಲು ಈಶ್ವರ, ಮಜ್ಜಿಗೇರಿ ಆಂಜನೇಯ, ಮಾಚಿಹಳ್ಳಿ ದುರ್ಗಮ್ಮ ಈ ಬಗೆಯ ಸುಮಾರು ೨೦ಕ್ಕೂ ಹೆಚ್ಚು ದೇವರ ರಥಗಳನ್ನು ನಿರ್ಮಿಸಿದ್ದಾರೆ. ೧೯೭೯ರಲ್ಲಿ ಹೈದರಾಬಾದ್ ದೂರದರ್ಶನದ ಮೂಲಕ ವೀರ ಅಭಿಮನ್ಯು ಕಲಾಪ್ರದರ್ಶನ ನಂತರ ಬೆಂಗಳೂರು ದೂರದರ್ಶನ ಕೇಂದ್ರದಿಂದ ಪ್ರದರ್ಶನ. ಈ ಬಗೆಯ ಕಲಾಸಾಧನೆಯ ಹಿನ್ನೆಲೆಯಲ್ಲಿ ದೇವೇಂದ್ರಪ್ಪ ಅವರ ಬದುಕು ಕುರಿತು ಜನಪದ ವಿದ್ವಾಂಸ, ಕಲಾವಿದ ಕುಂಬಾ ಸದಾಶಿವಪ್ಪನವರು ೨೦೦೪ರಲ್ಲಿ "ದೇವೇಂದ್ರಪ್ಪ ಹಾಗೂ ಜನಪದ ಕಲೆಗಳು", ಪುಸ್ತಕವನ್ನು ಪ್ರಕಟಿಸಿದ್ದಾರೆ.

## ಬೇಗಾರರ ಎಲಿಸವ್ವ

ಬೇಗಾರರ ಎಲಿಸವ್ವ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮದವರು. ಅದೇ ಗ್ರಾಮದ ಹೊಸೂರಯ್ಯ ಎಂಬುವರ ಹೆಂಡತಿ. ತಂದೆ ಮೂಡಲಪ್ಪ, ತಾಯಿ ಕದರಮ್ಮ. ತಮ್ಮ ಹಾಡಿಗೆ ಗುರುಮೂಲ ಎಂಬುದಿಲ್ಲ, ಬಾಲಕಿಯಾಗಿದ್ದಾಗ ಹೊಲದ ಕೆಲಸಕ್ಕೆ ಕೂಲಿಗಾಗಿ ಹೋಗುತ್ತಿದ್ದಾಗ ಒಡ್ಡರ ತಿಮ್ಮಕ್ಕ, ಗೊಲ್ಲರ ಚಿನ್ನಮ್ಮ, ಹಿರೋಬಕ್ಕ ಅವರು ಸೊಗಸಾಗಿ ಹಾಡುತ್ತಿದ್ದರು. ಅವರು ಹಾಡುತ್ತಿದ್ದ ಹಾಡೇ ನನಗೆ ಸ್ಫೂರ್ತಿ ಎನ್ನುತ್ತಾರೆ. ತಮ್ಮ ತಾಯಿ ಕದರಮ್ಮನೂ ಗಂಗೆ ಗೌರಿ ಪದ, ಮದುಗದ ಕೆಂಚಮ್ಮ, ಗುಣಸಾಗರಿ ಮೇಗಳ ಪದವನ್ನು ಹಾಡುತ್ತಿದ್ದರು. ಅವರಿಂದ ಈ ಕಥನ ಗೀತೆಗಳನ್ನು ಹಾಡುವುದನ್ನು ಹಾಡುತ್ತಿದ್ದರು. ಅವರಿಂದ ಈ ಕಥನ ಗೀತೆಗಳನ್ನು ಹಾಡುವುದನ್ನು ಕಲಿತರು. ತಂದೆ ಗೋಡೆ ನಿರ್ಮಾಣ, ಮನೆ ಕಟ್ಟುವ ಕೆಲಸ ನಿರ್ಮಿಸುತ್ತಿದ್ದುದರಿಂದ ಊರಿಂದ ಊರಿಗೆ ಹೋಗುತ್ತಿದ್ದರು. ಅಂಥ ಸಂದರ್ಭದಲ್ಲಿ ಅವರಿಗೆ ಸಹಾಯಕ್ಕೆ, ಕೆಲವೊಮ್ಮೆ ಕೂಲಿ ಕೆಲಸಕ್ಕೆ ಎಲಿಸವ್ವನೂ ಹೋಗುತ್ತಿದ್ದರು. ಹಾಗಾಗಿ ತಾನು ಹೋದ ಕಡೆಯಲ್ಲೆಲ್ಲಾ ಪದ ಹಾಡುವುದು, ಇತರ ಹೆಂಗಳೆಯರಿಗೆ ಕಲಿಸುವುದು ಈಕೆಯ ವಿಶೇಷವಾಗಿತ್ತು. ಇವರು ಹಿರಿಯೂರು ಸಮೀಪದ ಬಿದರಕೆರೆ, ಗೊಲ್ಲರಹಟ್ಟಿಯ ಬಳಿ ಕೆಲಸಕ್ಕೆ ಹೋಗಿ, ಅಲ್ಲಿ ಹಲವು ವರ್ಷ ಇದ್ದುದೂ ಉಂಟು. ಅಂಥ ಸಂದರ್ಭಗಳಲ್ಲಿ ಇಲ್ಲಿನ ಹಾಡುಗಾರ್ತಿ ತೋಪಮ್ಮನು ಹಾಡುತ್ತಿದ್ದ ಹಾಡುಗಳನ್ನು ಕೇಳಿ, ತಾನೂ ಹೀಗೇ ಹಾಡಬೇಕೆಂಬ ಬಯಕೆ, ಒತ್ತಾಯದಿಂದ ಕೆಲವು ಪದಗಳನ್ನು ಕಲಿತರು. ಚಿತ್ರದುರ್ಗ ಪಾಳೆಯಗಾರರ ಮೇಲಿನ ಪದವನ್ನು ಕಲಿತದ್ದು ಈ ಸಂದರ್ಭದಲ್ಲಿಯೇ. ಒಮ್ಮೆ ಹರ್ತಿಕೋಟೆಯ ಪಿ.ಆರ್. ತಿಪ್ಪೇಸ್ವಾಮಿಯವರು ಹಿರಿಯೂರಿನ ಒಂದು ಮನೆಗೆ ಬಂದಾಗ ತೋಪಮ್ಮನನ್ನು ಕಂಡು ಮಾತನಾಡಿಸಿದಾಗ ಅವರಿಂದ ನನ್ನ ಪರಿಚಯವೂ

ಆಯಿತು. ನೀನು ಎಷ್ಟು ಹಾಡು ಹಾಡುತ್ತೀಯಮ್ಮ ಎಂದು ಕೇಳಿದರು. ನನಗೆ ತಿಳಿದ ಹಾಡುಗಳ ವಿವರವನ್ನು ಹೇಳಿದೆ. ವಾರದ ಒಪ್ಪತ್ತಿನೊಳಗೆ ಕರಾಕ್ರ ಎಂಬ ಇನ್ನೊಬ್ಬರೊಂದಿಗೆ ನಾನು ಇದ್ದ ಜಾಗಕ್ಕೆ ಬಂದರು. ಮೊದಲು ನನ್ನನ್ನು ಮಾತಾಡಿಸಿ, ನಮ್ಮ ತಂದೆಗೆ ಹೇಳಿ, ತಾಯಿಗೆ ಅಡಕೆ ವೀಳೆ ಕೊಟ್ಟು ಸಂಜೆಗೆ ಪದ ಹಾಡಬೇಕೆಂದು ಕೇಳಿಕೊಂಡರು. ಆಗ ನನಗೆ ಭಯವಿದ್ದರೂ ಹಾಡುವುದಕ್ಕೆ ಒಪ್ಪಕೊಂಡೆ. ಊರ ಮಧ್ಯದಲ್ಲಿದ್ದ ದೇವಸ್ಥಾನದ ಜಗಲಿಗೆ ಬರುವಂತೆ ಹೇಳಿದಾಗ ನಾನೂ, ನ್ನ ತಾಯಿಯೂ ಹೋದೆವು. ಅಲ್ಲಿ ಚಿತ್ರದುರ್ಗದ ಪಾಳೆಯಗಾರರ ಪದಗಳನ್ನು ಹಾಡಿದೆನು. ಅದರಲ್ಲಿ ಕೆಲವು ಹಾಡುಗಳನ್ನು ಕರಾಕ್ರ, ಪಿಆರ್‌ಟಿ ಬರೆದುಕೊಂಡರು. ಆಗ ಮಾತ್ರ ನಿಧಾನವಾಗಿ ತಿರುಗಿ ತಿರುಗಿ ಹೇಳಿದೆ ಎಂದು ನುಡಿಯುತ್ತಾರೆ. ಬೇಗಾರರ ಎಲಿಸವ್ವ ಹಾಡಿರುವ ಹಾಡುಗಳಲ್ಲಿ ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ಹಾಡುಗಳು ಚಿತ್ರಕಲ್ಲು ಮದಕರಿ ಪುಸ್ತಕದಲ್ಲಿ ಪ್ರಕಟವಾಗಿವೆ.

ಎದ್ದನು ಮದಕೇರಿ ಒಂದೆಳೆ ಮೀಸೆ ತಿರುವುತ
ಗಗ್ಗರದೋರನ್ನೆಲ್ಲ ಕರೆಸಾನೋ ಮಾಯಿಕೊಂಡ
ದಿಬ್ಬದ ಮೇಲೆನ್ನ ಸರಲೆಗ್ಗೆ । ಸಂದಾನಿತಾನ ।
ಉಚ್ಚಂಗಿದುರುಗವ ಮೂರು ಸುತ್ತು ಇಕ್ಕೊತ್ತಿಗೆ
ಕತ್ತಲು ಆದಾವು ಪಿರಂಗಿಗೆ । ತಂದಾನಿತಾನ

ಹೀಗೆ ಐತಿಹಾಸಿಕ ಕಥನ ಗೀತೆಗಳನ್ನು ರಾತ್ರಿ ಹಗಲೆನ್ನದೆ ಹಾಡುವ ಎಲಿಸವ್ವ ಎಂದೂ ಸುಖ ಕಂಡ ಹೆಣ್ಣಲ್ಲ. ಬಡತನ, ಅಲೆದಾಟ, ಕೂಲಿ ಕೆಲಸ ಆದರೂ ಹಾಡುವುದು, ಹಾಡುತ್ತಲೇ ದಿನ ಕಳೆಯುವುದು ಈಕೆಗೆ ಪ್ರಿಯವಾದ ಕಾಯಕ. ಪಿ. ಆರ್. ತಿಪ್ಪೇಸ್ವಾಮಿ ನಾಯಕನಹಟ್ಟಿ ಸಮಾರಂಭದಲ್ಲಿ ಕರೆಸಿ ಸನ್ಮಾನಿಸಿದ್ದರು. ಹರ್ತಿಕೋಟೆಯ ಓರೆಗಲ್ಲಪ್ಪನ ಜಾತ್ರೆಯಲ್ಲಿ ಒಂದು ಬಾರಿ ಹಾಡಿದೆನು. ಹೆಚ್. ವಿ. ವೀರಭದ್ರನಾಯಕರೂ ನನ್ನಿಂದ ಪದ ಹಾಡಿಸಿ ಬರೆದುಕೊಂಡಿದ್ದರು ಎನ್ನುತ್ತಾರೆ ೯೫ ವರ್ಷದ ಹಿರಿಯ ಕಲಾವಿದೆ ಎಲಿಸವ್ವ.

ಎಲಿಸವ್ವ,
ಉಚ್ಚಂಗಿದುರ್ಗ, ಹರಪನಹಳ್ಳಿ ತಾಲೂಕು.

## ಪಲವನಹಳ್ಳಿ ಹನುಮಂತಪ್ಪ

ಹನುಮಂತಪ್ಪ ದಾವಣಗೆರೆ ಜಿಲ್ಲೆಯ ಹೊನ್ನಾಳಿಗೆ ಸಮೀಪದ ಪಲವನಹಳ್ಳಿಯವರು. ಕುಂಚಿಟಿಗ ಒಕ್ಕಲಿಗ ಜನಾಂಗಕ್ಕೆ ಸೇರಿದ ಈತ ಕೃಷಿ ಕಾಯಕದ ಕುಟುಂಬ. ಆದರೆ ಕುಟುಂಬಕ್ಕಿಂತ ನಾಟಕ ಕಲೆಯ ಗೀಳು ಇವರದು. ಯಕ್ಷಗಾನ, ಪೌರಾಣಿಕ ನಾಟಕಗಳಲ್ಲಿ ಬಫೂನ್ ಪಾತ್ರಗಳ ಮೂಲಕ ಜನರನ್ನು ರಂಜಿಸುತ್ತಾ, ಪ್ರಸಿದ್ಧಿಗೆ ಬಂದವರು.

ಕಂಪನಿ ನಾಟಕಗಳಲ್ಲಿ ಹಾರ್ಮೋನಿಯಂ ಮಾಸ್ತರರಾಗಿದ್ದ ಸಂಗೀತ ವಿದ್ವಾನ್ ಕಬ್ಬಾರ್ ಹನುಮಂತಪ್ಪ ಇವರ ಪ್ರೀತಿಯ ಶಿಷ್ಯರು. ಪ್ರಸಿದ್ಧ ಜಾನಪದ ಹಾಡುಗಾರ ಯುಗಧರ್ಮ ರಾಮಣ್ಣನವರ ಒಡನಾಟದಿಂದಾಗಿ ಹತ್ತಾರು ವೇದಿಕೆಗೆ ಬರಲು ಪ್ರೇರಣೆ. ಲಾವಣಿ, ಸೋಬಾನೆ ಪದಗಳನ್ನು ಹಾಡುತ್ತಾರೆ.

ಯಕ್ಷಗಾನಗಳಲ್ಲಿ ಭೀಮ, ಜರಾಸಂಧ, ಬಾಣಾಸುರ ಈ ಮುಂತಾದ ಘೋರ ಪಾತ್ರಗಳ ಅಭಿನಯದಲ್ಲಿಯೂ ಹಾಸ್ಯ ಸಂದರ್ಭವನ್ನು ಸೃಷ್ಟಿಸಿ ಜನರನ್ನು ನಗೆಯ ಕಡಲಲ್ಲಿ ತಳ್ಳಿದ ಹಿರಿಮೆ ಇವರದು. ಶ್ರೀಕೃಷ್ಣ, ನಾರದ ಇವರ ಇತ್ತೀಚಿನ ಪಾತ್ರಗಳು. ಎಪ್ಪತ್ತು ವರ್ಷಗಳ ಈ ತುಂಬು ಬದುಕಿನಲ್ಲೂ ಬಣ್ಣ ಹಚ್ಚುವ, ಹಾಡು, ಹಾಸ್ಯ, ಗಂಭೀರ ನೆಲೆಯ ಸಂಭಾಷಣೆಗಳಿಂದ ನಿಜವಾದ ಕಲಾವಿದ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ.

ಹೊನ್ನಾಳಿಯ ಮಠದ ಪವಾಡಗಳನ್ನು ಕಂಠಪಾಠದಂತೆ ಹಾಡುವ ಧಾರ್ಮಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಹನುಮಂತಪ್ಪ ದಾವಣಗೆರೆ, ಧಾರವಾಡ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಬಾಲ್ಯದಿಂದಲೂ ಕಂಪನಿ ನಾಟಕದ ಸಹವಾಸ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿಯೂ

ಪಾತ್ರವಹಿಸಿರುವ ಇವರದು ಪ್ರಧಾನವಾಗಿ ಹಾಸ್ಯಪಾತ್ರ. ನಾರಿಯರ ಹಾವಭಾವ, ನಡಾವಳಿಯಂತೆ ವರ್ತಿಸುವ ರೀತಿ ನಿಜಕ್ಕೂ ಅದ್ಭುತ. ಸ್ಥಳೀಯ ಸಭೆ ಸಮಾರಂಭಗಳಲ್ಲಿ ಗೌರವ. ಜಿಲ್ಲಾ ದುರ್ಗೋತ್ಸವದಲ್ಲಿ ವಿಶೇಷ ಗೌರವ. ಇವರ ಕಲಾವಂತಿಕೆಯನ್ನು ಗುರುತಿಸಿ ಮೊಟ್ಟಮೊದಲು ಜಾನಪದ ಮೇಳ ಹೊನ್ನಾಳಿ ತಾಲ್ಲೂಕು ಸಂತೆಬೆನ್ನೂರಲ್ಲಿ ಇವರಿಂದ ಹಾಸ್ಯಾವಳಿ ಏರ್ಪಡಿಸಿದ್ದರು. ಸುಮಾರು ೨ ಗಂಟೆಗಳ ಕಾಲ ನಿರಂತರವಾಗಿ ಹಾಸ್ಯಪ್ರಸಂಗಗಳನ್ನು ನಡೆಸಿಕೊಟ್ಟರು. ೨೦೦೫ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಲಾಗಿದೆ. ಯಕ್ಷಗಾನ, ವೇಷ, ಭಾಗವಂತಿಕೆ, ಹಾಸ್ಯ, ಸ್ತ್ರೀವೇಷಗಾರಿಕೆ ಈ ಎಲ್ಲವುಗಳಿಂದ ಕಲಾಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿರುವ ೯೦ ವರ್ಷದ ಶ್ರೀಯುತರು ದಾವಣಗೆರೆ ಜಿಲ್ಲೆಯ ಪ್ರಸಿದ್ಧ ಕಲಾವಿದ ಎಂಬುದು ಹೆಮ್ಮೆಯ ಸಂಗತಿಯಾಗಿದೆ.

ಪಲವನಹಳ್ಳಿ ಹನುಮಂತಪ್ಪ,
ಪಲವನಹಳ್ಳಿ, ಚನ್ನಗಿರಿ ತಾಲೂಕು.

# ಗೊಂಡೇರ ಗೋವಿಂದಪ್ಪ

ಗೋವಿಂದಪ್ಪ ಜಗಳೂರು ತಾಲ್ಲೂಕು ಉಚ್ಚಂಗಿಪುರದವರು. ಕಾಡುಗೊಲ್ಲರ ಜನಾಂಗಕ್ಕೆ ಸೇರಿದ ಈ ಕಲಾವಿದ ಕಾಡುಗೊಲ್ಲರ, ಕುರುಬರ ಸಾಂಸ್ಕೃತಿಕ ರಾಯಭಾರಿಯಂತಿದ್ದರು. ಈ ಜನಾಂಗದ ಯಾವುದೇ ನ್ಯಾಯತೀರ್ಮಾನ, ಧಾಮಿಕ ಸಮಾರಂಭಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಹಿರೀಕ. ಬುಡಕಟ್ಟು ಸಂಸ್ಕೃತಿಯನ್ನು ಸದಾಪಾಲಿಸುತ್ತಾ ಆ ಹಿನ್ನೆಲೆಯ ಪದ, ಗಣೆ, ಗಾದೆ, ಒಗಟುಗಳ ಮೂಲಕ ಸದಾ ಎಲ್ಲರ ಗಮನ ಸೆಳೆಯುತ್ತಿದ್ದರು. ಗೊಂಡೇರ ಎಂಬುದು ಇವರ ಮನೆತನ. ಗೊಂಡೇರ ಈರಣ್ಣ ಇವರ ತಂದೆ, ರಾಮಕ್ಕ ತಾಯಿ. ಇವರಿಗೆ ಜನಿಸಿದ ಆರು ಜನ ಮಕ್ಕಳಲ್ಲಿ ಗೋವಿಂದಪ್ಪ ಮೊದಲಿಗರು.

ಆರು ಸೊಲಿಗೆ ಕುರಿಗಳ ಒಡೆಕಾರನಾಗಿದ್ದ ಗೋವಿಂದಪ್ಪ ತನ್ನ ಹಿಂಡಿನ ಒಂದೊಂದು ಕುರಿಯ ಜಾಯಮಾ, ಸ್ವಭಾವ, ಅದರ ಬುದುಕಿನ ಕ್ರಮವನ್ನು ಖಚಿತವಾಗಿ ಹೇಳಿಬಿಡುತ್ತಿದ್ದ ಅಪ್ರತಿಮ ಪ್ರತಿಭೆ ಇವರದ್ದು. ಕುರಿಗೆ ಬರಬಹುದಾದ ಸಿಡುಬು, ಕಾಲುಬಾಯಿ ರೋಗ ಮುಂತಾದವುಗಳಿಗೆ ಗಿಡಮೂಲಿಕೆಯ ಔಷಧ ನೀಡಿ ಗುಣಪಡಿಸುತ್ತಿದ್ದುದು ಹಾಗಾಗಿ ನಾಟಿವೈದ್ಯ ಎಂದೂ ಕರೆಯುತ್ತಿದ್ದರು.

ಗೋವಿಂದಪ್ಪ ಕೋಲುಪದ ಹಾಡುಗಾರ, ಭಾಗವತರಾಗಿಯೂ ಕಾರ್ಯನಿರ್ವಹಣೆ. ಕುರುಬರ, ಬೇಡರ, ಗೊಲ್ಲರ ಹಟ್ಟಿಗಳಲ್ಲಿ ವಾರಗಟ್ಟಲೆ ಇದ್ದು ಕೋಲುಮೇಳ ಕಲಿಸಿದವರು. ಮಡಿ ಸಂಪ್ರದಾಯದ ಹಿನ್ನೆಲೆಯಲ್ಲಿ ಸ್ವತಃ ಅಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದ ಕಲಾವಿದ. ರಾತ್ರಿಯೆಲ್ಲಾ ಪದ ಹಾಡುವುದು, ಗಣೆ ಊದುವುದು, ಕೋಲು ಕುಣಿಯುವುದು ವಿಶೇಷವಾಗಿತ್ತು. ಗಣೆ ಮೇಲೆ ಪದ ಹಾಡುವುದೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ಗಣೆ ಊದುವವರು ಒಬ್ಬರು ಸಿಕ್ಕರೆ ಅದೇ ಇವರಿಗೆ ಸ್ವರ್ಗ. ಅಷ್ಟು ದೀರ್ಘವಾಗಿ

ಜುಂಜಪ್ಪ. ಚಿತ್ರದೇವರು, ಕಾಟಂದೇವರು, ಮದಕರಿನಾಯಕ, ಮುರುಘಾಮಠ, ಮೈಲಾರಲಿಂಗ ಈ ದೈವಸಂಬಂಧಿ ಕಾವ್ಯ ಹಾಡುತ್ತಿದ್ದರು. ಚಿತ್ರದೇವರ ಕಾವ್ಯವನ್ನು ಸಮಗ್ರವಾಗಿ ಹಾಡುವ ಅತಿ ವಿರಳ ಕಲಾವಿದರಲ್ಲಿ ಇವರೂ ಒಬ್ಬರು. ಇಕ್ಕನೂರು, ಚಿತ್ರಹಳ್ಳಿಗಳಲ್ಲಿ ಜರುಗುವ ಚಿತ್ರಲಿಂಗದೇವರ ಉತ್ಸವದ ಸಂದರ್ಭದಲ್ಲಿ ಉಚ್ಚಂಗಿಪುರದಿಂದ ಜಂದಿಗಿ ಎಡೆಯೊಂದಿಗೆ ನಡೆದುಕೊಂಡೇ ದೇವಸ್ಥಾನಕ್ಕೆ ಬರುವ ಸಂಪ್ರದಾಯವನ್ನು ತಮ್ಮ ತೊಂಬತ್ತನೇ ವಯಸ್ಸಿನವರೆಗೆ ಮಾಡುತ್ತಾ ಬಂದರು.

ಗೋವಿಂದಯ್ಯ ಹಾಡಿರುವ ಗೀತೆಗಳನ್ನು ಕರಾಕ್ಸ, ಪಿ.ಆರ್.ಟಿ. ಮೊದಲಿಗೆ ಸಂಗ್ರಹಿಸಿದರು. ನಂತರ ಅಂಬಳಿಕೆ ಹಿರಿಯಣ್ಣ ಹಿರಿಯೂರಿನ ಮಹಾಲಿಂಗಯ್ಯ ಎಂಬ ಸಂಶೋಧನಾ ವಿದ್ಯಾರ್ಥಿ ಸಂಗ್ರಹಿಸಿದರು. ಐತಿಹಾಸಿಕ ವಸ್ತುವನ್ನು ಆಧರಿಸಿ ಕಥನಗೀತೆಗಳನ್ನು ಹಾಡುವುದು ಇವರ ವಿಶೇಷ.

ಚಿಕ್ಕದು ರಂಗದಾಗೆ ಕಿತ್ತಿಸ್ದ ಮನೆಯಾಗೆ
ಪಟ್ಟದಟ್ಟಿಗಳ ನೋಡೋ । ಕೋಲು
ಪಟ್ಟದಟ್ಟಿಗಳ ನೋಡೋ । ತಲೆಗಿಂಬೇ ಮದಕೇರಣ್ಣ
ಕಟ್ಟೆ ಮೇಲೆದ್ದು ಮನಿಗ್ಯಾವೆ । ಕೋಲು
ಆನೆ ಮೇಲೆ ಅಂಬಾರಿ ಒಂಟಿ ಮೇಲೆ ನಗಾರಿ
ಮುರುಘೇಂದ್ರಸ್ವಾಮಿಯೋರ್ಗೆ ಕಳಿವೇನೆ ಕೋಲು

ಹೀಗೆ ಚಿತ್ರದುರ್ಗ, ಕೋಟೆ ಮದಕರಿನಾಯಕ, ಮುರುಘಾಮಠ ಇವುಗಳನ್ನು ಕುರಿತು ನೂರಾರು ಕಥನಗೀತೆಗಳನ್ನು ಹೇಳುತ್ತಿದ್ದರು. ಯಾವುದೇ ಸನ್ಮಾನ, ಸಭೆಗಳಿಗೆ ಭಾಗವಹಿಸದೆ ಮೌಖಿಕ ಪರಂಪರೆಯಲ್ಲಿ ಜನಪದ ವಾಙ್ಮಯವನ್ನು ಕೊಂಡೊಯ್ದು ಒಂದು ನೂರು ವರ್ಷಗಳಷ್ಟು ಕಾಲ ಆರೋಗ್ಯವಾಗಿಯೇ ಬಾಳಿ ತೀರಿಕೊಂಡ ಜಿಲ್ಲೆಯ ಶ್ರೀಮಂತ ಕಲಾವಿದ ಶ್ರೀ ಗೋವಿಂದಪ್ಪ.

# ಕುಂ. ಬಾ. ಸದಾಶಿವಪ್ಪ

ಕುಂ. ಬಾ. ಸದಾಶಿವಪ್ಪ ಯಕ್ಷಗಾನ, ಭಜನೆ ಹಿಮ್ಮೇಳ, ಅಲಾಯಿ ಕುಣಿತ, ಡೊಳ್ಳು ಕುಣಿತ, ಅಭಿನಯ, ಹಿಮ್ಮೇಳ ಭಾಗವಂತಿಕೆ, ಯಕ್ಷಗಾನ ಹಸ್ತಪ್ರತಿ ಶೋಧನೆ, ಪ್ರಕಟಣೆ ಹೀಗೆ ಬಹುಮುಖಿ ಕಲಾವಿದ, ಕಲಾಸಂಘಟಕರೂ ಹೌದು. ೧-೭-೧೯೩೬ರಲ್ಲಿ ಜನಿಸಿದರು. ದಾವಣಗೆರೆ ಜಿಲ್ಲೆಯ ಹರಪನಹಳ್ಳಿಗೆ ಸಮೀಪದ ಸಂಚನೂರು ಇವರ ಜನ್ಮಸ್ಥಳ. ತಂದೆ ಸ್ವಾತಂತ್ರ್ಯ ಹೋರಾಟಗಾರರು. ತಾಯಿ ಭಜನೆ ಪದ ಗಾಯಕಿ. ಹಾಗಾಗಿ ಮನೆಯ ವಾತಾವರಣದಂತೆ ಜನಪದ ಕಲಾಪ್ರಕಾರದಲ್ಲಿ ಆಸಕ್ತಿ ಬೆಳೆಯಲು ಕಾರಣವಾಯಿತು.

ಸುಮಾರು ಎಂಟು ವರ್ಷದ ಬಾಲಕನಿದ್ದಾಗ ಈ ಗ್ರಾಮದ ಕುಂಚನೂರು ಯಜಮಾನ ಗುರುಲಿಂಗಜ್ಜನವರ ಪ್ರೇರಣೆ, ಹಾಡಿನ ಧಾಟಿ, ಮಾಧುರ್ಯಗಳಿಂದ ಭಜನೆ ಸಂಘಕ್ಕೆ ಸೇರ್ಪಡೆಯಾದರು. ಹಾಗಾಗಿ ಜನಪದಗೀತೆ, ತತ್ವಪದಗಳನ್ನು ಶಾಸ್ತ್ರೀಯವಾಗಿ ಕಲಿಯಲು ಪ್ರೇರಣೆಯಾಯಿತು. ಈ ಪ್ರೇರಣೆ ಮುಂದೆ ಯಕ್ಷಗಾನದತ್ತ ಹರಿಯಿತು. ಹರಪನಹಳ್ಳಿಯಲ್ಲಿ ಪ್ರೌಢಶಾಲಾಭ್ಯಾಸದ ಸಂದರ್ಭದಲ್ಲಿ ಭಾಗವತ ಬಡಿಗೇರ ದೇವೇಂದ್ರಪ್ಪನವರ ಸಂಪರ್ಕವಾಯಿತು. ದೇವೇಂದ್ರಪ್ಪನವರು ಈ ಭಾಗದ ಪ್ರಮುಖ ಯಕ್ಷಗಾನ ಭಾಗವತು. ಈ ಬಗೆಗೆ ಒಂದು ಪುಸ್ತಕವನ್ನು ಸದಾಶಿವಪ್ಪನವರು ಪ್ರಕಟಿಸಿದ್ದಾರೆ. ಬಾಲಕತನದ ಅವಸ್ಥೆಯಲ್ಲಿಯೇ ಯಕ್ಷಗಾನ ಕುಣಿತ, ಹಾಡುಗಾರಿಕೆ, ಪಾತ್ರಾಭಿನಯ ಕಲಿತರು. ಅರ್ಜುನ, ಬಲರಾಜನ ಪಾತ್ರಗಳಲ್ಲಿ ಸಮರ್ಥ ಅಭಿನಯ ನೀಡತೊಡಗಿದರು. ಮುಂದೆ ಇದೇ ಹವ್ಯಾಸ ಯಕ್ಷಗಾನ ಭಾಗವಂತಿಕೆಯತ್ತ ಕರೆದೊಯ್ದಿತ್ತು, ರತಿಕಲ್ಯಾಣ, ಬಾಣಾಸುರನ ಕಥೆ, ದಕ್ಷಬ್ರಹ್ಮ, ಅಹಿರಾವಣ ಮಹಿರಾವಣ, ಗಜಗೌರಿ, ದ್ರೌಪದಿ ಸ್ವಯಂವರ ಈ ಯಕ್ಷಗಾನ ಪ್ರಸಂಗಗಳನ್ನು ಸದಾಶಿವಯ್ಯನವರು ಸುಮಾರು ೪೦

ವರ್ಷಗಳಿಂದ ಭಾಗವಂತಿಕೆ ಮೂಲಕ ಕಲಿಸುತ್ತಾ ಬಂದಿದ್ದಾರೆ. ಇವರ ಸೋದರ ಪುಟ್ಟಪ್ಪನವರೂ ಉತ್ತಮ ಹಾರ್ಮೋನಿಯಂ ಕಲಾವಿದರಾಗಿದ್ದು ಈ ಹಿನ್ನೆಲೆಯಲ್ಲಿ ತಾವೂ ಹಾರ್ಮೋನಿಯಂ ಕಲಿತರು.

ಧಾರವಾಡ, ಬೆಳಗಾವಿ, ಬಿಜಾಪುರ, ರಾಯಚೂರು, ಮಂಡ್ಯ, ಬಳ್ಳಾರಿ ಮುಂತಾದ ಕಡೆ ಯಕ್ಷಗಾನ, ದೊಡ್ಡಾಟ, ಸಣ್ಣಾಟಗಳ ಪ್ರದರ್ಶನಕ್ಕೆ ನಿರ್ದೇಶನ ಮಾಡಿದ್ದಾರೆ.

ಸ್ನಾತಕೋತ್ತರ ಪದವೀಧರರಾಗಿ ಕನ್ನಡ ಸಾಹಿತ್ಯ, ಜಾನಪದವನ್ನು ವಿಶೇಷ ಅಧ್ಯಯನವನ್ನಾಗಿ ಪಡೆದು ಪದವಿ ಪಡೆದಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಪ್ರೌಢಶಾಲಾ ಶಿಕ್ಷಕರಾಗಿಯೂ ಕಾರ್ಯನಿರ್ವಹಣೆ. ತಮ್ಮ ಅಧ್ಯಾಪನದ ದಿನಗಳಲ್ಲಿ ಮಕ್ಕಳಿಗೆ ಜನಪದ ಗೀತೆ, ಯಕ್ಷಗಾನ ಕೋಲಾಟವನ್ನು ಸಮರ್ಥವಾಗಿ ಕಲಿಸಿ ಸಾಂಸ್ಕೃತಿಕವಾಗಿ ಸ್ಪರ್ಧೆಗೆ ಇಳಿಸುತ್ತಿದ್ದರು. ಇವರಿಗೆ ೧೯೯೨ರಲ್ಲಿ ಕರ್ನಾಟಕ ಸರ್ಕಾರ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ್, ಕಂಪ್ಲಿ ಉತ್ಸವ, ರಾಷ್ಟ್ರೋತ್ಥಾನ ಪರಿಷತ್ ಗೌರವಗಳೂ ದೊರೆತಿವೆ.

ಉತ್ತಮ ಲೇಖಕರೂ ಆಗಿರುವ ಕುಂ. ಬಾ. ಸದಾಶಿವಪ್ಪ ಯಕ್ಷಗಾನ ಪ್ರತಿ ಹಸ್ತಪ್ರತಿಗಳನ್ನು ಸಂಗ್ರಹಿಸಿರುವುದು ವಿಶೇಷ. ಗಜಗೌರಿವ್ರತ, ದ್ರೌಪದಿ ಸ್ವಯಂವರ, ಕನಕಾಂಗಿ, ಅಹಿರಾವಣ ಮಹಿರಾವಣ, ಬಾಣಾಸುರ, ಸೀತಾ ಸ್ವಯಂವರ, ರಾಮಾಂಜನೇಯ ಯುದ್ಧ ಮೊದಲಾದ ಯಕ್ಷಗಾನ ಪ್ರತಿಗಳನ್ನು ಸಂಕಲಿಸಿದ್ದಾರೆ. ಜೊತೆಗೆ ಜಾನಪದಕ್ಕೆ ಸಂಬಂಧಿಸಿದಂತೆ ಜೋಳಿಗೆ ತುಂಬಾ ಜಾನಪದ ಹೋಳಿಗೆ, ನಾವ್ ಹಾಡ್ತೇವ್ ತರಾತರ, ಅರಳ್ತಾವ್ ಮಲ್ಲಿಗೆ ಮೊಗ್ಗು ಮೊದಲಾದ ಸಂಗ್ರಹ ಹಾಗೂ ಜಾನಪದ ಸಾಹಿತ್ಯ ಸಂಸ್ಕೃತಿಯ ಒಲವು, ನಿಲುವುಗಳು ದೇವೇಂದ್ರಪ್ಪ ಹಾಗೂ ಜಾನಪದ ಕಲೆಗಳು ಎಂಬ ಸಂಶೋಧನಾ ಗ್ರಂಥಗಳನ್ನೂ ಸದಾಶಿವಪ್ಪ ರಚಿಸಿದ್ದಾರೆ. ಇವರು ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದು, ಇತಿಹಾಸ ಸಂಶೋಧಕರೂ ಆಗಿದ್ದಾರೆ.

**ಕುಂ. ಬಾ. ಸದಾಶಿವಪ್ಪ,**
**ಗೋಸಾಯಿ ಗುಡ್ಡ, ಹಂಪಿ–ಹರಿಹರ ರಸ್ತೆ,**
**ಹರಪನಹಳ್ಳಿ ತಾಲೂಕು.**

## ಮಾಳ್ಗಿ ಚನ್ನಬಸಪ್ಪ

ಗೊರವರ ಕುಣಿತ ಕರ್ನಾಟಕ ಜನಪದ ಕಲಾ ಪ್ರದರ್ಶನಗಳಲ್ಲಿ ಒಂದು ವಿಶಿಷ್ಟವಾದ ಕಲೆ. ತಲೆಯ ಮೇಲೆ ಕರಡಿ ಚರ್ಮದಿಂದ ಮಾಡಿದ ಉದ್ದನೆಯ ಟೋಪಿ, ಹಣೆಯಲ್ಲಿ ವಿಭೂತಿ, ಮೇಲೆ ಭಂಡಾರದ ಬೊಟ್ಟು, ಕೊರಳಲ್ಲಿ ಕವಡೆಯ ಧಾರಣೆ ಒಂದು ಕೈಯಲ್ಲಿ ಪಿಳ್ಳಂಗೋವಿ, ಮತ್ತೊಂದು ಕೈಯಲ್ಲಿ ಡಮರುಗ, ನಿಲುವಂಗಿಯ ಮೇಲೆ ಹಿತ್ತಾಳೆಯ ದೋಣಿ, ಬಲಬದಿಗೇ ಚೀಲ, ಕಣ್ಣಿಗೆ ಕೆಂಪುಬಣ್ಣ, ಕಿವಿಗೆ ಕೊರಳಿಗೆ ಭಸ್ಮ ನೋಡುಗರನ್ನು ಕರಡಿಯಂತೆ ಆಕರ್ಷಿಸುವ ವಿಚಿತ್ರ ವೇಷಭೂಷಣ ಗೊರವಪ್ಪಗಳದ್ದು. ಗೊರವರ ಸಂಪ್ರದಾಯ ಕರ್ನಾಟಕದಲ್ಲಿ ವ್ಯಾಪಕವಾಗಿದೆ. ಮೈಲಾರಲಿಂಗಪ್ಪ ಭಕ್ತರೇ ಗೊರವರು. ಶಿವನೇ ಗೊರವ ವೇಷಧಾರಿ. ಆತನ ಪೂಜೆ, ಆಹಾರ, ಕಾಣಿಕೆ ಸ್ವಯಂ ಶಿವನಿಗೆ ಸಂದಾಯ ಎಂಬ ನಂಬಿಕೆ ಈ ಒಕ್ಕಲುಗಳದ್ದು.

ಅದಕ್ಕಾಗಿಯೇ ಭಾನುವಾರ ಗೊರವರ ಆರಾಧನೆ ದೋಣಿ ಸೇವೆಯ ಮೂಲಕ ನಡೆಯುತ್ತದೆ. ಇವರ ಒಕ್ಕಲುಗಳ ಕಾಯಕವಾದರೆ, ಗೊರವ ದೀಕ್ಷೆಯೂ ಒಂದು ವಿಧಿಬದ್ಧ ಕ್ರಿಯೆ. ೧೨-೨೦ ವರ್ಷದೊಳಗಿನ ಬಾಲಕರಿಗೆ ಗೊರವ ದೀಕ್ಷೆ ನೀಡಲಾಗುತ್ತದೆ. ಹಿರಿಯ ಗೊರವಯ್ಯ ಬಾಲ ಗೊರವರಿಗೆ ದೋಣಿ, ಡಮರು, ಭಂಡಾರ ದೀಕ್ಷಾ ಬೋಧನೆ ಮಾಡುತ್ತಾರೆ. ಹೀಗೆ ದೀಕ್ಷೆ ಪಡೆದ ಗೊರವರು ಡಮರು, ಪಿಳ್ಳಂಗೋವಿ (ಕೊಳಲು) ಊದುವುದನ್ನು ತಾಳಕ್ಕೆ ತಕ್ಕ ಹಾಗೆ ಕುಣಿಯುವುದನ್ನು ಅಭ್ಯಾಸ ಮಾಡುತ್ತಾರೆ. ಹೀಗೆ ೧೦ ರಿಂದ ೨೨ ಭಕ್ತರಾದ ಗೊರವರು ಒಟ್ಟಾಗಿ ಕುಣಿಯುವ ಕಲೆಯೇ ಗೊರವರ ಕುಣಿತ.

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಗ್ರಾಮದ ಮಾಳ್ಗಿ ಚನ್ನಬಸಪ್ಪ ಈ ತಾಲ್ಲೂಕಿನ ಪ್ರಮುಖ ಗೊರವರ ಕುಣಿತ ಕಲಾವಿದ. ಅವಿದ್ಯಾವಂತನಾದ

ಈತನು ಜೀತ ಪರಂಪರೆಯಿಂದ ಬಂದವರು. ಮೊದಲು ಮೈಲಾರದೇವರ ಮುದ್ರೆ ಹೊತ್ತು ದೇವರ ಮೇಲಿನ ಪದ ಕಲಿತರು. ನಂತರ ಡಮರುಗ, ಕೊಳಲು ನುಡಿಸುವುದು ಸಹಜವಾಯಿತು. ನಾಲ್ಕು ಮಕ್ಕಳ ತಂದೆಯೂ ಆಗಿರುವ ಚನ್ನಬಸಪ್ಪ, ಈ ಭಾಗದ ಗೊರವ ಸಂಬಂಧಿ ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಜಾತಿಯ ಹೆಸರಲ್ಲಿ ಇವರಿಗೆ ಯಾವುದೇ ಬಾಧಕವಾಗಿಲ್ಲದಿರುವುದನ್ನು ಹೇಳುತ್ತಾರೆ. ಆದಿ ಕರ್ನಾಟಕದವರಾದರೂ ವೀರಶೈವರಾದಿಯಾಗಿ ಕುರುಬರು, ಬೇಡರು, ವಿಶ್ವಕರ್ಮ, ವೈಶ್ಯ ಎಲ್ಲರ ಮನೆಗಳಲ್ಲಿ ವಾರ ತೀರಿಸುವ, ಧಾರ್ಮಿಕ ವಿಧಿ ವಿಧಾನಗಳಲ್ಲಿ ಭಾಗವಹಿಸುವ ಹೆಚ್ಚುಗಾರಿಕೆ ಇವರದು.

ಆಕಾಶವಾಣಿ ಕಲಾವಿದರಾಗಿ ಕಳೆದ ಹತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಾ ಬಂದಿರುವ ಇವರು ಮೈಲಾರಲಿಂಗಪ್ಪನ ಕಾವ್ಯವನ್ನು ಸೊಗಸಾಗಿ ಹಾಡುತ್ತಾರೆ. ಡಾ. ಎಂ. ಜಿ. ಈಶ್ವರಪ್ಪ ಇವರ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಚಂದನ ದೂರದರ್ಶನದ ಸಿರಿಗಂಧ ಕಾರ್ಯಕ್ರಮದಲ್ಲಿ ಮೈಲಾರಲಿಂಗನ ಪದ ಹಾಗೂ ಗೊರವರ ಕುಣಿತ ಪ್ರದರ್ಶನ ಪ್ರಸಾರವಾಗಿದೆ. ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಈ ಭಾಗದಲ್ಲಿ ಹೆಸರುವಾಸಿ ಗೊರವಪ್ಪನಾಗಿರುವ ಇವರಿಗೆ ಚಿತ್ರದುರ್ಗ, ದಾವಣಗೆರೆ ಜಿಲ್ಲಾಡಳಿತ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಿದೆ. ಹಲವು ಕಲಾಮೇಳಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರಿನಲ್ಲಿ ೧೯೯೮ರಲ್ಲಿ ನಡೆದ ಅಖಿಲ ಭಾರತ ಜಾನಪದ ಸಮಾವೇಶದಲ್ಲಿ ಗೊರವರ ಕುಣಿತ ಪ್ರದರ್ಶನ ನೀಡಿದ್ದಾರೆ.

ಚಿಗಟೇರಿಯಲ್ಲಿ ಮೈಲಾರಲಿಂಗೇಶ್ವರ ಗೊರವರ ಕಲಾಸಂಘ ಸ್ಥಾಪಿಸಿಕೊಂಡು ಆ ಮೂಲಕ ಗೊರವರ ಕಲೆಯ ಪ್ರಸಾರಕ್ಕೆ ಶ್ರಮಿಸುತ್ತಿರುವ ಮಾಳ್ಗಿ ಚನ್ನಬಸಪ್ಪ ಅವರಿಗೆ ೨೦೦೬ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಮಾಳ್ಗಿ ಚನ್ನಬಸಪ್ಪ,**
**ಚಿಗಟೇರಿ, ಹರಪನಹಳ್ಳಿ ತಾಲೂಕು.**

# ಜಿ. ಮಹಾಂತೇಶ

ಹಾಡುಗಾರ, ತಮಟೆವಾದಕ ಎಂಬ ಹಿರಿಮೆಗೆ ಪಾತ್ರರಾಗಿರುವ ಜಿ. ಮಹಾಂತೇಶ್ ದಾವಣಗೆರೆಯವರು. ೧೯೧೩ರಲ್ಲಿ ನಲವತ್ವಾಡ ಎಂಬ ಗ್ರಾಮದಲ್ಲಿ ಜನಿಸಿದರು. ಇದು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿರುವ ಗ್ರಾಮ. ಇದು, ಪೂರ್ವಿಕರ ನೆಲೆ, ತಾತ ಜನಪದ ಕಲಾವಿದ. ಭಜನೆ, ಹಂತಿಪದ, ಹಾಡುಗಾರರಾಗಿದ್ದರು. ಬರಗಾಲದ ತೀವ್ರ ಹೊಡೆತಕ್ಕೆ ಸಿಕ್ಕಿದ ಮಹಾಂತೇಶ ಕುಟುಂಬ ದಾವಣಗೆರೆ ಕಡೆಗೆ ವಲಸೆ ಬಂದರು. ಈಗ್ಗೆ ೫೦ ವರ್ಷಗಳಿಂದಲೂ ದಾವಣಗೆರೆಯ ವಾಸಿಯಾಗಿದ್ದಾರೆ. ಜನಪದ ಕಲಾವಿದರೆಂದೇ ಖ್ಯಾತವಾಗಿದ್ದಾರೆ. ಮಹಾಂತೇಶ ಅವರಿಗೆ ೯೪ ವರ್ಷ. ಅಂಗವಿಕಲತೆಯಿಂದಾಗಿ ಕುಂಟುತ್ತಾ ತಿರುಗಾಟ ಮಾಡುವ ಈ ಕಲಾವಿದ ಬಾಯಲ್ಲಿ ಒಂದೂ ಹಲ್ಲು ಇಲ್ಲದಿದ್ದರೂ, ಹಾಡುವ ಗೀಳು ಹೋಗಿಲ್ಲ. ಯಾವುದೇ ಸಾಂಸ್ಕೃತಿಕ ಸಮಾರಂಭಗಳಲ್ಲಿ ನೇರವಾಗಿ ವೇದಿಕೆ ಹತ್ತುವ ಗೀಳು, ಹಾಡುವ ಚಟ ಹೋಗಿಲ್ಲ.

ತರೀಕೆರೆಯಲ್ಲಿ ಕೆ. ಆರ್. ಲಿಂಗಪ್ಪ, ಜೀಶಂಪ ಸಂಘಟಿಸಿದ ಜಾನಪದ ಸಾಹಿತ್ಯ ಸಮ್ಮೇಳನ ರಾಜ್ಯಕ್ಕೆ ಮೊದಲನೆಯದು. ಇದರಲ್ಲಿ ಹಾಡುಗಾರರಾಗಿ ಮಹಾಂತೇಶ ಭಾಗವಹಿಸಿದ್ದರು. ೧೯೬೯ರಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನ, ೧೯೭೭ರಲ್ಲಿ ನಡೆದ ಅಖಿಲ ಭಾರತ ಕೃಷಿ ಮೇಳ ಇಲ್ಲೆಲ್ಲಾ ಆಹ್ವಾನಿತ ಕಲಾವಿದರಾಗಿ ಹಾಡಿದ್ದಾರೆ. ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಭಾಗವಹಿಸಿರುವ ಇವರು ಗೋಕಾಕ್ ಚಳುವಳಿಯ ದಾವಣಗೆರೆ ಪ್ರಾಂತ್ಯದ ಪ್ರಮುಖ ಸಂಘಟಕರಾಗಿದ್ದರು. ಜಾನಪದ ಗೀತೆ, ಲಾವಣಿ, ಶಿಶುಪ್ರಾಸ, ಒಗಟುಪದ, ತತ್ವಗಳನ್ನು ಸುಶ್ರಾವ್ಯವಾಗಿ ಹಾಡುವ ಮಹಾಂತೇಶ ತಾವು ಬಯಸಿದ ಎಲ್ಲ ಸೌಲಭ್ಯವು ಜಾನಪದ ಕ್ಷೇತ್ರದಲ್ಲಿ ಲಭ್ಯವಾಗಿದೆ. ಜಾನಪದ

ಅಕಾಡೆಮಿಯ ಎಲ್ಲ ಕಲಾವಿದರ ಸಮಾವೇಶಗಳಲ್ಲಿ ಇವರಿಗೆ ಅವಕಾಶ ದೊರೆತಿದೆ. ಡಾ. ಎಂ. ಜಿ. ಈಶ್ವರಪ್ಪ ಅವರ ಮಾರ್ಗದರ್ಶನದಲ್ಲಿ ಜಾನಪದ ಸಂಬಂಧಿ ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಪ್ರಸ್ತುತ ಆಕಾಶವಾಣಿಯ ಆಹ್ವಾನಿತ ಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ, ೧೯೯೧ ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೨೦೦೧ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಪ್ರಶಸ್ತಿಯೂ ಲಭ್ಯವಾಗಿದೆ. ೧೯೮೭ ರಿಂದ ೧೯೯೦ ರವರೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾರಾಗಿಯೂ ಕಾರ್ಯನಿರ್ವಹಣೆ. ಈಗ ಪಾರ್ಶ್ವವಾಯು ಪೀಡಿತರಾಗಿ ಜರಾಜೀರ್ಣ ಸ್ಥಿತಿಯಲ್ಲಿರುವುದು ಮರುಕದ ಸಂಗತಿಯಾಗಿದೆ.

**ಜಿ. ಮಹಾಂತೇಶ,**
**ನಿಟ್ಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.**

## ಗೂಡಾಳ ಜಯಪ್ಪ

ಗೂಡಾಳ ಜಯಪ್ಪ ದಾವಣಗೆರೆ ಜಿಲ್ಲೆಯ ತುಂಬಾ ಹಿರಿಯ ಕಲಾವಿದರು. ವೃತ್ತಿ ಕಲಾವಿದರಾದ ಇವರಿಗೆ ಇದೀಗ ತೊಂಬತ್ತು ವರ್ಷ ಪ್ರಾಯ. ಇಂದಿಗೂ ಏಕತಾರಿ ಹಿಡಿದು ಶುಶುನಾಳ ಷರೀಫರ, ನಿಜಗುಣ ಶಿವಯೋಗಿ, ಹೇಮರೆಡ್ಡಿ ಮಲ್ಲಮ್ಮ ಇವರನ್ನು ಕುರಿತು ದಿನಗಟ್ಟಲೆ ಹಾಡಬಲ್ಲ ವಿಶಿಷ್ಟ ಕಲಾವಿದ. ಏನೇ ಮಾಡಿದರೂ ಗೇಣು ಹೊಟ್ಟೆ ತುಂಬಲಿಲ್ಲ. ಬದುಕು ಹಸನಾಗಲೊಲ್ಲದು ಎಂದೇ ವಿಷಾದ ಛಾಯೆಯ ಧ್ವನಿಯಲ್ಲಿ ಮಾತನಾಡುವ ಈ ಕಲಾವಿದ ಮಾಸಾಶನವನ್ನು ಪಡೆಯಲು ಸರಿಯಾದ ಪ್ರಯತ್ನ ನಡೆಸಿಲ್ಲ. ತೀರಾ ಇಳಿ ವಯಸ್ಸಿನಲ್ಲಿ ಈ ಬಗೆಗೆ ತೀವ್ರವಾಗಿ ಹಂಬಲಿಸುವ ಈ ಕಲಾವಿದನಲ್ಲಿ ಸಾಂದರ್ಭಿಕ ದಾಖಲೆಗಳ ಕೊರತೆಯೂ ಕಾರಣವಾಗಿದೆ. ಜಯಪ್ಪ ಹುಟ್ಟಿದ್ದು ೧೯೧೨ರಲ್ಲಿ ತಂದೆ ಹಡಪದ ಚಿಕ್ಕಪ್ಪನವರು ಜನಪದ ವಾದ್ಯ ಕಲಾವಿದರು. ಷಹನಾಯಿ, ನಾದಸ್ವರ, ಮೃದಂಗ ಕಲಾವಿದರು. ಮಗ ಅವುಗಳ ಬಗೆಗೆ ಒಲವು ತೋರಿಸಿದರೂ ಕಲಾವಾದ್ಯಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಲಿಲ್ಲ. ಬದಲಿಗೆ ಹಾಡುಗಾರಿಕೆಯನ್ನು ರೂಢಿಸಿಕೊಂಡರು.

ತಂದೆ ಸಂಗೀತ, ವಾದ್ಯಗಾರಿಕೆಯ ಜೊತೆಗೆ ಕ್ಷೌರಿಕ ವೃತ್ತಿಯನ್ನು ಬದುಕಿನ ಅವಲಂಬನೆಗಾಗಿ ಮಾಡಿಕೊಂಡರೆ ಜಯಪ್ಪ ಸಂಗೀತದ ಮೇಲೆ ಪೂರ್ಣ ನಿಗಾ ವಹಿಸಿದರು. ಹುಟ್ಟು ಕಸುಬನ್ನು ಉದಾಸೀನವಾಗಿ ಕಂಡರು. ಹಾಗಾಗಿಯೇ ಇಂದು ಆರ್ಥಿಕವಾಗಿ ಅತ್ಯಂತ ದುಃಸ್ಥಿತಿಗೆ ಬಂದಿದ್ದಾರೆ.

ಗೂಡಾಳು ಜಯಪ್ಪ ಜನಪದ ಸಂಗೀತ ಕಲಾವಿದ. ಜನಪದ ಸಂಗೀತಕ್ಕೆ ಏಕಾತಾರಿಯನ್ನು ಶೃತಿಯನ್ನಾಗಿಸಿಕೊಂಡು ಹಾಡುವುದು ಇವರ ಸಂಪ್ರದಾಯವಾಗಿದೆ. ಧಾರ್ಮಿಕ ಕಾವ್ಯಗಳಾದ ಹೇಮರೆಡ್ಡಿ ಮಲ್ಲಮ್ಮ (ರೆಡ್ಡಿ ಜನಾಂಗದ ಸಂಘಟನೆ),

ತಿರುನೀಲಕಂಠ, ಬಸವೇಶ್ವರ, ಸರ್ಪಭೂಷಣ ಶಿವಯೋಗಿ, ನಿಜಗುಣ ಶಿವಯೋಗಿಗಳ ತತ್ವಪದಗಳನ್ನು ಸೊಗಸಾಗಿ ಹಾಡುತ್ತಾರೆ.

ಜೊತೆಗೆ ಶಿಶುನಾಳ ಷರೀಫರ ಎಲ್ಲ ತತ್ವಪದಗಳನ್ನು ಹಾಡಬಲ್ಲ ಈ ಗಾಯಕ ಈ ಭಾಗದ ಭಜನಾ ಮಂದಿರಗಳಲ್ಲಿ ಶಿಶುನಾಳ ಷರೀಫರ ಗೀತೆಗಳನ್ನು ಗುರುಶಿಷ್ಯ, ಮಾದರಿಯಲ್ಲಿ ಕಲಿಸಿಕೊಟ್ಟಿರುವುದು ಇವರ ವಿಶೇಷವಾಗಿದೆ.

ಭಾಗವತರಾಗಿಯೂ ಕೆಲವು ಕಾಲ ಕಾರ್ಯನಿರ್ವಹಿಸಿರುವ ಇವರು ಯಕ್ಷಗಾನ ರೂಪದಲ್ಲಿ ಕಬೀರದಾಸ ಚರಿತ್ರೆ, ಪುರಂದರದಾಸರ ಕಥೆ, ತಿರುನೀಲಕಂಠನ ಕಥೆ, ಚಿತ್ರಕೇತು ಮಹಾರಾಜರ ಕತೆಗಳನ್ನು ಕಲಿಸಿರುತ್ತಾರೆ.

ಕರ್ನಾಟಕದ ಮುಖ್ಯಮಂತ್ರಿ ಆರ್. ಗುಂಡೂರಾಯರ ಮುಂದೆ ಶಂಕರಾಚಾರ್ಯರ ತತ್ವಪದಗಳನ್ನು ಹಾಡಿ ಶಹಭಾಷ್‌ಗಿರಿ ಪಡೆದ ಹೆಗ್ಗಳಿಕೆಯಿಂದ ಬೀಗುವ ಈ ಕಲಾವಿದ ಇಂದು ದುಃಸ್ಥಿತಿಯಲ್ಲಿರುವುದು ಮರುಕದ ಸಂಗತಿಯಾಗಿದೆ.

ಮಕ್ಕಳು ಮೊಮ್ಮಕ್ಕಳಿದ್ದರೂ ಇಲ್ಲದಂತಿರುವ ಈ ಕಲಾವಿದನಿಗೆ ಇಂದು ತಂಬೂರಿಯೊಂದೇ ಆಧಾರ. ಅದರೊಂದಿಗೆ ತತ್ವಪದ ಹಾಡುತ್ತಾ ಬದುಕು ಸವೆಸುತ್ತಿದ್ದಾರೆ.

**ಗೂಡಾಳು ಜಯಪ್ಪ,**
**ಜನತಾ ಕಾಲೋನಿ, ತೋಟಹುಣಸೆ ಅಂಚೆ,**
**ದಾವಣಗೆರೆ ತಾಲೂಕು.**

## ಕೆ. ಬಿ. ಷಣ್ಮುಖಪ್ಪ

ಶ್ರೀ ಕೆ. ಬಿ. ಷಣ್ಮುಖಪ್ಪನವರು ಯಕ್ಷಗಾನ ಭಾಗವತರು. ಪರಪನಪಳ್ಳಿ ತಾಲ್ಲೂಕು ಅರಸೀಕೆರೆಯವರು. ೧೨-೭-೧೯೩೯ರಲ್ಲಿ ಜನನ. ತಂದೆ ಹನುಮಂತಪ್ಪ ಜನಪದ ಕಲಾವಿದರು. ಯಕ್ಷಗಾನ, ಭಜನೆ, ತತ್ವಪದ ಹಾಡುಗಾರಿಕೆಯಲ್ಲಿ ಪಳಗಿದವರು.

ಐದನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ಹನುಮಂತಪ್ಪ ಷಣ್ಮುಖಪ್ಪ ಕೃಷಿ ಕಾಯಕದಲ್ಲಿ ನಿರತರಾಗಿದ್ದಾರೆ. ಅರವತ್ತೆಂಟು ವಸಂತಗಳನ್ನು ಪೂರೈಸಿರುವ ಷಣ್ಮುಖಪ್ಪ ತಮ್ಮ ೧೫ನೇ ವಯಸ್ಸಿನಿಂದಲೇ ಯಕ್ಷಗಾನ ಕಲೆಯ ಬಗೆಗೆ ಆಸಕ್ತಿ ತಳೆದರು. ತಮ್ಮ ಮನೆಯ ಪರಿಸರವೂ ಹಾಗೆಯೇ ಇತ್ತು.

ಕನಕನ ಬಸಾಪುರದ ನೆಲಗೊಂಡನಹಳ್ಳಿ ಬಸಪ್ಪ ಎಂಬ ಯಕ್ಷಗಾನ ಭಾಗವತರಲ್ಲಿ ಐದು ವರ್ಷಗಳ ಕಾಲ ಸತತವಾಗಿ ಯಕ್ಷಗಾನ ಅಭ್ಯಾಸ ಮಾಡಿದರು. ತಂದೆ ಹನುಮಂತಪ್ಪನವರೂ ಯಕ್ಷಗಾನ ಹಿಮ್ಮೇಳದ ಭಾಗವಂತಿಕೆಯಲ್ಲಿ ಪರಿಶ್ರಮವಿದ್ದುದರಿಂದಾಗಿ ತಂದೆಯವರೂ ಒಂದು ವಿಧದಲ್ಲಿ ಮಾರ್ಗದರ್ಶನ ಮಾಡಿದರು.

ಆರಂಭದಲ್ಲಿ ಯಕ್ಷಗಾನದಲ್ಲಿ ಬಾಲಕನ ಪಾತ್ರಾಭಿನಯ. ಗಣೇಶ, ಕೃಷ್ಣ, ಶಾರದೆಯ ಪಾತ್ರದಲ್ಲೂ ರಂಗಪ್ರವೇಶ. ನಂತರ ಕೃಷ್ಣ, ಈಶ್ವರ, ನಾರದನ ಪಾತ್ರಗಳಲ್ಲಿ ಯಕ್ಷಗಾನ ವೇಷಗಾರಿಕೆ. ನಂತರ ಹಿಮ್ಮೇಳನ ಭಾಗವತರಾಗಿ ರತಿಕಲ್ಯಾಣ, ದಕ್ಷಬ್ರಹ್ಮ, ದ್ರೌಪದಿ ಸ್ವಯಂವರ, ಲವಕುಶಗಳಲ್ಲಿ ಸಮರ್ಥ ಭಾಗವಂತಿಕೆ ನೀಡಿಕೆ.

೧೯೭೦ ರಿಂದ ಸ್ವತಃ ಭಾಗವತರಾಗಿ ಯಕ್ಷಗಾನ ಕಲಿಸುವ ಕಾಯಕ ಕೈಗೊಂಡ ಶ್ರೀಯುತರು ಗಿರಿಜಾ ಕಲ್ಯಾಣ, ಕನಕಾಂಗಿ ಕಲ್ಯಾಣ, ಪಂಚವಟಿ ರಾಮಾಯಣ,

ಕಾಳಾಸುರ, ತ್ರಿಪುರ ಸಂಹಾರ, ಸುಧನ್ವ ಕಾಳಗ, ಬಭ್ರುವಹಾನ ಕಾಳಗ, ಪ್ರಮೀಳಾ ದರ್ಬಾರ್, ರತಿಕಲ್ಯಾಣ ಈ ಮುಂತಾದ ಹತ್ತು ಯಕ್ಷಗಾನಗಳಿಗೆ ಭಾಗವತರಾಗಿ ಹಾಡು, ನೃತ್ಯ, ಕಂದ ಕಲಿಸುವ ಮೂಲಕ ಯಕ್ಷಗಾನ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಿರುವ ಉತ್ತಮ ಭಾಗವತರು.

ಉತ್ತಮ ಕೋಲಾಟ ಕಲಾವಿದರೂ ಆಗಿರುವ ಷಣ್ಮುಖಪ್ಪ ದಾವಣಗೆರೆ, ಹರಪನಹಳ್ಳಿ, ಹೊಳಲ್ಕೆರೆ, ಸಿರಿಗೆರೆ ಈ ಕಡೆಗಳಲ್ಲಿ ಯುವಕ ಸಂಘಗಳಿಗೆ ಕೋಲಾಟ ಕಲೆಯನ್ನು ಕಲಿಸಿ ಕೊಟ್ಟಿದ್ದಾರೆ. ಈ ಮೂಲಕ ರಾಜ್ಯಮಟ್ಟದ ಯುವಜನ ಮೇಳ, ಸಂಸ್ಕೃತಿ ಇಲಾಖೆಯ ಕಲೋತ್ಸವ, ಜಿಲ್ಲಾ ಉತ್ಸವಗಳಲ್ಲಿ ಇವರ ನೇತೃತ್ವದ ಕೋಲಾಟ ತಂಡ ಆಕರ್ಷಕ ಕಲಾ ಪ್ರದರ್ಶನ ನೀಡಿದೆ.

ದಾವಣಗೆರೆ, ಹರಪನಹಳ್ಳಿ, ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿಗಳಲ್ಲಿ ಸಣ್ಣಾಟ ಕಲಾಪ್ರಕಾರಕ್ಕೆ ನಿರ್ದೇಶನವನ್ನೂ ಮಾಡಿದ್ದಾರೆ. ಇವರ ನಿರ್ದೇಶನದ ಸಂಗ್ಯಾ ಬಾಳ್ಯಾ, ಕಡ್ಲೆಮಟ್ಟಿ ಸ್ಟೇಷನ್ ಮಾಸ್ತರ ಪ್ರಸಂಗಗಳು ಹತ್ತಾರು ಬಾರಿ ಪ್ರದರ್ಶನಗೊಂಡಿವೆ.

ಕ.ಸಾ.ಪ. ಪ್ರಶಸ್ತಿ, ದಾವಣಗೆರೆ ಜಿಲ್ಲಾ ಉತ್ಸವ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿ, ಗೌರವಗಳಿಗೆ ಪಾತ್ರರಾಗಿದ್ದಾರೆ.

ಕೆ. ಬಿ. ಷಣ್ಮುಖಪ್ಪ,
ಅರಸೀಕರೆ, ಹರಪನಹಳ್ಳಿ ತಾಲೂಕ.

## ೮. ಹಾಲಪ್ಪ

ಹಾಲಪ್ಪನವರು ಷಹನಾಯಿ ಕಲಾವಿದರು. ಪಾರಂಪರಿಕವಾಗಿ ಕಲಿತ ಈ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ. ಚನ್ನಗಿರಿ ಆದಿದ್ರಾವಿಡ ಕಾಲೋನಿಯಲ್ಲಿ ವಾಸಿಸುತ್ತಿರುವ ರಂಗಪ್ಪ ಹನುಮಂತಮ್ಮ ಇವರಿಗೆ ೧೯೩೮ರಲ್ಲಿ ಜನಿಸಿದರು.

ಎಸ್‌ಎಸ್‌ಎಲ್‌ಸಿ ಯು ತನಕ ವಿದ್ಯಾಭ್ಯಾಸ ಮಾಡಿರುವ ಹಾಲಪ್ಪ ತಂದೆಯವರಿಂದಲೇ ಷಹನಾಯಿ ವಾದನವನ್ನು ಕಲಿತರು. ನಂತರ ಸಿ. ಕೆ. ಶಿವಲಿಂಗಪ್ಪ ಎಂಬ ಕಲಾವಿದರಿಂದ ಕ್ಲಾರನೆಟ್ ವಾದನವನ್ನು ೧೯೬೦ ರಿಂದಲೂ ಶಾಸ್ತ್ರೀಯವಾಗಿ ಕಲಿಯುತ್ತಾ ಬಂದರು. ಕ್ಲಾರನೆಟ್ ವಾದ್ಯದ ಜೊತೆಗೆ ಜನಪದ ಷಹನಾಯಿ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಿರುವ ಹಿರಿಯ ಕಲಾವಿದರು.

ಮೂರು ಜನ ಮಕ್ಕಳೊಂದಿಗೆ ಸಂಗೀತ ಕಛೇರಿಯನ್ನು ವೃತ್ತಿಯನ್ನಾಗಿಯೂ ಮಾಡಿಕೊಂಡಿದ್ದಾರೆ. ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಭಾಗಗಳಲ್ಲಿ ನಡೆಯುವ ಯಕ್ಷಗಾನ ಬಯಲಾಟಗಳಲ್ಲಿ ಮುಖವೀಣೆ, ಷಹನಾಯಿ ಕಲಾವಿದರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಯಕ್ಷಗಾನ ಕಲೆ, ಭಾಗವಂತಿಕೆಗೆ ಹಿಮ್ಮೇಳ ಕಲಾವಿದರಾಗಿಯೂ ಕೆಲಸಮಾಡಿದ್ದಾರೆ.

ಗಣಪತಿ ಉತ್ಸವ, ಕನ್ನಡ ರಾಜ್ಯೋತ್ಸವ ಮೊದಲಾದ ಸಾಂಸ್ಕೃತಿಕ ಸಮಾರಂಭಗಳಲ್ಲಿ ಮಂಗಳೂರು, ಬೆಂಗಳೂರು, ಬೀದರ್, ದಾವಣಗೆರೆ, ತುಮಕೂರು, ಹಾಸನ, ಹಾವೇರಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾಗವಹಿಸಿದ್ದಾರೆ. ೧೯೯೯ರಲ್ಲಿ ಮೈಸೂರಿನಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಜಾನಪದ ಸಮಾವೇಶದಲ್ಲಿ ಮುಖವೀಣೆ ಕಲಾವಿದರಾಗಿ

ಪ್ರದರ್ಶನ ನೀಡಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಕಲೋತ್ಸವದಲ್ಲಿ ಭಾಗವಹಿಸಿದ್ದಾರೆ.

೧೯೬೫ ರಿಂದ ಷಹನಾಯಿ ಗುರುವಾಗಿ, ಚನ್ನಗಿರಿ, ದಾವಣಗೆರೆ, ಹೊನ್ನಾಳಿ, ಭದ್ರಾವತಿಗಳಲ್ಲಿ ವೃತ್ತಿಯಾಗಿ ಷಹನಾಯಿ ಕಲೆಯನ್ನು ಶಾಸ್ತ್ರೀಯವಾಗಿ ಕಲಿಸುತ್ತಿರುವ ಹಾಲಪ್ಪ ಭದ್ರಾವತಿ ಹಾಗೂ ಚಿತ್ರದುರ್ಗ ಆಕಾಶವಾಣಿಯಲ್ಲಿಯೂ ಷಹನಾಯ್ ವಾದ್ಯ ಪ್ರಸಾರ ಮಾಡಿದ್ದಾರೆ. ಮೈಸೂರಿನ ದಸರಾ ಉತ್ಸವದಲ್ಲಿ ವಸ್ತು ಪ್ರದರ್ಶನ ಕಲಾಮಂದಿರದಲ್ಲಿ ಷಹನಾಯ್ ನುಡಿಸಿರುವುದು ಇವರ ವಿಶೇಷವಾಗಿದೆ.

ಭದ್ರಾವತಿ ಕನ್ನಡ ಸಂಘ (ಎಂಎಸ್‌ಎಲ್), ದಾವಣಗೆರೆ ಜಿಲ್ಲಾಡಳಿತ, ಚಿತ್ರದುರ್ಗದ ಜಿಲ್ಲಾಡಳಿತ, ಚನ್ನಗಿರಿ ತಾಲ್ಲೂಕು ಆಡಳಿತ ಇವರ ಕಲಾಸೇವೆಯನ್ನು ಮೆಚ್ಚಿ ಗೌರವಿಸಿದೆ. ೧೯೬೬ರಲ್ಲಿ ಕರ್ನಾಟಕ ಸಂಗೀತ (Examination in music) ನಲ್ಲಿ ಪದವಿ ಪಡೆದಿರುವ ಅಪರೂಪದ ಕಲಾವಿದ.

ಇಷ್ಟಾದರೂ ಸರ್ಕಾರದ ಯಾವುದೇ ಉದ್ಯೋಗ ದೊರೆಯದೆ ಸಾರ್ವಜನಿಕವಾಗಿ ಕಲಾಸೇವೆಯಲ್ಲಿಯೇ ಬದುಕು ಸವೆಸಿದ ಹಾಲಪ್ಪ ಪಾರಂಪರಿಕ ಹಾಗೂ ಶಾಸ್ತ್ರೀಯ ಈ ಎರಡೂ ಪ್ರಕಾರದಲ್ಲೂ ಕಲಾಸೇವೆ ಮಾಡುತ್ತಾ ಶಿಷ್ಯವೃಂದವನ್ನು ಹೆಚ್ಚಿಸುತ್ತಾ ಬಂದಿರುವುದು ಮಹತ್ವದ ಸಂಗತಿಯಾಗಿದೆ.

ಟಿ. ಹಾಲಪ್ಪ,
ಷಹನಾಯಿ ಕಲಾವಿದರು,
ಹರಿಜನ ಕಾಲೋನಿ, ಚನ್ನಗಿರಿ.

# ಗೊಂದಳಿ ದುರುಗಪ್ಪ

ದಾವಣಗೆರೆ ಜಿಲ್ಲೆಯ ಗೊಂದಳಿ ಕಲೆಯ ಅಪರೂಪದ ಕಲಾವಿದ ಶ್ರೀ ದುರ್ಗಪ್ಪ ಹುಟ್ಟಿದ್ದು ಹರಪನಹಳ್ಳಿ ತಾಲ್ಲೂಕು ಅರಸೀಕೆರೆಯಲ್ಲಿ. ತಂದೆ ತಾತರ ಕಾಲದಿಂದಲೂ ಪಾರಂಪರ್ಯವಾಗಿ ಗೊಂದಳಿ ಕಲೆಯನ್ನು ಧಾರ್ಮಿಕ ಕಲೆಯನ್ನಾಗಿ ಮಾಡಿಕೊಂಡು ಬಂದ ಕುಟುಂಬ. ತಂದೆ ಸಣ್ಣದುರುಗಪ್ಪ ಗೊಂದಳಿ ಕಲೆಯ ಕಲಾವಿದರಾಗಿ ಬೆಂಗಳೂರು, ಭದ್ರಾವತಿ, ಧಾರವಾಡ ಆಕಾಶವಾಣಿಗಳಲ್ಲಿ ಪ್ರಸಾರ ಗಾಯಕರಾಗಿದ್ದರು. ೯೦ ವರ್ಷಗಳ ಕಾಲ ನಿರಂತರವಾಗಿ ಗೊಂದಳಿ ಕಲೆಯನ್ನು ಪ್ರಸಾರ ಮಾಡಿದವರು. ಸಣ್ಣ ದುರ್ಗಪ್ಪನವರಿಗೆ ಇಬ್ಬರು ಗಂಡುಮಕ್ಕಳು. ಮೊದಲನೆಯವರು ದುರ್ಗಪ್ಪ, ಇನ್ನೊಬ್ಬರು ಶಿವಾಜಿ ಪಾರಣೆ, ಮೂಲತಃ ಮರಾಠಿ ಜನಾಂಗಕ್ಕೆ ಸೇರಿದ ಇವರು ದುರ್ಗಿಯ ಭಕ್ತರು. ಮಹಾರಾಷ್ಟ್ರದ ಮೂಲದಿಂದ ಪೂರ್ವಿಕರು ಕರ್ನಾಟಕಕ್ಕೆ ವಲಸೆಬಂದು ಇಲ್ಲಿಯೇ ನೆಲೆಸಿದರು. ಹರಪನಹಳ್ಳಿಯ ಅರಸೀಕೆರೆಯಲ್ಲಿರುವುದಕ್ಕೆ ಮನೆ ಬಿಟ್ಟರೆ ಬೇರೆ ಏನೇನನ್ನೂ ಮಾಡಿಕೊಂಡಿಲ್ಲ ಎನ್ನುತ್ತಾರೆ. ಗೊಂದಳಿ ಕಲಾ ಪ್ರದರ್ಶನವನ್ನೇ ವೃತ್ತಿಯನ್ನಾಗಿ ಜೀವಿಸುವ ಕಲಾವಿದರು.

ತಮ್ಮ ತಾತ ಅವರಿಂದ ತಂದೆ, ತಂದೆ ಸಣ್ಣದುರ್ಗಪ್ಪ ಅವರಿಂದ ನಾನು, ನನ್ನಿಂದ ತಮ್ಮ ಶಿವಾಜಿ ಪಾರಣೆ, ಮಕ್ಕಳು ಮಡದಿಗೂ ಗೊಂದಳಿ ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ತಮ್ಮ ಹತ್ತನೇ ವಯಸ್ಸಿನಲ್ಲಿಯೇ ತಂದೆಯವರೊಂದಿಗೆ ಮೃದಂಗ ಕಲೆಯನ್ನು ಕಲಿತರು. ನಂದಳಿಗೊದಳಿ ಹಾಡು ಕಲಿತರು. ಈಗ ಗೊಂದಳಿ ನೃತ್ಯಾಭ್ಯಾಸವನ್ನೂ ಕರಗತ ಮಾಡಿಕೊಂಡು ಆಧುನಿಕ ಸಂದರ್ಭಗಳಿಗೆ ತಕ್ಕನಾಗಿ ಹಾಡು, ನೃತ್ಯ ಪ್ರದರ್ಶಿಸುತ್ತಾರೆ. ಅಂಬಾಭವಾನಿ, ಯಲ್ಲಮ್ಮ, ವಿರುಪರಾಕ್ರಮಿ ರಾಜ, ಬಾಳ ಭಿಕ್ಷುಕ ರಾಜ, ಬನ್ನಿ ಮಾಕಾಳಿ ಕಥೆ ಇವರು ಮಾಡುವ ಕಥೆಗಳು. ಒಂದೊಂದು

ಕಥೆಯೂ ಜನಪದ ಹಾಗೂ ಪುರಾಣದ ಮೂಲದಿಂದ ಕೂಡಿದ್ದು ಅರ್ಧರಾತ್ರಿಯ ತನಕ ಕಾರ್ಯಕ್ರಮ ನೀಡುತ್ತಾರೆ. ಇವರೊಂದಿಗೆ ಮಡದಿ ಪಾರ್ವತಮ್ಮನವರೂ ಕಾರ್ಯಕ್ರಮದಲ್ಲಿ ಹಿಮ್ಮೇಳ ಕಲಾವಿದರಾಗಿ ಭಾಗವಹಿಸುತ್ತಾರೆ. ಇವರ ಕಲಾತಂಡದಲ್ಲಿ ಮೂರು ಜನ ಗಂಡುಮಕ್ಕಳೂ ಭಾಗವಹಿಸುತ್ತಾರೆ. ನಾಮದೇವ ಪಾರಣೆ, ಅಶೋಕ ಪಾರಣೆ, ಜ್ಞಾನೇಶ್ವರ ಪಾರಣೆ ಇವರು ಮೃದಂಗ, ಹಾರ್ಮೋನಿಯಂ ಕಲಾವಿದರಾಗಿ ತಂದೆಯ ಕಲಾಮೇಳಕ್ಕೆ ಸಾಥಿ ನೀಡುತ್ತಾರೆ. ಕೊನೆಯ ಮಗ ದೇವರಾಜು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಳೆದ ೪೦ ವರ್ಷಗಳಿಂದ ಕರ್ನಾಟಕ ಆಂಧ್ರದ ಗಡಿಯಲ್ಲಿ ಸತತವಾಗಿ ಗೊಂದಳಿ ಕಲಾಪ್ರದರ್ಶನ, ಪ್ರಸಾರದಲ್ಲಿ ತೊಡಗಿರುವ ದುರುಗಪ್ಪ ಕಲಾಸೌಲಭ್ಯ ದೊರೆಯಬೇಕೆಂಬ ಹಂಬಲವಿದೆ.

ದುರ್ಗಪ್ಪ,<br>ಅರಸೀಕೆರೆ, ಹರಪನಹಳ್ಳಿ ತಾಲೂಕು.

## ಬಿ. ಎಸ್. ಸ್ವಾಮಿನಾಥನ್

ಬಿ. ಎಸ್. ಸ್ವಾಮಿನಾಥನ್ ದಾವಣಗೆರೆಯ ಹಿರಿಯ ಜನಪದ ಕಲಾವಿದರು. ೮೨ ವಯಸ್ಸಿನ ಕ್ರಿಶ್ಚಿಯನ್ ಜನಾಂಗಕ್ಕೆ ಸೇರಿದ ಈ ಕಲಾವಿದ ತಮ್ಮ ಒಟ್ಟು ಬದುಕನ್ನು ಸಂಗೀತ, ಬಣ್ಣಗಾರಿಕೆಯಲ್ಲಿ ಕಳೆದವರು. ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಕರ್ನೂಲ್ ಜಿಲ್ಲೆ ಹಾಲೂರು ತಾಲೂಕಿನ ಗೂಳೇವು ಗ್ರಾಮದ ಮಡಿವಾಳ ಜನಾಂಗದ ತಿಪ್ಪೇಸ್ವಾಮಿ ಅವರಿಂದ ಐದು ವರ್ಷಗಳ ಕಾಲ ಜನಪದ ಸಂಗೀತ, ಮೃದಂಗ, ತಬಲ ಕಲಿಕೆ, ಲಾವಣಿ, ಗೀತೆ, ಹಂತಿಪದ ಹಾಡುವುದನ್ನು ಶಾಸ್ತ್ರೀಯವಾಗಿ ಕಲಿತರು. ಮುಂದೆ ಹಾರ್ಮೋನಿಯಂ ಸಂಗೀತವನ್ನು ಕಲಿತರು. ಹೀಗೆ ಶಾಸ್ತ್ರೀಯ ಸಂಗೀತದ ಶಿಕ್ಷಣ ಪಡೆದು ಯಾವುದೇ ಸರ್ಕಾರಿ ವೃತ್ತಿಗೆ ಹೋಗದೆ ಸಂಗೀತ ಶಾಲೆ ತೆರೆದರು. ಉಪನ್ಯಾಸಕರು. ಬ್ಯಾಂಕ್ ಮ್ಯಾನೇಜರ್ ಸೇರಿದಂತೆ ೧೦೦ಕ್ಕೂ ಹೆಚ್ಚು ಸಂಗೀತ ಶಿಷ್ಯರನ್ನು ತಯಾರಿಸಿದ ಹಿರಿಮೆಯೂ ಇವರದು.

ಇದರಿಂದ ಸಂಗೀತ ಕಲಿತವರಲ್ಲಿ ಆರ್‌ಪಿಎಫ್ ಇನ್ಸ್‌ಪೆಕ್ಟರ್ ಮಲ್ಲಯ್ಯಸ್ವಾಮಿ, ಬ್ಯಾಂಕ್ ಮ್ಯಾನೇಜರ್ ಸಿದ್ಧಲಿಂಗಸ್ವಾಮಿ, ಚಂದ್ರಪ್ಪ ಬಡಿಗೇರ, ಪ್ರಿನ್ಸಿಪಾಲ್ ಏಕನಾಥ್, ಶಿಕ್ಷಕರಾದ ಪಾರ್ವತಮ್ಮ ಶ್ರೀಧರ್ ಮುಖ್ಯರಾದವರು. ಬಯಲಾಟ ಪರಿಕರ ತಯಾರಿಕೆ ಸಾಮಗ್ರಿ ಒದಗಿಸುವ ಕಾಯಕವನ್ನು ಹವ್ಯಾಸಿಯಾಗಿ ಮಾಡಿಕೊಂಡು ಬಂದವರು. ಇದಲ್ಲದೆ ದೇವಸ್ಥಾನಗಳ ವಿಗ್ರಹಗಳಿಗೆ ಚಿತ್ರ ಬಿಡಿಸುವ, ಬಣ್ಣ ಹಾಕುವ ಕಾಯಕವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದರು. ಹೀಗಗಿ ಕರ್ನಾಟಕದ ಉತ್ತರಕನ್ನಡ ಜಿಲ್ಲೆಗಳ ಮುಧೋಳ, ಬೆಟಗೇರು, ಸಿಂಧನೂರು ಈ ಭಾಗಗಳ ದೇವಾಲಯಗಳ ಚಿತ್ರಗಳನ್ನು ಬಿಡಿಸಿದ್ದಾರೆ. ಜೊತೆಗೆ ಆಂಧ್ರ ಪ್ರದೇಶದ ಕರ್ನೂಲ್, ಕಲ್ಯಾಣದುರ್ಗ, ಹಿಂದೂಪುರ, ಮಡಕಶಿರಾ ಇಲ್ಲೆಲ್ಲಾ ದೇವಸ್ಥಾನಗಳ ಕೆಲಸ ಮಾಡಿರುತ್ತಾರೆ.

ಕೋಲುಪದ, ಲಾವಣಿ, ತತ್ವಪದ, ಲಾಲಿಪದ, ಗೀಗೀಪದ ಇವರ ಹಾಡುಗಾರಿಕೆಯ ಪ್ರಮುಖ ಕಲಾಪ್ರಕಾರಗಳು. ಮೃದಂಗ ಕಲಾವಿದರಾಗಿ ಬಯಲುಸೀಮೆಯ ಬಯಲಾಟ ನಾಟಕಗಳಿಗೆ ಕಳೆದ ೬೦ ವರ್ಷಗಳಿಂದಲೂ ಕೆಲಸ ಮಾಡುತ್ತಾ ಬಂದಿದ್ದಾರೆ. ಸ್ವಾಮಿನಾಥನ್ ಅವರಿಗೆ ಒಟ್ಟು ಐದು ಮಕ್ಕಳು. ಇವರಲ್ಲಿ ನಾಲ್ವರು ಗಂಡು, ಒಂದು ಹೆಣ್ಣು. ಇದರಲ್ಲಿ ಇಬ್ಬರು ಮಕ್ಕಳು ಜೇಸುದಾಸ್, ಜೋಸೆಫ್ ಸಂಗೀತ ಶಿಕ್ಷಕರಾಗಿ ಉದ್ಯೋಗದಲ್ಲಿದ್ದಾರೆ. ಉಳಿದವರು ಸಂಗೀತದ ಪರಿಜ್ಞಾನವಿದ್ದು, ಹವ್ಯಾಸಿಯಾಗಿ ಹಾಡುತ್ತಾರೆ. ದಾವಣಗೆರೆ, ಚಿತ್ರದುರ್ಗ, ಮೈಸೂರು, ಬೆಂಗಳೂರು, ಭದ್ರಾವತಿ ಈ ಭಾಗಗಳಲ್ಲಿ ಸಂಗೀತ ಕಛೇರಿ ನಡೆಸಿರುವ ಇವರಿಗೆ ಕ್ರೈಸ್ತ ಸಂಘ ಸಂಸ್ಥೆಗಳೂ ಸೇರಿದಂತೆ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಗೌರವಿಸಿವೆ.

ಬಿ. ಎಸ್. ಸ್ವಾಮಿನಾಥನ್,
೧೧ನೇ ಕ್ರಾಸ್, ಕೆ.ಟಿ.ಜೆ ನಗರ,
ದಾವಣಗೆರೆ.

## ಟಿ. ಗಂಗಾಧರಪ್ಪ

ದಾವಣಗೆರೆ ಜಿಲ್ಲೆಯ ಪ್ರಸಿದ್ಧ ಷಹನಾಯಿ ವಾದಕರಾದ ಟಿ. ಗಂಗಾಧರಪ್ಪ ೧೯೩೭ರಲ್ಲಿ ತಂದೆ ತಿಮ್ಮಪ್ಪ ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿ ೩ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವ ಇವರು ಜನಪದ ಚರ್ಮ, ಕೊಳಲು ಹಾಗೂ ಷಹನಾಯಿ ವಾದ್ಯವನ್ನು ವಿಶೇಷವಾಗಿ ಅಭ್ಯಾಸಮಾಡಿದ್ದಾರೆ. ಚನ್ನಗಿರಿಯ ಶ್ರೀ ರಾಘವೇಂದ್ರ ಕಲಾವಾದ್ಯ ವೃಂದದವರಿಂದ ಅದರ ನಿರ್ದೇಶಕರಾದ ಸಿ. ಕೆ. ಶಿವಲಿಂಗಪ್ಪನವರ ಮಾರ್ಗದರ್ಶನದಲ್ಲಿ ಷಹನಾಯ್ ವಾದ್ಯವನ್ನು ತಂದೆ ನರಸಿಂಹಪ್ಪನವರ ಮಾರ್ಗ ದರ್ಶನದಲ್ಲಿ ಷಹನಾಯ್ ವಾದ್ಯವನ್ನು ತಂದೆ ನರಸಿಂಹಪ್ಪನವರ ಮಾರ್ಗದರ್ಶನದಲ್ಲಿ ಕೊಳಲು ವಾದ್ಯವನ್ನು ಕಲಿತರು. ಕಳೆದ ೫೦ ವರ್ಷಗಳಿಂದಲೂ ಕೊಳಲು, ಷಹನಾಯಿ ವಾದ್ಯಗಳನ್ನು ವಿಶೇಷವಾಗಿ ನುಡಿಸುತ್ತಾ ಸಂಗೀತ ಹಾಗೂ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಸಮರ್ಥವಾಗಿ ಭಾಗವಹಿಸುತ್ತಿದ್ದಾರೆ. ಅಂಬೇಡ್ಕರ್ ವಾದ್ಯ ವಿಶೇಷ ತಂಡದೊಂದಿಗೆ ಷಹನಾಯಿ ವಾದ್ಯ ಗೋಷ್ಠಿಯನ್ನೂ ನಡೆಸುತ್ತಿರುವುದು ಇವರ ವಿಶೇಷವಾಗಿದೆ. ಭದ್ರಾವತಿ ಆಕಾಶವಾಣಿಯಿಂದ ಇವರ ವಾದ್ಯಗೋಷ್ಠಿ ಪ್ರಸಾರವಾಗಿದೆ.

ಹಂಪಿ ಉತ್ಸವ, ಪಟ್ಟದಕಲ್ಲು ಉತ್ಸವಗಳಲ್ಲದೆ ಬಿಜಾಪುರ, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾವೇರಿ, ಧಾರವಾಡ ಇಲ್ಲಿನ ಪ್ರಮುಖ ಸಾಂಸ್ಕೃತಿಕ ಉತ್ಸವಗಳಲ್ಲಿ ಇವರ ಷಹನಾಯಿ ವಾದ್ಯಗೋಷ್ಠಿ ಜನಾಕರ್ಷಣೆ ಪಡೆದಿದೆ. ಮೈಸೂರಿನ ದಸರಾ ಉತ್ಸವದಲ್ಲಿ ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ ಅವರ ಮಾರ್ಗದರ್ಶನದಲ್ಲಿ ವಾದ್ಯಗೋಷ್ಠಿ ಮಾಡಿದ್ದಾರೆ. ಮುರುಘಾಮಠ, ಚಿತ್ರದುರ್ಗ, ಸಿರಿಗೆರೆ ಮಠಗಳಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ್ದಾರೆ.

ಚರ್ಮವಾದ್ಯಗಳಾದ ನಗಾರಿ, ಮೃದಂಗ ಕಲಾವಿದರಾಗಿ ಅವುಗಳ ತಯಾರಿಕೆಯಲ್ಲಿಯೂ ಪ್ರಸಿದ್ಧರು. ನಾದವನ್ನು ಹಿಡಿದು ಚರ್ಮ ಹದಗೊಳಿಸುವ ಅದ್ಭುತ ಕಲೆ ಇವರದ್ದು. ೭೫ ವರ್ಷಗಳ ಇಳಿವಯಸ್ಸಿನಲ್ಲಿಯೂ ಷಹನಾಯಿ ಗೋಷ್ಠಿ ಮಾಡುವ, ಮೃದಂಗ ಕಲಾವಿದರಾಗಿ ಯಕ್ಷಗಾನದಲ್ಲಿ ಭಾಗವಹಿಸುವುದು ಇವರ ಹೆಚ್ಚುಗಾರಿಕೆ. ಇಷ್ಟೆಲ್ಲಾ ಕಲಾಸೇವೆ ಮಾಡಿದರೂ ಜಾನಪದ ಅಕಾಡೆಮಿ ತಮ್ಮನ್ನು ಗುರುತಿಸಿಲ್ಲ ಎಂಬ ಕೊರಗು ಇವರದು.

**ಟಿ. ಗಂಗಾಧರಪ್ಪ,**
**ಎ. ಡಿ. ಕಾಲೋನಿ, ಚನ್ನಗಿರಿ.**

## ಶಿವನಾಗಪ್ಪ

ಶಿವನಾಗಪ್ಪ ಜಗಳೂರು ಸಮೀಪದ ಉಚ್ಚಂಗಿಪುರದವರು. ಕಾಡುಗೊಲ್ಲರ ಸಂಸ್ಕೃತಿಯ ಶ್ರೀಮಂತ ಗುಡಾಣದಂತಿದ್ದರು. ಕಾಡುಗೊಲ್ಲರ ಧಾರ್ಮಿಕ ವಿಧಿವಿಧಾನವೂ ಸೇರಿದಂತೆ ಎಲ್ಲ ಬಗೆಯ ಕಾರ್ಯಗಳ ಮೇಲುಸ್ತುವಾರಿ ವಹಿಸುತ್ತಿದ್ದು ಇವರ ವಿಶೇಷ. ಹಾಗಾಗಿ ಇವರನ್ನು ದೇವರ ಶಿವನಾಗಪ್ಪ ಎಂಬ ಅನ್ವರ್ಥನಾಮದಿಂದಲೂ ಕರೆಯುತ್ತಿದ್ದರು.

ಶಿವನಾಗಪ್ಪ ತಮ್ಮ ಪೂರ್ವಿಕರ ಕಾಲದಿಂದಲೂ ಹಾಡು ಹಾಡುತ್ತಿದ್ದ ಕುಟುಂಬದಿಂದ ಬಂದವರು. ತಂದೆ ಚಿತ್ತಯ್ಯನವರೂ ಹಾಡುತ್ತಿದ್ದರು. ತಾಯಿ ಸಣ್ಣ ಚಿತ್ತಮ್ಮನವರೂ ಕಾಡುಗೊಲ್ಲರ ರೀತಿ ರಿವಾಜುಗಳಿಗೆ ವಿಶೇಷ ಗಮನ ಕೊಡುತ್ತಿದ್ದ ಹೆಣ್ಣುಮಗಳು. ದೇವರ ಶಾಸ್ತ್ರಗಳನ್ನು ಮದುವೆ, ಸೋಬನ ಮುಂತಾದ ಸಂದರ್ಭದಲ್ಲಿ ಹಾಡುವುದು, ಹೆರಿಗೆಗೆ ಸಂಬಂಧಿಸಿದ ಔಷಧೋಪಚಾರವನ್ನು ಇವರು ಬಲ್ಲವರಾಗಿದ್ದರು. ಶಿವನಾಗಪ್ಪ ಓದು ಬರಹ ತಿಳಿದವರಲ್ಲ. ವರ್ಷದಲ್ಲಿ ಸರಾಸರಿ ಆರು ತಿಂಗಳುಗಳ ಕಾಲ ಊರಿಂದ ಹೊರಗೆ ಇರುತ್ತಿದ್ದರು. ಬರಗಾಲ, ಹುಲ್ಲು ನೀರಿಗೆ ಅನಾನುಕೂಲದಿಂದಾಗಿ ಕುರಿಗಳನ್ನು ದೂರದೂರುಗಳಿಗೆ ಹೊಡೆದುಕೊಂಡು ಹೋಗುತ್ತಿದ್ದರು. ಅದಕ್ಕೆ ಪರಸ್ಥಳಕ್ಕೆ ಹೋಗುವುದು, ಕುರಿಗಳ ಹುಲ್ಲು ನೀರಿಗೆ ಹೋಗುವುದು ಎಂದೂ ಕರೆಯಲಾಗುವುದು. ಶಿವನಾಗಪ್ಪ ಕುರಿಗಳು ಹುಲ್ಲು ನೀರಿಗೆ ಹೋದರೆ ಅದರ ನೇತೃತ್ವ ವಹಿಸುತ್ತಿದ್ದರು. ಆರೇಳು ಸಲಿಗೆ ಅಥವಾ ಹಿಂಡಿನ ಕುರಿಗಳನ್ನು ಒಂದುಗೂಡಿಸಿಕೊಂಡು ೧೫ ರಿಂದ ೨೦ರ ತನಕ ಆಳುಗಳು ಇಷ್ಟೇ ಸಂಖ್ಯೆಯ ನಾಯಿ, ಕತ್ತೆಗಳೊಂದಿಗೆ ಕುರಿಯನ್ನು ಹೊಡೆದುಕೊಂಡು ದಾವಣಗೆರೆಯಿಂದ ಕೊಳ್ಳೇಗಾಲ, ನಂಜನಗೂಡು, ಚಾಮರಾಜನಗರ, ಭದ್ರಾವತಿಯ ಕಡೆಗೂ ಹೋಗುತ್ತಿದ್ದರು. ಅಂಥ ಸಂದರ್ಭದಲ್ಲಿ

ಕಲಿತ ಹಾಡುಗಳೇ ಶಿವನಾಗಪ್ಪನವರಿಗೆ ವಿಶೇಷ ಖ್ಯಾತಿ ತಂದುಕೊಟ್ಟವು. ಪೂರ್ಣ ತೋಳಿನ ಜುಬ್ಬ, ಮೊಣಕಾಲಿನ ತನಕ ಧೋತ್ರ, ಬಿಗಿದ ಕಸೆಪಂಚೆ, ಹೆಗಲ ಮೇಲೊಂದು ದುಪ್ಪಟ್ಟಿ, ತಲೆಯ ಮೇಲೆ ದಪ್ಪನೆಯ ಪೇಟ ಇದು ಶಿವನಾಗಪ್ಪನವರ ವೇಷಭೂಷಣ.

ಶಿವನಾಗಪ್ಪನವರ ಹಾಡುಗಾರಿಕೆಯನ್ನು ಮೊದಲು ಗುರುತಿಸಿದವರು ಚಿತ್ರದುರ್ಗದ ಆಗಿನ ವಕೀಲರಾಗಿದ್ದ ಬಿ. ಎಲ್. ಗೌಡರು. ಅವರಿಂದ ಹಿರಿಯ ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ ಅವರಿಗೆ ಪರಿಚಯವಾಯಿತು. ಮುಂದೆ ಜೀಶಂಪ, ಕರಾಕೃ ಅವರ ಸಂಪರ್ಕವೂ ಬೆಳೆಯಿತು. ಶಿವನಾಗಪ್ಪನವರು ಚಿತ್ರದೇವರ ಕತೆ, ಜುಂಜಪ್ಪನ ಕತೆ, ವೀರಮದಕರಿ ಕತೆ, ಕ್ಯಾತೆದೇವರ, ಪಾತೇದೇವರ ಕತೆಗಳನ್ನು ಹಾಡುತ್ತಾರೆ. ಕೋಲುಪದಗಳ ಸಮಗ್ರವಾಗಿ ಚಿತ್ರದುರ್ಗದ ಪಾಳೆಯಗಾರರನ್ನು ಕೊಂಡಾಡುವುದು ಇವರ ವಿಶೇಷವಾಗಿದೆ. ಕಥನಗೀತೆಯ ರೂಪದಲ್ಲಿಯೂ ಪಾಳೆಯಗಾರರನ್ನು ಕುರಿತು ಹಾಡುತ್ತಿದ್ದರು. ಕೋಲುಪದಗಳಲ್ಲಿ ಇವರು ಹಾಡುವ ಮದಕರಿ ನಾಯಕನ ಪದಗಳ ಸಾಲು ಹೀಗಿವೆ.

ಎದ್ದನು ಎಳೆಮೀಸೆ ತಿರುವುತ  
ಉದ್ದನ ಪಾವುಡವ ಹೊದರುತ । ಕೋಲೆ  
ಪಟ್ಟದಾನೀಯ ಹಿಡಿಸಿದ ಮದಕೇರಿ  
ಒಂಟಿ ಬಾವುಲಿ ಮುತ್ತುಗಳೇ । ಕೋಲು ।

ಇವರು ಹಾಡಿರುವ ಹಾಡುಗಳನ್ನು ಕರಾಕೃ ಅವರು ಸಂಪಾದಿಸಿರುವ ಚಿತ್ರಕಲ್ಲು ಮದಕರಿ ಜನಪದ ಗೀತೆಗಳ ಸಂಕಲನದಲ್ಲಿ ೧೯೭೪ ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಒಂದು ನೂರು ವರ್ಷ ತುಂಬು ಜೀವನ ನಡೆಸಿ, ಸಂಪ್ರದಾಯ, ನಂಬಿಕೆಗಳ ಆಶ್ರಯದಾತರಾಗಿ ಕುರಿಯೊಂದಿಗೆ ಬೆಳೆಯುತ್ತ ಪ್ರಕೃತಿಯ ಮೇಲೆಲ್ಲಾ ಪದಕಟ್ಟಿ ಹಾಡಿ, ಕಾಲಿಗೆ ಗೆಜ್ಜೆಕಟ್ಟಿ ಕೋಲಾಟ ಕಲಿಸಿದ ಹಿರಿಯ ಜಾನಪದ ಸಂಪನ್ನ ಶಿವನಾಗಪ್ಪ ಈಗ ದಿವಂಗತರು.

ಜಿ. ಶಿವಪ್ಪ,  
ಶಾರದಾ ಭವನ, ಜೆ.ಸಿ.ಆರ್. ಬಡಾಣೆ, ಚಿತ್ರದುರ್ಗ.

## ಪರಶುರಾಮಪ್ಪ

ಪರಶುರಾಮಪ್ಪ ಕಥನಗೀತಗಾರರು. ದಾವಣಗೆರೆ ಸಮೀಪದ ಅಣಜಿ ಗ್ರಾಮದ ಇವರು ಹಾಲುಮತ ಜನಾಂಗಕ್ಕೆ ಸೇರಿದವರು. ತಂದೆ ಲಕ್ಷ್ಮಣಪ್ಪ, ತಾಯಿ ಗಂಗವ್ವ. ಇವರು ಹಾಡುಗಳನ್ನು ಕಲಿತದ್ದು ಬಿಳಿಚೋಡು ಗ್ರಾಮದ ಕೋಲುಕಾರ ಭೀಮಪ್ಪನವರಿಂದ. ಇವರೂ ಕುರಿ ಮೇಯಿಸುವ ಕಾಯಕ. ಐದು ನೂರು ಕುರಿಗಳ ಒಡೆಕಾರನಾದ ಪರಶುರಾಮಪ್ಪ ಕುರಿಗೆ ಹೋದಾಗ ಪರಸ್ಥಳದ ಮಂದೆ ಕಾಯುವ ಸಲುವಾಗಿ ಜನಪದ ಗೀತೆಗಳನ್ನು ಕಲಿತಿರುತ್ತಾರೆ. ಸುಮಾರು ೩–೪ ವರ್ಷಗಳ ಕಲಿಕೆ. ರಾತ್ರಿ ಪೂರಾ ಮಂದೆ ಕಾಯುವಾಗ ಪದ ಹೇಳುವುದು ವಾಡಿಕೆ. ಹಾಗಾಗಿ ಮಂದೆ ಕಾಯುವಾಗ ದೇವ ಮೇಲೆ ಆಣೆ ಮಾಡಿಸಿ, ಮಲಗಬಾರದು, ಹೂಗುಟ್ಟಬೇಕು, ಮಲಗಿದರೆ ಕಣ್ಣು ಹೋಗುತ್ತದೆ ಎಂಬ ಭಯ ಮೂಡಿಸಿ ಪದ ಕಲಿಯಲು ಪ್ರೇರಕವಾದರು. ಹಾಗಾಗಿಯೇ ತುಂಬಾ ಎಚ್ಚರವಿದ್ದು ಪದ ಕೇಳಿದೆ. ಹಾಗಾಗಿಯೇ ೩–೪ ವರ್ಷ ಬೇಕಾಯಿತು. ಮಧ್ಯೆ ಊರಕಡೆ ಬಂದರೆ ಅಲ್ಲಿಗೆ ಪದ ನಿಂತು ಹೋಗುತ್ತಿತ್ತು. ಮತ್ತೆ ಬೇಸಿಗೆ ಕಾಲಕ್ಕೆ ಪದಗಳ ಕಲಿಕೆ.

ಪರಶುರಾಮಪ್ಪ ಪದ ಹಾಡುವುದು ಹತ್ತನೇ ವಯಸ್ಸಿನಿಂದ ಚೌಡಿಕೆ ಪದ, ಕೋಲುಪದ, ದುರ್ಗದ ಮೇಲಿನ ಪದ, ಮೈಲಾರಲಿಂಗಪ್ಪನ ಪದ ಇವುಗಳ ಜೊತೆಗೆ ಕೋಲಿನ ಮೇಲೆ ಕೊರವಂಜಿ ಪದವನ್ನು ಹಾಡುವುದು ಇವರ ವಿಶೇಷ. ಇಷ್ಟಾದರೂ ಇವರಿಗೆ ವಿಶೇಷ ಮಾನ್ಯತೆ ನೀಡಿದ್ದು ಕೋಲುಪದ ಹಾಗೂ ಆ ಕಲೆಯ ಭಾಗವಂತಿಕೆಯಿಂದಾಗಿ. ದಾವಣಗೆರೆ, ಸಿರಿಗೆರೆ, ಭರಮಸಾಗರ, ಹರ್ತಿಕೋಟೆ, ಹಿರಿಯೂರ ಕೋಡಿಹಳ್ಳಿ, ಕೊಂಡ್ಲಳ್ಳಿ ಇಲ್ಲೆಲ್ಲಾ ಕೋಲಾಟದ ಭಾಗವತರಾಗಿ ಕಾರ್ಯನಿರ್ವಹಣೆ. ದಾವಣಗೆರೆ ಸಮೀಪದ ಹೊನ್ನೂರಿನಲ್ಲಿ ಜನಪದ ಕೋಲುಕಲೆಯ

ತಂಡವನ್ನು ಕಟ್ಟಿ ಯುವ ಸಂಘ ಮೊದಲಾದ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಕಲಾವಿದರಿಂದ ಪ್ರದರ್ಶನ ನೀಡಿದ್ದಾರೆ.

ಇವರ ತಂದೆ ಲಕ್ಷ್ಮಣಪ್ಪ ಒಳ್ಳೆಯ ಯಕ್ಷಗಾನ ಕಲಾವಿದರಾಗಿದ್ದು ದೇವಿಮಹಾತ್ಮೆ, ಕರ್ಣಾರ್ಜುನರ ಕಾಳಗ, ಲವಕುಶ ಈ ಮೊದಲಾದ ಯಕ್ಷಗಾನದಲ್ಲಿ ಪಾತ್ರ ವಹಿಸಿದ್ದಾರೆ. ದೇವಿ, ಅರ್ಜುನ, ಕುಶ ಇವರು ಅಭಿನಯ ನೀಡಿದ ಪ್ರಮುಖ ಪಾತ್ರಗಳು. ಪರಶುರಾಮಪ್ಪ ಯಕ್ಷಗಾನದ ಹಿಮ್ಮೇಳ ಕಲಾವಿದರಾಗಿಯೂ ಕಾರ್ಯನಿರ್ವಹಣೆ. ದೇವಿಮಹಿಮೆ, ಕರ್ಣಾರ್ಜುನರ ಕಾಳಗಲದಲ್ಲಿ ಹಿಮ್ಮೇಳ ಭಾಗವತರಾಗಿ, ಸೂತ್ರಧಾರಿಯಾಗಿ, ಸ್ಟೇಜ್ ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಣೆ ಮಾಡಿದ್ದಾರೆ.

ಪಿ. ಆರ್. ತಿಪ್ಪೇಸ್ವಾಮಿ ಅವರೊಂದಿಗೆ ಮೈಸೂರಿನ ವಿಶ್ವವಿದ್ಯಾಲಯದ ಜನಪದ ವಸ್ತು ಪ್ರದರ್ಶನಕ್ಕೆ ದಾವಣಗೆರೆ, ಚಿತ್ರದುರ್ಗ ಸೀಮೆಯ ವಸ್ತುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಇವರ ಶ್ರಮ ಅಪಾರವಾದುದು.

ಇವರು ಹಾಡಿರುವ ಕಥನಗೀತೆಗಳನ್ನು ಕರಾಕ್ಸ ಸಂಗ್ರಹಿಸಿ ೧೯೭೫ರಲ್ಲಿ ಪ್ರಕಟಿಸಿದ್ದಾರೆ. ಚಿತ್ರಕಲ್ಲು ಮದಕರಿ ಸಂಕಲದಲ್ಲಿ ಇವರು ಹಾಡಿದ್ದಾರೆ.

ಮೇಲು ದುರುಗವು ನೋಡೆ ಗಾರೆ ಬಾಗಿಲ ನೋಡೆ
ಹೋಗಿ ಮಾತಾಡೋ ಗಿಣಿ ನೋಡೆ । ರನ್ನದ ಶ್ರೀಗಂಧದ
ಹೋಗಿ ಮಾತಾಡೋ ಗಿಣಿ ನೋಡೆ । ಮದಕೇರಣ್ಣ
ಬಾರಿ ನುಡಗ್ವಾರೆ ಮನಿನೋಡೆ । ರನ್ನದ ಶ್ರೀಗಂಧದ

ಇನ್ನೊಂದು ಹಾಡಿನಲ್ಲಿ

ಜೀರು ಜೀರುಂಬೆಯವರಿಗೆ ಜಿರು ಜಿರುಗುಟ್ಟಿದ
ಎದ್ದಾನೆ ಸಿಂಹ ದುರುಗಕ್ಕೆ । ಕೋಲೆ
ಎದ್ದಾನೆ ಸಿಂಹ ದುರುಗಕ್ಕೆ ಮದಕೇರಿ ಕೋಲೆ

ಹೀಗೆ ಕೋಲು ಪದಗಳಲ್ಲಿ ಚಿತ್ರದುರ್ಗ ನಾಯಕರ ಕಥನಗಳನ್ನು ಕಣ್ಣ ಮುಂದೆ ತಂದು ನಿಲ್ಲಿಸುತ್ತಿದ್ದ ವೀರ ಪರಶುರಾಮಪ್ಪ ಕಳೆದ ಹತ್ತು ವರ್ಷದ ಹಿಂದೆ ತೀರಿಕೊಂಡರು.

ಪರಶುರಾಮಪ್ಪ,
ಅಣಜಿ ಗ್ರಾಮ, ದಾವಣಗೆರೆ ತಾಲೂಕು.

# ಡಿ. ಕೊಳ್ಯಪ್ಪ

ಕಿಂದರಜೋಗಿ ಅಥವಾ ಕಿಂದರಜೋಗಿ ಮೇಳ ಕರ್ನಾಟಕದ ಜನಪದ ಗೀತ ಪ್ರಕಾರದಲ್ಲಿ ವಿಶಿಷ್ಟವಾದುದು. ಬಣ್ಣಬಣ್ಣದ ಅಂಗಿ, ಮೇಲೊಂದು ಕೋಟು, ಹೆಗಲ ಮೇಲಿಂದ ಇಳಿಬಿಟ್ಟ ಬಣ್ಣದ ವಸ್ತ್ರ, ತಲೆಯ ಮೇಲೊಂದು ದಪ್ಪನೆಯ ಪೇಟ, ಹಣೆಗೆ ತಿಲಕ, ಕೊರಳಿಗೆ ಮೂರ್‍ನಾಲ್ಕು ಸರ, ಮಣಿ ಅಥವಾ ಹಿತ್ತಾಳೆ ಆಭರಣ, ಶುಭ್ರವಾದ ಕಚ್ಚೆಪಂಚೆ, ಕಿನ್ನರಿಯ ವಾದ್ಯ ಒಂದು ಕೈಯಲ್ಲಿ ಅದನ್ನು ನುಡಿಸುವುದಕ್ಕೆ ಬಳಸುವ ಕಿರುಗೆಜ್ಜೆ ಮತ್ತೊಂದು ಬೆರಳಲ್ಲಿ. ಇದು ಕಿನ್ನರಿ ಜೋಗಿಗಳ ವೇಷಭೂಷಣ.

ಮಧುರವಾದ ಕಂಠದಲ್ಲಿ ಮಹಾಭಾರತದ ಪಾಂಡವರ ವನವಾಸ, ಐರಾವತದ ಪ್ರಸಂಗ, ಗಾಂಧಾರಿ ಕುಂತಿ ಪ್ರಸಂಗ ವಿರಾಟಪರ್ವದ ಪ್ರಸಂಗಗಳನ್ನು ಕಿನ್ನರಜೋಗಿಗಳು ಹಾಡುತ್ತಾರೆ. ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಈ ಭಾಗಗಳಲ್ಲಿ ವಿರಳವಾಗಿರುವ ಕಿನ್ನರಿಜೋಗಿಗಳು ತೆಲುಗು ಭಾಷೆಯನ್ನು ಮಾತೃ ಭಾಷೆಯನ್ನಾಗಿ ಆಡುತ್ತಾರೆ.

ಚಿತ್ರದುರ್ಗ, ದಾವಣಗೆರೆ ಭಾಗಗಳಲ್ಲಿರುವ ಕಿನ್ನರ ಜೋಗಿಗಳಿಗೆ ನಾಯಕನಹಟ್ಟಿ ತಿಪ್ಪೇಸ್ವಾಮಿ ಸಾಂಸ್ಕೃತಿಕ ನಾಯಕ. ಚುಂಚನಗಿರಿ ಭೈರವ ಕುಲದೈವ ಎಂಬ ನಂಬಿಕೆಯೂ ಇದೆ.

ಡಿ. ಕೊಳ್ಯಪ್ಪ ದಾವಣಗೆರೆ ಜಿಲ್ಲೆಯ ನೇರ್ಲಿಗೆ ಗ್ರಾಮದವರು. ಸುಮಾರು ೬೫ ವಯಸ್ಸಿನ ಈ ಹಿರಿಯ ಕಲಾವಿದ ತಮ್ಮ ಬಾಲ್ಯದಿಂದಲೂ ಕಿನ್ನರಜೋಗಿಯಾಗಿ ಕಾರ್ಯಕ್ರಮ ನೀಡುತ್ತಾ ಬರುತ್ತಿದ್ದಾರೆ. ತಾತ, ತಂದೆ, ಸೋದರ ಎಲ್ಲರೂ ಕಿನ್ನರಿ ಕಲಾವಿದರು. ತನ್ನ ತಾತನಿಂದ ಕಿನ್ನರಿ ಹಿಡಿಯುವುದು ಬಾರಿಸುವದನ್ನು ಕಲಿತೆ ಎನ್ನುತ್ತಾರೆ. ಡಿ. ಕೊಳ್ಯಪ್ಪ ಅವರಿಗೆ ಜೋಗಿಯ ದೀಕ್ಷೆಯೂ ಆಗಿದೆ. ಇವರ ಜೊತೆಗೆ ನಾಲ್ಕು ಜನ

ಕಿನ್ನರಿಜೋಗಿ ಕಲಾವಿದರ ತಂಡದೊಂದಿಗೆ ವಿಶೇಷ ಕಾಯಕ್ರಮ ನೀಡುವುದು ಇವರ ವಿಶೇಷ.

ಒಂಟಿಯಾಗಿ, ಸಂಗಡಿಗರೊಂದಿಗೂ ಕೂಡಿ ಕಾರ್ಯಕ್ರಮ ನೀಡುತ್ತಿದ್ದಾರೆ. ಹಿಂದೆಲ್ಲಾ ಭಿಕ್ಷಾಟನೆ, ದೇವರ ಒಕ್ಕಲುಗಳಲ್ಲಿ ಕಿನ್ನರಜೋಗಿ ಮೇಳ ನಡೆಸುತ್ತಿದ್ದರು. ಕೆಲವು ವೇಳೆ ವಿಶೇಷವಾಗಿ ಸುಗ್ಗಿ ಕಾಲದಲ್ಲಿ ಗ್ರಾಮದ ಚಾವಡಿ, ದೇವಸ್ಥಾನ ಅಥವಾ ಶಾಲಾ ಆವರಣದಲ್ಲಿ ಜನ ಸೇರಿಸಿ ಕಾರ್‍ಯಕ್ರಮ ನೀಡಿರುವುದೂ ಉಂಟು. ತನ್ನ ತಾತ, ತಂದೆಯವರ್‍ಯಾರೂ ಸರ್ಕಾರದ ಅಥವಾ ಯಾವುದೇ ವೇದಿಕೆಗೆ ಆಹ್ವಾನಿತ ಕಲಾವಿದರಾಗಿ ಭಾಗವಹಿಸುತ್ತಿರಲಿಲ್ಲ ಎನ್ನುತ್ತಾರೆ.

ಕೊಳ್ಳಪ್ಪ ಅವರು ಇಂದು ದಾವಣಗೆರೆ, ಚಿತ್ರದುರ್ಗ ಎರಡೂ ಜಿಲ್ಲೆಗಳಲ್ಲಿಯೂ ಹೆಸರುವಾಸಿ ಕಲಾವಿದರು. ಕಳೆದ ಹತ್ತು ವರ್ಷಗಳಿಂದ ಭದ್ರಾವತಿ ಆಕಾಶವಾಣಿ ಕಲಾವಿದರಾಗಿ, ಐದು ವರ್ಷಗಳಿಂದ ಚಿತ್ರದುರ್ಗದ ಆಕಾಶವಾಣಿ ಕಲಾವಿದರಾಗಿ ನಿರಂತರವಾಗಿ ಕಿನ್ನರಿಜೋಗಿ ಮೇಳ ನೀಡುತ್ತಿರುವುದು ಇವರ ವಿಶೇಷ. ಚಿತ್ರದುರ್ಗದ ದುರ್ಗೋತ್ಸವ, ದಾವಣಗೆರೆ ಉತ್ಸವ ಈ ಮೊದಲಾದ ಸಮಾರಂಭ ಹಾಗೂ ಮುರುಘಾಮಠದ ಸಾಂಸ್ಕೃತಿಕ ಮೇಳಗಳಲ್ಲೂ ಭಾಗವಹಿಸಿದ್ದಾರೆ. ಕರ್ನಾಟಕದ ಹಲವು ಸಾಂಸ್ಕೃತಿಕ ಸಂಘ ಸಂಸ್ಥೆಗಳು ಇವರನ್ನು ಆಹ್ವಾನಿಸಿ ಕಾರ್‍ಯಕ್ರಮ ಏರ್ಪಡಿಸಿವೆ.

ವೃತ್ತಿ ಹಾಗೂ ಹವ್ಯಾಸಿ ಎರಡೂ ಪರಂಪರೆಯಲ್ಲಿಯೂ ಕಿನ್ನರ ಜೋಗಿ ಮೇಳ ನೀಡುತ್ತಿರುವುದು ಇವರ ವಿಶೇಷ.

ಡಿ. ಕೊಳ್ಳಪ್ಪ,
ಕಲಾವಿದರು, ದಾವಣಗೆರೆ ತಾಲೂಕು.

## ಬಿಳಿಚೋಡು ಕರಿಯಪ್ಪ

ಲೋಕಿಕೆರೆ ಕರಿಯಪ್ಪನವರದು ಬಿಳಿಚೋಡಿನ ದೊಡ್ಡ ಕುಟುಂಬ. ಊರ ಗವಡಿಕೆ, ಜಮೀನ್ದಾರಿಕೆಯ ಮನೆತನ. ತಂದೆ ಲೋಕಿಕೆರೆ ಭರಣ್ಣನವರೂ ದಾನ ಧರ್ಮ ವಿಚಾರಗಳಲ್ಲಿ ಅಗ್ರಗಣ್ಯರು. ಊರ ದೇವಾಲಯದ ಒಡೆತನವೂ ಇವರಿಗೆ ಸೇರಿತ್ತು. ಕರಿಯಪ್ಪ ಸುಸಂಸ್ಕೃತ ವ್ಯಕ್ತಿಯಾಗಿ ಬಾಳಿದವರು. ಜೋಡುಸೊಲಿಗೆ ಕುರಿಯ ಒಡೆಕಾರರು. ಹಾಲುಮತಸ್ಥ ಜನಾಂಗಕ್ಕೆ ಸೇರಿದ ಈ ಕಲಾವಿದ ಕುರಿ, ಕಂಬಳಿ ನೇಯ್ಗೆ, ನೇಗಿಲು ಕಟ್ಟುವ ಹಾಗೂ ಕೃಷಿ ಸಂಬಂಧಿ ನೂರಾರು ಪದಗಳನ್ನು ಹಾಡುತ್ತಿದ್ದರು. ಕಾಡುಗೊಲ್ಲರ ಜೊತೆಗೂಡಿ ಕುರಿಗಳು ಬೇಸಿಗೆ ಕಾಲಕ್ಕೆ ಹುಲ್ಲುನೀರಿಗೆ ಪರಸ್ಥಳಕ್ಕೆ ಹೋದಾಗ ಆ ವ್ಯಕ್ತಿಗಳಿಂದ ಪದ ಕಲಿತ ಇವರು ತನಗೆ ಕಲಿಸಿದ ಗುರುವನ್ನು ಮೀರುವ ಹಾಗೆ ಪದ ಹಾಡುತ್ತಿದ್ದರು. ದೇವರ ಉತ್ಸವಗಳಲ್ಲಿ ಕೋಲುಮೇಳ ನಡೆಸುತ್ತಿದ್ದರು. ಬಿಳಿಚೋಡು ಹಾಗೂ ಜಗಳೂರು ತಾಲ್ಲೂಕಿನಾದ್ಯಂತ ಕೋಲುಮೇಳ ಕಲಿಸಿಕೊಟ್ಟ ಹಿರಿಮೆಯೂ ಇವರಿಗೆ ಸಲ್ಲುತ್ತದೆ. ಯಕ್ಷಗಾನ ಭಾಗವಂತಿಕೆ, ವೇಷಭೂಷಣ ಹಾಗೂ ಹಿನ್ನೆಲೆ ಗಾಯಕರೂ ಆಗಿ ಕುಶ-ಲವರ ಕಾಳಗ, ದುಶ್ಯಾಸನನ ಕಥೆ, ಪಾಂಡವರ ವನವಾಸ ಮೊದಲಾದ ಯಕ್ಷಗಾನ ಬಯಲಾಟಕ್ಕೆ ಹಿನ್ನೆಲೆ ಸಂಗೀತ ನೀಡಿದ ಹಿರಿಮೆ ಇವರದು.

ಬಿಳಿಜೋಡು ಕರಿಯಪ್ಪ ಪ್ರಧಾನವಾಗಿ ಕೋಲುಮೇಳ ಭಾಗವತರು. ಇವರು ಕಟ್ಟಿದ ಶ್ರೀ ಬೀರೇಶ್ವರ ಕೋಲುಮೇಳ ಸಂಘ ಹಲವು ಯುವಜನ ಮೇಳಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿವೆ. ಹರ್ತಿಕೋಟೆ, ಹಿರಿಯೂರು, ಪಗಲಬಂಡೆ ಗ್ರಾಮಗಳಲ್ಲಿ ಕೋಲುಮೇಳಗಳನ್ನು ಕಲಿಸಿದರು. ಮೊದಲಿಗೆ ಚಿತ್ರದುರ್ಗದ ಬೃಹನ್ಮಠದ ಜಾತ್ರಾಮಹೋತ್ಸವದಲ್ಲಿ ಬಿಳಿಚೋಡಿನ ಕೋಲಾಟ ತಂಡ ಇದ್ದೇ ಇರುತ್ತಿತ್ತು. ಅದರ ರೂವಾರಿಯಾಗಿ ಕರಿಯಪ್ಪನವರ ಸಾಧನೆ ಮೆಚ್ಚುವಂತಹದು.

ಕರಿಯಪ್ಪನವರು ಹರ್ತಿಕೋಟೆಯ ಪಿ. ಆರ್. ತಿಪ್ಪೇಸ್ವಾಮಿಯವರ ಸಂಪರ್ಕ ಸಾಧಿಸಿದ ನಂತರ ಇವರ ತಂಡ ಮೈಸೂರಿನ ದಸರಾ ಮಹೋತ್ಸವ ಸಂದರ್ಭದಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆಯಿತು. ನಂತರ ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ೧೯೮೪ ಸಂದರ್ಭದಲ್ಲಿ ಕೋಲುಮೇಳವನ್ನು ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳ ಸಮಕ್ಷಮ ಪ್ರದರ್ಶಿಸಿದರು. ಇವರು ಹಾಡಿದ ಹಲವು ಹಾಡುಗಳನ್ನು ಜೀಶಂಪ, ಅಂಬಳಿಕೆ ಹಿರಿಯಣ್ಣ ಸಂಗ್ರಹಿಸಿದರು. ಇದಕ್ಕೂ ಮೊದಲಿಗೆ ಇವರು ಹಾಡಿರುವ ಕೋಲುಪದಗಳನ್ನು ಚಿತ್ರಕಲ್ಲು ಮದಕರಿ ಗ್ರಂಥದಲ್ಲಿ ಸಂಗ್ರಹಿಸಿ ಇದನ್ನು ಕರಾಕೃ ವರು ೧೯೭೫ರಲ್ಲಿ ಪ್ರಕಟಿಸಿದರು. ಚಿತ್ರಕಲ್ಲು ಮದಕರಿ ಸಂಕಲನದಲ್ಲಿ ಪ್ರಕಟಿಸಿದರು.

ಕಲ್ಲತ್ತಿ ಕರಿಬೇವು ಒಳ್ಳೇ ಕಾಡನುಗ್ಗೇ ಮರವು
ಗೂಡು ನೋಡ್ಯೆತಣ್ಣ ಒಳ್ಳೆ ದುರುಗವ । ತಂದಾನಿತಾನ
ಕೆಮ್ಮಣ್ಣು ಕೆದರ್ಯೆತೆ ಒಳ್ಳೆ ನೆಲ್ಲುಲ್ಲು ಹಾಸ್ಯೆತೆ
ಮುಳ್ಳು ಮಾಡ್ಯೆತಣ್ಣ ದುರುಗವ । ತಂದಾನಿತಾನ

ಈ ಮೊದಲಾದ ಹಲವು ಗೀತೆಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಜೀಶಂಪ, ಅಂಬಳಿಕೆ ಹಿರಿಯಣ್ಣ ಮೊದಲಾದವರು ಇವರ ಗೀತೆಗಳನ್ನು ಸಂಗ್ರಹಿಸಿದ್ದಾರೆ.

ಕುರಿ ತುಪ್ಪಟ ಕತ್ತರಿಸುವುದು, ಕಂಬಳಿ ನೇಯ್ಗೆ, ಕುರಿ ಪೋಷಣೆಯಲ್ಲಿಯೇ ತೊಂಬತ್ತು ವರ್ಷ ಕಳೆದ ಕರಿಯಪ್ಪ ಈಗ ದಿವಂಗತರು. ನಾಲ್ವರು ಮಕ್ಕಳು ರೈತಾಪಿ ಬದುಕಿನಲ್ಲಿ ಬದುಕು ಸವೆಸುತ್ತಿದ್ದಾರೆ.

# ಫಕೀರಪ್ಪ

ಫಕೀರಪ್ಪನವರು ಹರಿಹರದವರು. ತಂದೆ ಭೀಮಪ್ಪ, ತಾಯಿ ಶಾಂತಮ್ಮ, ಕುರುಬ ಜನಾಂಗಕ್ಕೆ ಸೇರಿದವರು. ಸುಮಾರು ೬೦ ವರ್ಷ ವಯೋಮಿತಿಯ ಫಕೀರಪ್ಪ ಡೊಳ್ಳು ಕಲೆಯನ್ನು ತಮ್ಮ ಹತ್ತನೇ ವಯಸ್ಸಿನಿಂದಲೇ ಅಭ್ಯಾಸ ಮಾಡುತ್ತಾ ಬರುತ್ತಿದ್ದಾರೆ. ಗುರುವಾಗಿ ಕುರುಬರ ಗುರುಸ್ವಾಮಿ ಇವರೊಂದಿಗೆ ೨೫ ಕಲಾವಿದರನ್ನು ಕೂಡಿಸಿ ಸಂಜೆ ಪ್ರತಿದಿನ ಡೊಳ್ಳುಕುಣಿತವನ್ನು ಅಭ್ಯಾಸ ಮಾಡಿಸುತ್ತಿದ್ದರು. ಡೊಳ್ಳುಬಾರಿಸುವುದು ಮೊದಲು ಎರಡು ವರ್ಷಗಳು ಅಭ್ಯಾಸ ಮಾಡಿದರು. ನಂತರ ನೃತ್ಯವನ್ನು ಸಹ ಇನ್ನೆರಡು ವರ್ಷಗಳ ಕಾಲ ಅಭ್ಯಾಸ ಮಾಡಿದರು. ಕೇವಲ ಕುಣಿತ ಡೊಳ್ಳು ಬಾರಿಸುವುದಕ್ಕೆ ಮಾತ್ರ ಮೀಸಲಾಗದ ಈ ಕಲವಿದ ಡೊಳ್ಳಿನ ಪದಗಳನ್ನು ಹಾಡುತ್ತಾರೆ. ಬೀರೇದೇವರ ಪುರಾಣ, ಮೈಲಾರಲಿಂಗನ ಕಥನವನ್ನು ಮಾಡುವುದು ಇವರ ವಿಶೇಷ.

ಹರಿಹರದಲ್ಲಿ ಕಸಬಾ ದುರ್ಗಾಂಬಿಕಾ ಡೊಳ್ಳು ಕಲಾಸಂಘವನ್ನು ಸ್ಥಾಪಿಸಿಕೊಂಡು ಕಳೆದ ೨೦ ವರ್ಷಗಳಿಂದಲೂ ಡೊಳ್ಳು ಕಲೆಯ ಪ್ರಸಾರ, ಪ್ರಕಟಣೆಯ ಜೊತೆಗೆ ಯುವಕರಿಗೆ ಡೊಳ್ಳು ಕಲೆಯನ್ನು ಕಲಿಸುತ್ತಿರುವುದು ಇವರ ವಿಶೇಷವಾಗಿದೆ.

ಶ್ರೀ ಮಂಜಣ್ಣ, ಕೊಟ್ರಪ್ಪ, ಫಾಲಾಕ್ಷ, ಸಿದ್ದಪ್ಪ, ಲಿಂಗಣ್ಣ, ದುರ್ಗಪ್ಪ ಈ ಮೊದಲಾದ ಡೊಳ್ಳು ಕಲಾವಿದರ ತಂಡವಿದ್ದು ಹವ್ಯಾಸಿ ಹಾಗೂ ವೃತ್ತಿ ಎರಡೂ ಪ್ರಕಾರಗಳಲ್ಲೂ ಕಲಾ ಪ್ರದರ್ಶಿಸುತ್ತಿರುವುದು ಇವರ ಹೆಚ್ಚುಗಾರಿಕೆಯಾಗಿದೆ. ಚಂದನ ದೂರದರ್ಶನದಲ್ಲಿ ಇವರ ಡೊಳ್ಳು ಕಲಾಪ್ರದರ್ಶನ ಪ್ರದರ್ಶನವಾಗಿದೆ. ಈ ತಂಡವು ತರೀಕೆರೆಯಲ್ಲಿ ಗುರಸ್ವಾಮಿಯವರ ಮಾರ್ಗದರ್ಶನದಲ್ಲಿ ಮೊದಲಿಗೆ ಡೊಳ್ಳುಕಲೆಯನ್ನು ಹೊರಗಡೆಗೆ ಪ್ರದರ್ಶಿಸಿದೆವೆಂದು ಅನಂತರ ನಿರಂತರವಾಗಿ ಸರ್ಕಾರ, ಅಕಾಡೆಮಿಗಳೂ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಆಹ್ವಾನಿತ ಕಲಾವಿದರಾಗಿ ಭಾಗವಹಿಸಿ ಕಲಾಪ್ರದರ್ಶನ

ನೀಡುತ್ತಾ ಬರುತ್ತಿದ್ದೇವೆ ಎನ್ನುತ್ತಾರೆ ಶ್ರೀ ಫಕೀರಪ್ಪ. ಡೊಳ್ಳುಕಲೆ ಕುರುಬರಿಗೆ ಸಂಬಂಧಿಸಿದ ಕಲೆ. ಡೊಳ್ಳು ಕುರುಬರ ಸ್ವಾಭಿಮಾನದ, ಆಧ್ಯಾತ್ಮದ ಸಂಕೇತ. ಆದರೆ ಈ ಕಲೆಯನ್ನು ಕುರುಬರು ಉಳಿಸಿಕೊಳ್ಳುತ್ತಿಲ್ಲ. ಸರ್ಕಾರವು ಕುರಬರಿಗಿಂತ ಇತರೆ ಜನಾಂಗದವರಿಗೆ ಈ ಕಲಾಪ್ರದರ್ಶನದಲ್ಲಿ ಹೆಚ್ಚಿನ ಮುತುವರ್ಜಿ ವಹಿಸುತ್ತಿರುವುದು ಸರಿಯಾದ ಕ್ರಮವಲ್ಲ ಎನ್ನುವುದು ಫಕೀರಪ್ಪನವರ ಅಭಿಮತ. ಜಾನಪದ ಅಕಾಡೆಮಿ ಎಂದರೆ ಮೈಸೂರು ಭಾಗ ಬಿಟ್ಟು ನಮ್ಮ ಕಡೆಗೂ ಬರಬೇಕೆಂಬ ಕೋಪವನ್ನು ವ್ಯಕ್ತಪಡಿಸುತ್ತಾರೆ.

ಡೊಳ್ಳು ಮೇಕೆಯ ಚರ್ಮದಿಂದ ತಯಾರಿಸುವ ಚರ್ಮವಾದ್ಯವಾಗಿದ್ದು ಆದರೆ ಇತ್ತೀಚೆಗೆ ಫೈಬರ್‌ನಿಂದಲೂ ತಯಾರಿಸುತ್ತಾರೆ. ಇದು ಸುಮಧುರ ಸಂಗೀತ ಬರುವುದಿಲ್ಲ. ಬದಲಿಗೆ ಒಡಕು ಧ್ವನಿಯೂ ಸೇರಿ ಈ ಕಲೆಯನ್ನು ಕೊಲ್ಲುವ ಹಂತ ತಲುಪುತ್ತಿದೆ ಎನ್ನುತ್ತಾರೆ.

ತರೀಕೆರೆ, ದಾವಣಗೆರೆ, ಅಜ್ಜಂಪುರ, ಸಿರಿಗೆರೆ, ಚಿತ್ರದುರ್ಗ ದುರ್ಗೋತ್ಸವ, ಮುರುಘಾ ಮಠದ ಕಾರ್ಯಕ್ರಮಗಳಲ್ಲಿ ಇವರು ಕಳೆದ ೪೦ ವರ್ಷಗಳಿಂದ ಭಾವಹಿಸುತ್ತಾ ಕಲಾಪ್ರದರ್ಶನ ನೀಡುತ್ತಾ ಬರುತ್ತಿದ್ದಾರೆ. ಶಾಲಾ ಕಾಲೇಜಿನ ಮಕ್ಕಳಿಗೂ ಫಕೀರಪ್ಪ ಡೊಳ್ಳು ಕಲೆಯನ್ನು ಕಲಿಸುತ್ತಿರುವುದು ವಿಶೇಷ. ಸ್ವಗ್ರಾಮದ ಪ್ರಾಥಮಿಕ ಶಾಲಾ ಮಕ್ಕಳೂ ಪ್ರತಿಭಾ ಕಾರಂಜಿಯಲ್ಲಿ ರಾಜ್ಯಮಟ್ಟಕ್ಕೆ ಡೊಳ್ಳು ಕಲೆಯಿಂದ ಆಯ್ಕೆಯಾಗಿದ್ದಾರೆ. ಇವರಿಗೆ ಮಾರ್ಗದರ್ಶಕರು ಶ್ರೀ ಫಕೀರಪ್ಪ.

**ಫಕೀರಪ್ಪ,**
**ದುರ್ಗಾಂಬ ಡೊಳ್ಳುಕಲಾ ಸಂಘ, ಕಸಬಾ ಹೋಬಳಿ,**
**ಹರಿಹರ ತಾಲೂಕ.**

## ಪಿರೀಬಾಯಿ

ಲಂಬಾಣಿ ಕುಣಿತ ಜನಪದ ವಿಶಿಷ್ಟ ಕಲೆ. ಬಣ್ಣಬಣ್ಣದ ಲಂಗ, ರವಿಕೆ, ದಾವಣಿ ಮೊಣಕೈನವರೆಗೂ ತರಾವರಿ ಬಳೆ, ಹಣೆಗೆ ಹಣೆಕಟ್ಟು, ಕಾಲಿಗೆ ಕಾಲಂದುಗೆ, ಗೆಜ್ಜೆಯ ಚೈನು, ತಲೆಯ ಮೇಲೆ ಉಟ್ಟ ದಾವಣಿಯಿಂದ ಅರ್ಧ ಮುಚ್ಚಿದ ಹೊದಿಕೆ, ಕೈಯಲ್ಲಿ ಆಟಿಕೆಯಾಗಿ ಬಣ್ಣದ ಕೋಲುಗಳು ಲಂಬಾಣಿ ಕುಣಿತದ ವೇಷಭೂಷಣಗಳು.

ಬುಡಕಟ್ಟು ಸಂಸ್ಕೃತಿಯ ಅಚ್ಚ ಲಕ್ಷಣಗಳನ್ನು ದಟ್ಟವಾಗಿ ಉಳಿಸಿಕೊಂಡು ಬಂದಿರುವ ಲಂಬಾಣಿಗಳು, ಕರ್ನಾಟಕದ ಬಯಲಸೀಮೆಯಲ್ಲಿ ವ್ಯಾಪಕವಾಗಿ ನೆಲೆಸಿದ್ದಾರೆ. ದಾವಣಗೆರೆ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ನೆಲೆಸಿ ತಮ್ಮದೇ ಆದ ಆಚಾರ ವಿಚಾರಗಳಿಂದ ತೀರಾ ಭಿನ್ನವಾದ ಜನಾಂಗವಾಗಿದೆ. ಲಂಬಾಣಿ ಜನಾಂಗದ ಹಬ್ಬ ಹಾಗೂ ಸಾಂಸ್ಕೃತಿಕ ಸಂದರ್ಭಗಳಲ್ಲಿ 'ಲಗೋರಿ ಕುಣಿತ' ಎಂಬ ತೀರಾ ಭಿನ್ನವೂ ವಿಶಿಷ್ಟವೂ ಆದ ನೃತ್ಯ ಪ್ರಕಾರವನ್ನು ಈ ಭಾಗದ ಪ್ರಸಿದ್ಧ ಕಲಾವಿದೆ ಚಿನ್ನಸಮುದ್ರದ ಪಿರೀಬಾಯಿ ಮುಂದುವರಿಸಿಕೊಂಡು ಬರುತ್ತಿರುವುದು ವಿಶೇಷವಾಗಿದೆ.

ಪಿರೀಬಾಯಿ ದಾವಣಗೆರೆ ತಾಲ್ಲೂಕಿನ ನೇರ್ಲಿಗೆ ಸಮೀಪದ ಚಿನ್ನಸಮುದ್ರದವರು. ಹೆಚ್ಚೇನು ಓದಿಲ್ಲ. ರೈತಾಪಿ ಕುಟುಂಬದಲ್ಲಿ ಹುಟ್ಟಿ ಬೆಳೆದವರು. ತನ್ನ ತಾಯಿ ಈ ಕುಣಿತ ಹಾಗೂ ಹಾಡಿಗೆ ಪ್ರೇರಕರು ಎಂಬುದು ಈಕೆಯ ಅಭಿಮತ. ತನ್ನ ಇಬ್ಬರು ಮಕ್ಕಳಿಗೂ ಈ ಕಲೆಯ ಬಗೆಗೆ ಪರಿಚಯ ನೀಡಿದ್ದರು. ಸಮೂಹ ನೃತ್ಯದ ಸಂದರ್ಭದಲ್ಲಿ ಹೆದರಿಕೆ, ಸಂಕೋಚಗಳಿಂದ ಕಲಾಪ್ರದರ್ಶನಕ್ಕೆ ಬರುವುದಿಲ್ಲ ಎನ್ನುತ್ತಾರೆ. ಆದರೆ ತನ್ನ ಗ್ರಾಮಕ್ಕೆ ಲಂಬಾಣಿ ಹೆಣ್ಣುಮಕ್ಕಳಿಗೆ ಸಮರ್ಪಕವಾಗಿ ಕಲೆಯನ್ನು ಕಲಿಸಿಕೊಟ್ಟಿರುವುದು ಈಕೆಯ ವಿಶೇಷ. ಲಂಬಾಣಿ ಹಾಗೂ ಮದುವೆಗೆ ಸಂಬಂಧಿಸಿದ ಹಲವು ಪ್ರಕಾರದ ಜನಪದ

ಗೀತೆಗಳನ್ನು ಪಿರೀಬಾಯಿ ಹಾಡುತ್ತಾರೆ. ಜೊತೆಗೆ ಸೊಗಾಸಾಗಿ ಕೋಲಾಟವನ್ನು ಮಾಡುತ್ತಾರೆ.

ಲಂಬಾಣಿ ಕುಣಿತ ಆಕರ್ಷಿಸಿದರೂ ಭಾಷೆ ಅರ್ಥವಾಗದೆ, ಆ ಕಲೆ ರುಚಿಸುವುದಿಲ್ಲ. ಆದರೆ ಕೋಲು ಕಲೆ, ಹಾಡು, ಕುಣಿತ ಆಕರ್ಷಣೆ ಜೊತೆಗೆ ಕನ್ನಡದ ಕಂಪು ಎಂದು ಮೈತುಂಬಿ ಮಾತನಾಡುವ ಪಿರೀಬಾಯಿಗೆ ಕಲಾಪ್ರದರ್ಶನದ ದೃಷ್ಟಿಯಿಂದ ಸಾಕಷ್ಟು ಗೌರವ, ಪುರಸ್ಕಾರವೂ ಲಭಿಸಿವೆ. ಅದಕ್ಕೆ ಧನ್ಯತೆಯನ್ನು ಅರ್ಪಿಸುವ ಈ ಕಲಾವಿದೆ, ಆರ್ಕೆಸ್ಟ್ರಾ ಸಂಸ್ಕೃತಿ ಇಂದಿನ ಜನಪದ ಕಲೆಗಳಿಗೆ ಬಾಧಕ ಎನ್ನುತ್ತಾರೆ.

ಪ್ರತಿ ವರ್ಷದಲ್ಲಿ ಮೂರು ತಿಂಗಳಿಗೊಮ್ಮೆ ಚಿತ್ರದುರ್ಗದ ಆಕಾಶವಾಣಿಯಿಂದ ಈಕೆಯ ಲಂಬಾಣಿ ನೃತ್ಯ, ಜನಪದ ಸಂಗೀತ ಪ್ರಸಾರವಾಗುತ್ತಿವೆ. ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟದಲ್ಲಿಯೂ ಈಕೆ ಕಲಾ ಪ್ರದರ್ಶನ ನೀಡಿದ್ದಾರೆ. ಮುರುಘಾಮಠ, ತರಳಬಾಳು ಮಠ, ಸಾಣೆಹಳ್ಳಿ ಮಠಗಳಲ್ಲಿ ನಡೆಯುವ ಸಾಂಸ್ಕೃತಿಕ ಉತ್ಸವಗಳಲ್ಲಿ ಆಹ್ವಾನಿತ ಕಲಾವಿದೆಯಾಗಿ ಕಳೆದ ೧೫ ವರ್ಷಗಳಿಂದ ಕಲಾಪ್ರದರ್ಶನ ನೀಡುತ್ತಾ ಬಂದಿರುವುದು ಈಕೆಯ ವಿಶೇಷ. ಮುರುಘಾಮಠದ ಗೌರವ, ದಾವಣಗೆರೆ ಜಿಲ್ಲಾ ಸಾಂಸ್ಕೃತಿಕ ಉತ್ಸವ, ದುರ್ಗೋತ್ಸವಗಳಲ್ಲಿ ಕಲಾಪ್ರದರ್ಶನದ ಜೊತೆಗೆ ಸನ್ಮಾನವೂ ಸಂದಾಯವಾಗಿದೆ. ಹತ್ತು ಜನರ ಕಲಾತಂಡದೊಂದಿಗೆ ಕರೆದಲ್ಲಿಗೆ ಹೋಗಿ ಲಂಬಾಣಿ ಕಲಾಪ್ರದರ್ಶನ ನೀಡುತ್ತಿರುವ ಈ ಅರವತ್ತೈದು ವರ್ಷ ವಯೋಮಾನದ ಪಿರೀಬಾಯಿ, ಸರಳ ನೇರ ಸ್ವಭಾವದ ಹೆಣ್ಣುಮಗಳು. ಕಲೆಯ ಉಳಿವಿಗಾಗಿ ತನ್ನ ಹಳ್ಳಿ ಚಿನ್ನ ಸಮುದ್ರದಲ್ಲಿ ಕಲಾಸಂಘ ಆರಂಭಿಸಿ, ಯುವತಿಯರಿಗೆ ಲಂಬಾಣಿ ಕುಣಿತದ ತರಬೇತಿ ನೀಡುತ್ತಿದ್ದಾರೆ.

**ಶ್ರೀಮತಿ ಪಿರೀಬಾಯಿ,**
**ಲಂಬಾಣಿ ಕಲಾವಿದೆ, ಚಿನ್ನಸಮುದ್ರ, ನೇರ್ಲಿಗೆ ಅಂಚೆ,**
**ದಾವಣಗೆರೆ ತಾಲೂಕು.**

# ಸೋಬಾನೆ ರತ್ನಮ್ಮ

ಶ್ರೀಮತಿ ರತ್ನಮ್ಮ ನೇರ್ಲಿಗೆಯವರು. ಸುಮಾರು ೬೫ ವಸಂತಗಳನ್ನು ಕಳೆದಿರುವ ಈ ಹಿರಿಯ ಕಲಾವಿದೆಯ ವಯಸ್ಸು ಕೇಳಿದರೆ 'ಒಂದು ಅರವತ್ತು-ಎಪ್ಪತ್ತು ಸುಗ್ಗಿ ಕಂಡಿರಬೇಕು ಕಣಣ್ಣ' ಅಂತಾರೆ. ಮಧುರ ಕಂಠ, ಸ್ಪಷ್ಟ ನೇರ ಹಾಡುಗಾರಿಕೆ, ಹಾಡೆಲ್ಲ ನಾಡಾಗಲಿ ಎಂಬುದು ಈಕೆಯ ಹಾರೈಕೆ.

ಶ್ರೀಮತಿ ರತ್ನಮ್ಮ ಹುಟ್ಟಿದ್ದು, ಕೊಟ್ಟು ಮದುವೆ ಮಾಡಿದ್ದು ದಾವಣಗೆರೆ ತಾಲ್ಲೂಕಿನ ನೇರ್ಲಿಗೆ ಗ್ರಾಮ. ರೈತಾಪಿ ಬದುಕು, ಊರಿನ ಕುರುಬರ, ಬೋವಿ ಜನಾಂಗದ ಹಾಗೂ ಹೊಲದ ಕೆಲಸದಲ್ಲಿ ಜೊತೆಗೂಡುತ್ತಿದ್ದ ಕಾಡುಗೊಲ್ಲ ಜನಾಂಗದ ಹೆಂಗಸರ ಸಹವಾಸ, ಅವರು ಹಾಡುತ್ತಿದ್ದ ಪದವನ್ನು ಬಾಲ್ಯದಲ್ಲಿ ಮೌನವಾಗಿ ಆಲಿಸಿದ ರತ್ನಮ್ಮ ಮುಂದೆ ಸ್ವಸಾಮರ್ಥ್ಯದಿಂದಾಗಿ 'ಸೋಬಾನೆ ರತ್ನಮ್ಮ' ಎಂದು ಕರೆಸಿಕೊಳ್ಳುವ ಹಂತಕ್ಕೆ ಬೆಳೆದದ್ದು ಈ ಕಲಾವಿದೆಯ ವಿಶೇಷ. ರತ್ನಮ್ಮ ಅವರಿಗೆ ನಾಲ್ವರು ಮಕ್ಕಳು. ಗಂಡನೂ ವ್ಯವಸಾಯಗಾರರು. ಅವರು ತತ್ವಪದ ಹಾಡುತ್ತಾರೆ. ಕೋಲುಪದ ಹೇಳುತ್ತಾರೆ. ಈಕೆ ಓದಿಲ್ಲ ಆದರೂ ಓದಿದವರನ್ನು ಮೀರಿಸುವ ನೆನಪಿನಶಕ್ತಿ ಅಗಾಧವಾಗಿದೆ.

ರತ್ನಮ್ಮನವರು ಸೋಬಾನೆಯಲ್ಲಿ ಹಲವು ವೈವಿಧ್ಯತೆ ತರುತ್ತಾರೆ. ಲಾವಣಿ ರೂಪದಲ್ಲಿಯೂ ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಅರ್ಜುನ ಜೋಗಿ ಪದಗಳ ರೂಪದಲ್ಲಿಯೂ ಸೋಬಾನೆ ಹಾಡುತ್ತಾರೆ.

ರತ್ನಮ್ಮ ಅವರೊಂದಿಗೆ ಇದೇ ಗ್ರಾಮದ ಉಮಾನಾಯಕ, ಲಂಬಾಣಿ ತಾಂಡದ ಪಿರಿಬಾಯಿ ಯಾವಾಗಲೂ ಜೊತೆಗೂಡುವುದು ವಿಶೇಷ. ಲಂಬಾಣಿ ಪದ ಹಾಡುವುದು ಪಿರಿಬಾಯಿ ಹಾಗೂ ಉಮಾಬಾಯಿ ಕೆಲಸವಾದರೆ, ಸೋಬಾನೆ ಪದ ಹೇಳುವುದು

ರತ್ನಮ್ಮನ ಕಾಯಕ. ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಈ ಮೂವರೂ ಜೊತೆಗೂಡುವುದೇ ವಿಶೇಷ. ಜಾತಿಯ ಸೂತಕವಿಲ್ಲ. ಜನಾಂಗಿಕ, ಭೇದಭಾವವಿಲ್ಲ. ಜನಪದರ ಮುಗ್ಧತೆಯನ್ನು ಅಪ್ಪಟವಾಗಿ ಕಾಪಾಡಿಕೊಂಡು ಬಂದಿರುವ ರತ್ನಮ್ಮ ಪಾಂಡವರ ವನವಾಸ, ಅರ್ಜುನ ಜೋಗಿ, ಗುಣಸಾಗರಿ, ಬಾಲನಾಗಮ್ಮ, ಮದುಗದ ಕೆಂಚಮ್ಮನ ಕತೆಗಳನ್ನು ಹಾಡುತ್ತಾರೆ. ಚಿತ್ರದುರ್ಗದ ಮದಕರಿನಾಯಕನ ಮೇಲೂ ಪದ ಹಾಡುವುದು ಈಕೆಯ ವಿಶೇಷ. 'ಪೂರಾ ಬರುವುದಿಲ್ಲ, ರವಾಟು-ರವಾಟು ಹೇಳುತೀನಿ ಸ್ವಾಮಿ' ಎಂಬ ವಿನಮ್ರ ಭಾವನೆ ಈಕೆಯದು.

ರತ್ನಮ್ಮನವರು ಭದ್ರಾವತಿ ಆಕಾಶವಾಣಿಯಿಂದ ಮೊದಲು ಹಾಡುವದಕ್ಕೆ ಆರಂಭಿಸಿದರು. ನಂತರ ಚಿತ್ರದುರ್ಗದ ಆಕಾಶವಾಣಿಯಿಂದ ಕನಿಷ್ಟ ವರ್ಷಕ್ಕೊಮ್ಮೆ ಯಾದರೂ ಇವರ ಕಾರ್ಯಕ್ರಮ ಇದ್ದೇ ಇರುತ್ತದೆ.

ಚಿತ್ರದುರ್ಗದ ಮುರುಘಾಮಠ, ಸಿರಿಗೆರೆಯ ತರಳಬಾಳು ಮಠದ ಧಾರ್ಮಿಕ ಸಮಾರಂಭದಲ್ಲಿ ನಿರಂತರವಾಗಿ ಹಾಡುವ ರತ್ನಮ್ಮ ತರಳಬಾಳು ಮಠ, ಸಿರಿಗೆರೆಯಲ್ಲಿ ನಡೆದ ಸೋಬಾನೆ ಪದಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. ಮದುವೆ, ಧಾರ್ಮಿಕ ಸಮಾರಂಭಗಳಲ್ಲಿ ಅತ್ಯಂತ ಉತ್ಸುಕತೆಯಿಂದ ಭಾಗವಹಿಸಿ, ಸಂಗೀತ ನಡೆಸಿಕೊಡುವ ರತ್ನಮ್ಮ ಹಾಡುವುದಕ್ಕೆ ಯಾವುದೇ ಸಂಭಾವನೆ ನಿರೀಕ್ಷಿಸುವುದಿಲ್ಲ. ಅಪರೂಪದ ನಡೆ ನುಡಿಯ ರತ್ನಮ್ಮನಿಗೆ ಸರ್ಕಾರದ ಸವಲತ್ತು ದೊರೆಯಬೇಕೆಂಬುದು ನೇರ್ಲಿಗೆ ಗ್ರಾಮದ ಜನಾಭಿಪ್ರಾಯವೂ ಆಗಿದೆ.

**ಶ್ರೀಮತಿ ರತ್ನಮ್ಮ,**
**ನೇರ್ಲಿಗೆ, ದಾವಣಗೆರೆ ತಾಲೂಕು.**

## ಬಸವರಾಜು ಎಚ್. ಜಿ.

ಕೀಲುಕುದುರೆ, ಕುಣಿತ ಜನಪದರ ಆಸಕ್ತಿ ಕಲೆ, ಕುದುರೆಯ ಆಕೃತಿಗೆ ಮರದ ಕಾಲುಗಳನ್ನು ಕಟ್ಟಿಕೊಂಡು ರಾಜನ ಹಾಗೂ ರಾಣಿಯ ವೇಷ ಧರಿಸಿ ಕುದುರೆಯ ಮೇಲೆ ಕುಳಿತ ಭಂಗಿಯಲ್ಲಿ ಕುಣಿಯುವುದು ಈ ಕಲೆಯ ಒಂದು ಭಂಗಿ. ಜೊತೆಗೆ ವಾದ್ಯ ಸಂಗೀತವೂ ಆಕರ್ಷಕವಾಗಿದ್ದು ವೈವಿಧ್ಯಮಯ ಹಾಡುಗಳನ್ನು ನುಡಿಸುತ್ತಾರೆ. ಈ ಸಂಗೀತವಾದ್ಯಕ್ಕೆ ತಕ್ಕನಾಗಿ ನರ್ತಿಸುತ್ತಾ, ರಾತ್ರಿಯಿಡೀ ಕೀಲುಕುದುರೆ ಪ್ರದರ್ಶನ ನೀಡುತ್ತಾರೆ.

ಇದರಂತೆ ನವಿಲು ನರ್ತನ (ಮಯೂರ ನರ್ತನ) ಹೆಸರಗತ್ತೆ, ಒಂಟೆ ನೃತ್ಯಗಳೂ ಸೇರಿರುತ್ತವೆ. ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಅತಿ ವಿರಳವಾಗಿ ಕಂಡುಬರುವ ಕೀಲುಕುದುರೆ ಕುಣಿತವನ್ನು ಹೊನ್ನಾಳಿ ತಾಲ್ಲೂಕಿನ ನರಸನಹಳ್ಳಿ ಗ್ರಾಮದ ಚನ್ನಬಸವಯ್ಯ ಕಳೆದ ಆರಕ್ಕೂ ಹೆಚ್ಚು ದಶಕಗಳಿಂದಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಚನ್ನಬಸವಯ್ಯ ಹಲವಾರು ಕಲೆಗಳ ಗುಡಾಣದಂತಿದ್ದ ವ್ಯಕ್ತಿ. ಕೋಲಾಟ, ವಾದ್ಯ, ಚಮ್ಮಾಳ ಕಲಾವಿದರಾಗಿ ಬಣ್ಣದ ವೇಷಭೂಷಣಗಳ ಕಲಾವಿದರೂ ಆಗಿದ್ದರು. ಇವರ ಸ್ವಯಂಸ್ಫೂರ್ತಿಯಿಂದ ಕೀಲುಕುದುರೆ ನೃತ್ಯವನ್ನು ಮುಂದುವರಿಸಿಕೊಂಡು ಬಂದರು. ಈಗ ಇವರ ಮೊದಲ ಮಗ ಬಸವರಾಜು ಕೀಲುಕುದುರೆ ಕುಣಿತ ಕಲೆಯನ್ನು ಸಮರ್ಥವಾಗಿ ಮುಂದುವರಿಸತ್ತಾರೆ.

ಬಸವರಾಜು ಅವರಿಗೆ ಇದೀಗ ಅರವತ್ತರ ಪ್ರಾಯ. ಕೀಲುಕುದುರೆ ರಚನೆ, ಅದರೊಂದಿಗೆ ರಾಜನ ಪಾತ್ರದಲ್ಲಿ ಕುಣಿಯುವುದು, ಕೀಲುಕುದುರೆ ಕಲಾವಿದರಿಗೆ ರಾಜ, ರಾಣಿ, ಹಾಸ್ಯಗಾರ, ಕೋಡಂಗಿ ಈ ಮೊದಲಾದ ಪಾತ್ರಗಳನ್ನು ಅತ್ಯಂತ

ಸಮರ್ಥವಾದ ರೀತಿಯಲ್ಲಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇವರಿಗೆ ಇಬ್ಬರು ಗಂಡುಮಕ್ಕಳಿದ್ದು ಅವರೂ ಕೀಲುಕುದುರೆ ಕುಣಿತದ ಕಲೆಯನ್ನು ಅತ್ಯಂತ ಸ್ವಾರಸ್ಯಕರವಾಗಿ, ಆಕರ್ಷಕವಾಗಿ ಕುಣಿಸುವುದನ್ನು ಕರತಲಾಮಲಕ ಮಾಡಿಕೊಂಡಿರವುದು ವಿಶೇಷವಾಗಿದೆ.

ಬಸವರಾಜು ಅವರ ಕೀಲುಕುದುರೆ ನೃತ್ಯ ಶಿವಮೊಗ್ಗ, ಚಿತ್ರದುರ್ಗ, ಹಾವೇರಿ, ದಾವಣಗೆರೆ ಜಿಲ್ಲೆಗಳಲ್ಲಿ ಅತ್ಯಂತ ಹೆಸರುವಾಸಿಯಾಗಿದೆ. ಜೊತೆಗೆ ಗಣೇಶ, ಸರ್ಕಾರಿ ಹಾಗೂ ಖಾಸಗಿ ಸಭೆ-ಸಮಾರಂಭಗಳಲ್ಲಿ ತಪ್ಪದೇ ಆಹ್ವಾನಿತ ಕಲಾವಿದರಾಗಿ ಕೀಲುಕುದುರೆ ನೃತ್ಯವನ್ನು ಏರ್ಪಡಿಸುವುದು ಇವರ ಹವ್ಯಾಸವಾಗಿದೆ.

ಅರಸೀಕೆರೆ, ಹಾಸನ, ಚನ್ನರಾಯಪಟ್ಟಣ, ಶಿವಮೊಗ್ಗ, ಹೊಸದುರ್ಗ, ಚಿತ್ರದುರ್ಗ, ಚನ್ನಗಿರಿ, ದಾವಣಗೆರೆ, ಹರಪನಹಳ್ಳಿ, ಹರಿಹರ, ಸಿರಿಗೆರೆ ಈ ಮೊದಲಾದ ಸ್ಥಳಗಳಲ್ಲಿ ಕೀಲುಕುದುರೆ ಪ್ರದರ್ಶನವನ್ನು ಆಹ್ವಾನಿತ ಕಲಾವಿದರಾಗಿ ನೀಡಿರುವುದು ವಿಶೇಷ.

ಚಿತ್ರದುರ್ಗದ ದುರ್ಗೋತ್ಸವ, ದಾವಣಗೆರೆಯಲ್ಲಿ ಜರುಗಿದ ದಾವಣಗೆರೆ ಜಿಲ್ಲಾ ಉತ್ಸವ, ಚಿತ್ರದುರ್ಗದ ಮುರುಘಾಮಠದ ಉತ್ಸವ, ಸಿರಿಗೆರೆಯ ಜನಪದ ಕಲಾ ಮೇಳಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಾ ಬರುತ್ತಿದ್ದಾರೆ.

**ಎಚ್. ಬಿ. ಬಸವರಾಜು,**
**ನರಸನಹಳ್ಳಿ ಗ್ರಾಮ, ಹೊನ್ನಾಳಿ ತಾಲೂಕು.**

## ಎಚ್. ಬಸಪ್ಪ

ನಂದಿಕೋಲು ಕುಣಿತ ಕರ್ನಾಟಕದ ಒಂದು ಪ್ರಮುಖ ಜನಪದ ಪ್ರದರ್ಶನಾತ್ಮಕ ಕಲೆ. ಚಿಕ್ಕಮಗಳೂರು, ತುಮಕೂರು, ದಾವಣಗೆರೆ, ಬೆಂಗಳೂರು ಗ್ರಾಮಾಂತರ ಈ ಜಿಲ್ಲೆಗಳಲ್ಲಿ ವ್ಯಾಪಕವಾಗಿದ್ದ ಈ ಕಲೆ ಇಂದು ವಿರಳವಾಗುತ್ತಿದೆ.

೧೨ ರಿಂದ ೧೫ ಅಡಿ ಎತ್ತರದ ಕೋಲಿಗೆ ಹಿತ್ತಾಳೆಯ ಕಟ್ಟುಗಳನ್ನು ಜೋಡಿಸಿ, ಬಟ್ಟೆಯ ಧ್ವಜದಿಂದ ಶೃಂಗರಿಸಿ, ಕೋಲಿನ ತುದಿಯಲ್ಲಿ ಕಳಸ, ಉದ್ದನೆಯ ಬಾವುಟ, ಕೆಳಭಾಗದಲ್ಲಿ ಶಿವನ ನಂದಿ ಅದನ್ನೇ ಶಿವ ಎಂದು ಭಾವಿಸುವ, ಪೂಜಿಸುವ ಪರಿಕಲ್ಪನೆ ಇದೆ. ಇದನ್ನೇ ನಂದಿಧ್ವಜ ಕುಣಿತ ಎಂದು ಕರೆಯಲಾಗುವುದು. ಉದ್ದನೆಯ ಧ್ವಜವನ್ನು ಎತ್ತಿ ಹಿಡಿದು ಶರೀರದ ಮೇಲೆ ಧ್ವಜ ಕೊಡುವುದಕ್ಕೆ ಬಟ್ಟೆಯಿಂದ ತಯಾರಿಸಿದ ಉದ್ದನೆಯ ಚೀಲ, ಆ ಚೀಲದಲ್ಲಿ ಧ್ವಜವನ್ನಿಟ್ಟು ಕುಣಿಯುವುದು, ಪೂರಕವಾಗಿ ಚಮ್ಮೇಳ ಅಥವಾ ತಮಟೆ, ನಾಗಸ್ವರ ವಾದ್ಯಗಳನ್ನು ಬಳಸಲಾಗುತ್ತದೆ. ಶೈವಸಂಬಂಧಿ ಆಚರಣೆಗಳಲ್ಲಿ ಇಂದಿಗೂ ಈ ಸಂಪ್ರದಾಯ ಬಳಕೆಯಲ್ಲಿದೆ.

ಎಚ್. ಬಸಪ್ಪನವರು ನಂದಿಕೋಲು ಅಥವಾ ನಂದಿಧ್ವಜ ಕಲೆಯನ್ನು ಮೂರು ತಲೆಮಾರುಗಳಿ ನಡೆಸಿಕೊಂಡು ಬರುತ್ತಿರುವ ಹಿರಿಯ ಕಲಾವಿದರು. ೮೦ ವರ್ಷ ವಯಸ್ಸಿನ ಈ ಕಲಾವಿದರಿಗೆ ತಾತ, ತಂದೆಯವರ ಕಾಲದಿಂದಲೂ ಇದನ್ನೇ ಒಂದು ಹವ್ಯಾಸವನ್ನಾಗಿ ಮಾಡಿಕೊಂಡು ಬಂದವರಾಗಿದ್ದಾರೆ. ಬಸಪ್ಪನವರ ತಂದೆ ಬಾಳಪ್ಪನವರು ಕರ್ನಾಟಕ, ಆಂಧ್ರ ಈ ಎರಡೂ ರಾಜ್ಯಗಳಲ್ಲಿ ನಂದಿಧ್ವಜ ಕುಣಿತದಿಂದ ಪ್ರಸಿದ್ಧರಾಗಿದ್ದರು. ಇವರ ಮಗ ಹೆಚ್. ಬಸಪ್ಪನವರೂ ತಂದೆಯ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಿರುವುದಲ್ಲದೆ ಈ ಕಲೆಯಲ್ಲಿ ನಾವೀನ್ಯತೆಯನ್ನು ತರುತ್ತಿರುವುದು ಇವರ ವಿಶೇಷವಾಗಿದೆ.

ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿಯೇ ವಿವಾಹವಾದ ಬಸಪ್ಪನವರಿಗೆ ಸರಿಜೋಡಿ ಶ್ರೀಮತಿ ಗೌರಮ್ಮ. ಈಕೆಯೂ ತಂಬೂರಿ, ತತ್ವಪದ ಕಲಾವಿದೆ. ಏಳು ಗಂಡು, ಮೂರು ಹೆಣ್ಣು ಒಟ್ಟು ಹತ್ತು ಮಕ್ಕಳನ್ನು ಹೆತ್ತ ಈ ದಂಪತಿಗಳ ಕುಟುಂಬ ಬಹು ದೊಡ್ಡದು. ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಹೀಗೆ ಒಟ್ಟು ೪೫ ಕುಟುಂಬದ ಸದಸ್ಯರನ್ನು ಹೊಂದಿರುವ ಬಸಪ್ಪನವರ ಕುಟುಂಬ ಒಂದು ಅರ್ಥದಲ್ಲಿ ಆಶ್ರಮ ಶಾಲೆಯನ್ನು ಹೋಲುವಂತಿದೆ.

ಬಸಪ್ಪನವರಿಗೆ ಇರುವ ಏಳು ಜನ ಗಂಡುಮಕ್ಕಳೆಲ್ಲರೂ ಕಲಾವಿದರೇ. ನಾಗರಾಜು, ಬಾಳಪ್ಪ, ಶಶಿಧರ, ಶಾಂತಮೂರ್ತಿ, ಮಹಾಸ್ವಾಮಿ, ಹೇಮಂತಕುಮಾರ್, ಅರುಣಕುಮಾರ್ ಈ ಏಳು ಜನದ ಕಲಾತಂಡವು ಕರ್ನಾಟಕದ ಕಲಾಶ್ರೀಮಂತಿಕೆಯ ಸೌಹಾರ್ದತೆ, ಸಮನ್ವಯತೆ, ಸಹಬಾಳ್ವೆಗೆ ಮಾದರಿಯಾಗಿದೆ. ಅಣ್ಣ, ತಮ್ಮ ಇವರುಗಳ ಮಕ್ಕಳು, ಮರಿಮಕ್ಕಳೂ ಇಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಇವರ ಮಕ್ಕಳಾದ ವಾಗೇಶ, ಬಸವರಾಜು ಇವರುಗಳೂ ನಂದಿಧ್ವಜ ಕುಣಿಸುವ ಕಲಾವಿದರಾಗಿ ನಾಲ್ಕು ಮತ್ತು ಐದನೇ ತಲೆಮಾರಿಗೆ ಈ ಕಲಾ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ.

ಬಸಪ್ಪನವರ ಈ ಕಲಾತಂಡ ಆಂಧ್ರದ ಶ್ರೀಶೈಲ, ಮಹಾನಂದಿ, ಹೈದರಾಬಾದ್, ಮಹಾರಾಷ್ಟ್ರದ ಸೊಲ್ಲಾಪುರ, ತಮಿಳುನಾಡು ಈ ಮೊದಲಾದ ಹೊರನಾಡಲ್ಲೂ ಕಲಾ ಪ್ರದರ್ಶನದ ನೀಡಿರುವುದು ವಿಶೇಷವಾಗಿದೆ. ಹಾಗೆಯೇ ಕರ್ನಾಟಕದ ಎಲ್ಲ ಧಾರ್ಮಿಕ ಜಾತ್ರೆ, ಉತ್ಸವಗಳಲ್ಲಿಯೂ ಭಾಗಿಯಾಗಿದ್ದಾರೆ. ಸಿದ್ಧಗಂಗೆ, ಯಡೆಯೂರು, ಆದಿಚುಂಚನಗಿರಿ, ತೀರ್ಥಹಳ್ಳಿ, ಶಿವಮೊಗ್ಗ, ಗದಗ, ಬಾದಾಮಿ, ಬನಶಂಕರಿ, ಚಿತ್ರದುರ್ಗ, ಸಿರಿಗೆರೆ ಈ ಮೊದಲಾದ ಪ್ರಮುಖ ಧಾರ್ಮಿಕ ಜಾತ್ರೆ–ಉತ್ಸವಗಳಲ್ಲಿ ಖಾಯಂ ಆಹ್ವಾನಿತ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ.

೮೦ ವರ್ಷ ಕಲೆಯಲ್ಲಿಯೇ ಕಳೆದರೂ ಕರ್ನಾಟಕ ಸರ್ಕಾರದಿಂದ ಮಾಸಾಶನ ಬಿಟ್ಟು ಉಳಿದ ಯಾವುದೇ ಪ್ರಯೋಜನ ಆಗಿಲ್ಲದಿರುವುದಕ್ಕೆ ಬೇಸರ ವ್ಯಕ್ತಪಡಿಸುವ ಬಸಪ್ಪನವರಿಗೆ ತಮ್ಮ ತಾತನ ಕಾಲದ ಕಲೆಯನ್ನು ವಂಶಪಾರಂಪರ್ಯವಾಗಿ ಮುಂದುವರಿಸಿಕೊಂಡು ಬರುತ್ತಿರುವುದರ ಬಗೆಗೆ ತೃಪ್ತಿಯಿದೆ.

**ಎಚ್. ಬಸಪ್ಪ,**
**ನಂದಿ ಕೋಲು ಕಲಾವಿದರು, ಬಸಾಪುರ ಗ್ರಾಮ, ದಾವಣಗೆರೆ ತಾಲೂಕು.**

## ತಂಬೂರಿ ಉಮಾನಾಯಕ

ತಂಬೂರಿ ಹಿಡಿದು ಹಾಡುವುದಕ್ಕೆ ಆರಂಭಿಸಿದರೆ ತಮ್ಮ ಜನಾಂಗಿಕ ಹಿನ್ನೆಲೆ ಲಂಬಾಣಿ ಎನ್ನುವುದನ್ನೇ ಮರೆಸುವ ಉಮಾ ನಾಯಕರು ಪ್ರಧಾನವಾಗಿ ತತ್ವಪದಕಾರರು. ತಂಬೂರಿ ಹಿಡಿದು ಅದರ ಮೇಲೆ ನೂರಾರು ತತ್ವಪದ, ಕೀರ್ತನೆ, ಶಿವಭಜನೆ, ಪಂಡರಾಪುರಿ ಭಜನೆ, ಕರಿಸಿದ್ಧೇಶ್ವರ ಭಜನೆ ಈ ಮೊದಲಾದ ಹಲವಾರು ತತ್ವಪದಗಳನ್ನು ಭಜನೆಯಾಗಿ ಮಾರ್ಪಡಿಸಿಕೊಂಡು ಹಾಡುವುದು ಉಮಾನಾಯಕರ ವಿಶೇಷತೆ.

ರೈತಾಪಿ ಬದುಕು, ಮಕ್ಕಳೂ ಕೃಷಿಕರೇ. ಆದರೂ ಉಮಾನಾಯಕರು ಪ್ರಧಾನವಾಗಿ ಸಂಗೀತ ಕಲಾವಿದರು. ಹಾಡುವುದನ್ನು ಗೀಳಾಗಿಸಿಕೊಂಡು ಕೃಷಿ ಬದುಕನ್ನು ಕೈಬಿಟ್ಟಿದ್ದಾರೆಂದು ಜನರು ಈಗಲೂ ಹೇಳುತ್ತಿದ್ದಾರೆ.

ತಂಬೂರಿ ಮೇಲೆ ಪದ ಹಾಡುವುದರ ಜೊತೆಗೆ ಕೋಲು ಪದ ಹಾಡುವುದು, ಭಾಗವಂತಿಕೆ ಮಾಡುವುದೂ ಇದೆ. ದಾವಣಗೆರೆ, ಹರಪನಹಳ್ಳಿ, ಚನ್ನಗಿರಿ ಈ ಭಾಗಗಳ ಹಲವು ಯುವಕ ಸಂಘಗಳಲ್ಲಿ ಸಂಗೀತ ಕಲಾವಿದರಾಗಿ ಮಾರ್ಗದರ್ಶನ ಮಾಡಿರುವುದು ಇವರ ವಿಶೇಷವಾಗಿದೆ.

ಭದ್ರಾವತಿಯ ಆಕಾಶವಾಣಿಯಲ್ಲಿ ಕಳೆದ ೪೦ ವರ್ಷಗಳಿಂದ ಹಾಡುತ್ತಾ ಬರುತ್ತಿರುವ ಉಮಾನಾಯಕ್ ಕಳೆದ ೧೦ ವರ್ಷಗಳಿಂದ ಚಿತ್ರದುರ್ಗದ ಆಕಾಶವಾಣಿಯಿಂದ ಕಾರ್ಯಕ್ರಮ ನೀಡುತ್ತಿರುವುದು ವಿಶೇಷವಾಗಿದೆ.

ತಂಬೂರಿ ಮೇಲೆ ಕರಿಬಸವೇಶ್ವರರ ಕಥೆ, ಬಿದಿರಮ್ಮನ ಕಥೆ ಇವುಗಳ ಜೊತೆಗೆ ಲಂಬಾಣಿ ಜನಾಂಗಿಕ, ಸಾಂಸ್ಕೃತಿಕ ವೀರರ ಬಗೆಗೂ ಕಥನಗೀತೆಗಳನ್ನು ಹೇಳುವುದು ಇವರ ವಿಶೇಷವಾಗಿದೆ. ಯಕ್ಷಗಾನದಲ್ಲಿ ನಿಂತು ಹಿಮ್ಮೇಳ ಕಲಾವಿದರಾಗಿಯೂ ಕಾರ್ಯ ನೀಡುವುದು ಇವರ ಮತ್ತೊಂದು ವಿಶೇಷವಾಗಿದೆ.

ಚಿತ್ರದುರ್ಗ, ದಾವಣಗೆರೆ, ಹರಿಹರ, ಶಿವಮೊಗ್ಗ ಈ ಮೊದಲಾದ ಸ್ಥಳಗಳಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ನಡೆದರೂ ಉತ್ಸಾಹದಿಂದ ಹಾಡುವ ತಂಬೂರಿ ಉಮಾನಾಯಕ ಸಂಭಾವನೆ, ಮತ್ತಿತರ ಆಮಿಷಗಳಿಂದ ದೂರ ಉಳಿದು ಅಪ್ಪಟ ಕಲಾಸೇವೆಯಲ್ಲಿ ನಿರಂತರವಾಗಿರುವುದು ಈತನ ವಿಶೇಷ.

ಉಮಾನಾಯಕರು ತಮ್ಮ ಮುಗ್ಧ ಹಾಡುಗಾರಿಕೆ, ನಡಾವಳಿಯಿಂದಾಗಿ ಅಪಾರ ಜನಮನ್ನಣೆ ಪಡೆದಿದ್ದಾರೆ. ಚಿತ್ರದುರ್ಗದ ಬೃಹನ್ಮಠದಿಂದ ಇವರನ್ನು ಗೌರವಿಸಲಾಗಿದೆ. ತರಳಬಾಳು ಮಠದಿಂದಲೂ ಇವರ ಸಂಗೀತ ಕಾರ್ಯಕ್ರಮ ನಡೆದಿದೆ. ಜೊತೆಗೆ ಹರಪನಹಳ್ಳಿ, ಸಂತೆಬೆನ್ನೂರುಗಳಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಇವರನ್ನು ಗೌರವಿಸಲಾಗಿದೆ. ಸುವರ್ಣ ಕರ್ನಾಟಕ ರಾಜ್ಯೋತ್ಸವ ಜಾಥಾದ ಕಾರ್ಯಕ್ರಮದಲ್ಲಿ ಕಲಾಸಂಪನ್ನರಾಗಿ, ಜಾಥಾದ ಮುಖಂಡರಾಗಿ ಜಾಥಾ ಕಾರ್ಯವನ್ನು ದಾವಣಗೆರೆ ಜಿಲ್ಲೆಯಾದ್ಯಂತ ಮೆರೆಸಿದವರು.

ಸರ್ಕಾರದ ಸೌಲಭ್ಯ ಬೇಕೆಂದು ಕೇಳುವ ಆತ ಮನೆಯವರಿಗಿರುವ ಕಾಳಜಿ ಕಲಾವಿದರ ನಿರ್ಲಿಪ್ತತೆಯ ಬಗ್ಗೆ ಕೊಂಚ ಬೇಸರವೂ ಇದೆ.

ಒಟ್ಟಾರೆ ತಂಬೂರಿ ಕಲಾ ಪ್ರಪಂಚದಲ್ಲಿ ಅನನ್ಯ ಸಾಧಕರ, ಸಂಘಟಕರೂ ಆಗಿರುವ ತಂಬೂರಿ ಉಮಾನಾಯಕ ಅವರ ಕಲಾಬದುಕನ್ನು, ದಾವಣಗೆರೆ ಜಿಲ್ಲೆಯ ಜನತೆ ಗೌರವಿಸುತ್ತದೆ. ಅದಕ್ಕೆ ಕಲಾವಿದನಿಗೆ ಹುಮ್ಮಸ್ಸು.

**ತಂಬೂರಿ ಉಮಾನಾಯಕ,**
**ಚನ್ನಸಮುದ್ರ, ನೇರ್ಲಿಗೆ ಅಂಚೆ, ದಾವಣಗೆರೆ ತಾಲೂಕು.**

## ಡೊಳ್ಳಿನ ರಾಮಪ್ಪ

ಡೊಳ್ಳು ಕಲೆಯನ್ನು ಒಂದು ಪರಂಪರೆಯ ಮೂಲಕ ಪ್ರದರ್ಶಿಸುತ್ತಾ ಬಂದಿರುವ ಕಲಾಕುಟುಂಬ ದಿ॥ ರಾಮಪ್ಪನವರದು. ದಾವಣಗೆರೆ ತಾಲೂಕಿನ ಮತ್ತಿಗ್ರಾಮದ ಈ ಕಲಾವಿದ ಹಾಲುಮತ ಜನಾಂಗಕ್ಕೆ ಸೇರಿದವರು. ಸ್ವಾತಂತ್ರ್ಯ ಹೋರಾಟಗಾರರಾಗಿ ದೇಶೀ ಚಳುವಳಿಯಲ್ಲಿ ಭಾಗವಹಿಸಿದ ಹಿರಿಮೆ ಇವರದು. ರಾಮಪ್ಪನವರಿಗೆ ಐದು ಜನ ಮಕ್ಕಳು. ಇವರಲ್ಲಿ ಮಕ್ಕಳಾದ ಜಯಪ್ಪ, ಹನುಮಂತ, ಬಸವರಾಜ್ ಉತ್ತಮ ಡೊಳ್ಳು ಕಲಾವಿದರಾಗಿ ಕಲಾ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಡೊಳ್ಳು ಕುರುಬರ ಧಾರ್ಮಿಕ ಆಚರಣೆಯ ಪ್ರಮುಖ ಕಲೆ. ಬೀರೇದೇವರ ಒಕ್ಕಲುಗಳಲ್ಲಿ ದೇವರ ವಾರವಾದ ಭಾನುವಾರ ಅಥವಾ ಸೋಮವಾರಗಳಂದು ತಪ್ಪದೆ ಡೊಳ್ಳು ಬಾರಿಸುತ್ತಾ ದೇವರ ಪೂಜೆ ನೆರವೇರಿಸುವುದು ಈ ಕಲೆಯ ಪ್ರಮುಖ ಉದ್ದೇಶ. ಹಸುವಿನ ಚರ್ಮವನ್ನು ಹದಗೊಳಿಸಿ ಡೊಳ್ಳನ್ನು ತಯಾರಿಸುತ್ತಾರೆ. ಇದನ್ನು ಡೊಳ್ಳು ಕಟ್ಟುವುದು ಎಂದೂ ಕರೆಯಲಾಗುವುದು. ಡೊಳ್ಳು ಕಲೆ ಉತ್ತರ ಕರ್ನಾಟಕದಲ್ಲಿ ಇಂದಿಗೂ ವ್ಯಾಪಕವಾಗಿದೆ. ದಕ್ಷಿಣ ಕರ್ನಾಟಕದ ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಈ ಜಿಲ್ಲೆಗಳಲ್ಲಿ ವಿರಳವಾಗಿ ಕಂಡುಬರುತ್ತಿದೆ. ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕುರುಬರು ಮಾತ್ರ ಡೊಳ್ಳು ಬಾರಿಸುವ ಕಲಾಪರಂಪರೆಯನ್ನು ಹೊಂದಿದ್ದಾರೆ. ಶಿವಮೊಗ್ಗ ಹಾಗೂ ಬೆಂಗಳೂರು ಈ ಜಿಲ್ಲೆಗಳಲ್ಲಿ ಇತರೆ ವರ್ಗದವರೂ ಡೊಳ್ಳು ಬಾರಿಸುತ್ತಾರೆ.

ಡೊಳ್ಳಿನ ರಾಮಪ್ಪ ತನ್ನ ತಾತ ಬೀರಣ್ಣನವರಿಂದ ಡೊಳ್ಳು ಕಲೆಯನ್ನು ಕಲಿತವರು. ಗದ್ದೆಯ ಕೆಲಸದ ನಂತರ ಸಂಜೆ ಊರೊಳಗಿನ ಹನುಮಂತದೇವರ ಗುಡಿಯ ಬಳಿ ಯುವಕರನ್ನು ಸೇರಿಸಿ ಅರ್ಧರಾತ್ರಿಯ ತನಕ ಡೊಳ್ಳು ಬಾರಿಸವುದು, ಅದಕ್ಕೆ ಹೆಜ್ಜೆ

ಹಾಕಿ ಕುಣಿಯುವುದನ್ನು ಮಾಡುತ್ತಾ, ಮುಂದೆ ರಾಮಪ್ಪನವರು ತಂದೆಯ ಜೊತೆಗೂ ಬೇರೆ ಬೇರೆ ಕಡೆ ಕಲಾಪ್ರದರ್ಶನಕ್ಕಾಗಿ ಹೋಗಿ ಬಂದರು. ಶಿವಮೊಗ್ಗ, ಹಡಗಲಿಯ ಮೈಲಾರಲಿಂಗಪ್ಪನ ಜಾತ್ರೆ ಇವುಗಳಲ್ಲಿ ಡೊಳ್ಳಿನ ಅಲಂಕಾರ, ಡೊಳ್ಳು ಕಲಾವಿದರ ವೇಷಭೂಷಣ ಇವುಗಳನ್ನು ನೋಡಿ ತಾವೂ ಅವರಂತೆ ವೇಷಭೂಷಣ ಇವುಗಳನ್ನು ನೋಡಿ ತಾವೂ ಅವರಂತೆ ವೇಷಭೂಷಣದಲ್ಲಿ ಮಾರ್ಪಾಡು ಮಾಡಿಕೊಳ್ಳಬೇಕೆಂದು ತೀರ್ಮಾನಿಸಿ ಕರಿಯ ಕಂಬಳಿ ಹೊದಿಕೆ, ತಲೆಗೆ ಕಂಬಿಪೇಟ, ಬೇವಿನ ಸೊಪ್ಪಿನ ಗುಚ್ಛ, ಕೊರಳಿಗೆ ಮಣಿಹಾರ, ಕವಡೆ ಇವುಗಳನ್ನು ಆಭರಣಗಳಾಗಿ ಹಾಕತೊಡಗಿದರು. ಮುಂದೆ ಪ್ರದರ್ಶನಕ್ಕೆ ಬೇರೆ ಬೇರೆ ಕಡೆಗಳಿಂದ ಆಹ್ವಾನ ಬಂದಾಗ ತಾವು ಕಲಿಸಿದ ಇಪ್ಪತ್ತು ಯುವಕರ ತಂಡದೊಂದಿಗೆ ತಾವು ಮುಖಂಡರಾಗಿ ತಾಳ ಹಾಕುತ್ತಾ ಬೀರೇದೇವರ ಪದ ಹೇಳುತ್ತಾ ಭಾಗವಹಿಸುತ್ತಾ ಬಂದರು. ಡೊಳ್ಳುಕಲೆ ಒಂದು ಪ್ರದರ್ಶನ ಕಲೆಯಾಗಿದ್ದು ಇದರಲ್ಲಿ ಹಾಡುಗಾರಿಕೆಯೂ ಸೇರಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಹಾಡುವುದು ಇಲ್ಲವೇ ಇಲ್ಲ, ಕುಣಿಯುವುದು ಮಾತ್ರ. ಆದರೆ ರಾಮಪ್ಪ ಡೊಳ್ಳಾಸುರ ಪುರಾಣ, ಮಣಿಕಾಸುರ ಪುರಾಣ, ಬೀರಲಿಂಗೇಶ್ವರ ಪುರಾಣ ಈ ಜನಪದ ಕಾವ್ಯಗಳನ್ನು ಡೊಳ್ಳು ಕಲೆಯ ಜೊತೆಗೆ ಹಾಡುತ್ತಿದ್ದದ್ದು ವಿಶೇಷ. ಇದೇ ದೇವರನ್ನು ಕೊಂಡಾಡುವುದು ಎಂದು ಅವರು ಕರೆಯುತ್ತಿದ್ದರು.

ಶಿವಮೊಗ್ಗ, ಧಾರವಾಡ, ಬನವಾಸಿ, ಬೆಂಗಳೂರು, ಕಾಗಿನೆಲೆ ಈ ಮೊದಲಾದ ಸ್ಥಳಗಳಲ್ಲಿ ನಡೆದ ಸಾಂಸ್ಕೃತಿಕ ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ. ರಾಮಪ್ಪ ದಿವಂಗತರಾದರೂ ಅವರ ಮಗ ಜಯಪ್ಪ ಯುವಕರಾಗಿದ್ದು ಡೊಳ್ಳು ಕಲೆಯನ್ನು ಸಮರ್ಥವಾಗಿ ಸಂಘಟಿಸುತ್ತಾ ಸರ್ಕಾರದ, ಖಾಸಗಿ ಉತ್ಸವ ಸಭೆ ಸಮಾರಂಭಗಳಲ್ಲಿ ಡೊಳ್ಳು ಕಲೆಯನ್ನು ಸಮರ್ಥವಾಗಿ ಸಂಘಟಿಸುತ್ತಾ ಸರ್ಕಾರದ, ಖಾಸಗಿ ಉತ್ಸವ ಸಭೆ ಸಮಾರಂಭಗಳಲ್ಲಿ ಡೊಳ್ಳು ಕಲೆಯನ್ನು ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಸರ್ಕಾರದ ಅನುದಾನ ವಾದ್ಯ ಪರಿಕರ ಕೊಳ್ಳುವುದಕ್ಕೆ ಅಗತ್ಯವಾಗಿ ಬೇಕೆಂಬುದು ಇವರ ಕೋರಿಕೆ.

**ರಾಮಣ್ಣ,**
**ಡೊಳ್ಳು ಕಲಾ ತಂಡ, ಮತ್ತಿ ಗ್ರಾಮ, ದಾವಣಗೆರೆ ತಾಲೂಕು.**

# ವೀರಗಾಸೆ ಮಲ್ಲಪ್ಪ

ವೀರಗಾಸೆ ಬಯಲುಸೀಮೆಯ ಪ್ರಸಿದ್ಧ ಕಲೆ. ಕೈಯಲ್ಲಿ ಖಡ್ಗ, ಎದೆಯಲ್ಲಿ ಶಿವಲಿಂಗ, ಕೊರಳಲ್ಲಿ ರುದ್ರಾಕ್ಷಿ, ಸೊಂಟದಲ್ಲಿ ರುದ್ರನ ರೂಪ ಹೋಲುವ ತಲೆಬುರುಡೆಯ ಆಕೃತಿಯ ಕಂಚಿನ ವಿಗ್ರಹಗಳು, ಕಾಲಲ್ಲಿ ಜಂಗು, ಕೆಳಗೆ ಗೆಜ್ಜೆ, ತಲೆಯ ಮೇಲೆ ಬಿಳಿಯ ಶುಭ್ರವಾದ ಇಳಿಬಿದ್ದ ಕೂದಲಿನ ಟೋಫನ್, ಹಣೆಯಲ್ಲಿ ವಿಭೂತಿ ಕಟ್ಟು, ನೋಡಿದ ಕೂಡಲೇ ಭಯ ಮೂಡಿಸುವ ವಿಶಿಷ್ಟ ವೇಷಭೂಷಣ ವೀರಗಾಸೆ ಕಲಾವಿದರದು.

ಚಮ್ಮೇಳನ, ಡೋಲುವಾದ್ಯಗಳೊಂದಿಗೆ ಶಿವನ ಲೀಲಾವಳಿಗಳನ್ನು ಸಾರುತ್ತಾ ದಕ್ಷಬ್ರಹ್ಮನ ಕತೆಯನ್ನು ವೀರಗಾಸೆಯ ಕುಣಿತದ ಉದ್ದಕ್ಕೂ ಹೇಳಿಕೊಂಡು ಸಾಗುವುದು ಈ ಕಲೆಯ ಸಂಪ್ರದಾಯ.

ವೀರಗಾಸೆ ಕಲೆಯನ್ನು ಪರಂಪರಾಗತವಾಗಿ ಪ್ರದರ್ಶಿಸುತ್ತಾ ಕಲೆಯ ಆವಿಷ್ಕಾರದೊಂದಿಗೆ ಸಮರ್ಥವಾಗಿ ಪ್ರದರ್ಶಿಸುತ್ತಾ ಕಲೆಯ ಆವಿಷ್ಕಾರದೊಂದಿಗೆ ಸಮರ್ಥವಾಗಿ ಪ್ರದರ್ಶಿಸುತ್ತಾ ಬರುತ್ತಿರುವ ಕಲಾ ಕುಟುಂಬ ಶ್ರೀ ಎಚ್. ಟಿ. ಮಲ್ಲಪ್ಪನವರದು. ಸುಮಾರು ೭೦ ವರ್ಷ ವಯಸ್ಸಿನ ಮಲ್ಲಪ್ಪನವರು ತಮ್ಮ ತಾತನವರ ಕಾಲದಿಂದಲೂ ವೀರಗಾಸೆ ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಮೊದಲು ಕಾರ್ತೀಕ ಸೋಮವಾರ, ಶ್ರಾವಣ ಸೋಮವಾರ ಈಶ್ವರನ ಗುಡಿಯ ಪ್ರಾಂಗಣದಲ್ಲಿ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಆಹ್ವಾನದ ಮೇರೆಗೆ ಸಿರಿಗೆರೆ, ಚಿತ್ರದುರ್ಗದ ಮುರುಘಾಮಠಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಆದರೆ ಇದೀಗ ಈ ಕಲೆಯನ್ನು ಚಿತ್ರದುರ್ಗ, ಶಿವಮೊಗ್ಗ, ಬೆಂಗಳೂರು, ಧಾರವಾಡ, ಬೆಳಗಾಂ ಕಡೆಯೂ ಆಹ್ವಾನಿತರಾಗಿ ಹೋಗಿ ಕಲಾಪ್ರದರ್ಶನ ನೀಡಿ ಬರುತ್ತಿದ್ದಾರೆ.

ಶ್ರೀ ಮಲ್ಲಪ್ಪನವರು ತಮ್ಮ ೨೫ನೇ ವಯಸ್ಸಿನಲ್ಲಿ ಶ್ರೀಮತಿ ಮಾದಮ್ಮ ಅವರೊಂದಿಗೆ ವಿವಾಹವಾದರು. ಇವರಿಗೆ ಆರು ಜನ ಮಕ್ಕಳು. ಎಂ. ಕಲ್ಲೇಶಪ್ಪ, ಎಂ. ಹಾಲೇಶಪ್ಪ, ಎಂ. ಲಿಂಗಮೂರ್ತಿ ಇವರ ಗಂಡುಮಕ್ಕಳು. ಮೂವರು ಹೆಣ್ಣುಮಕ್ಕಳೂ ಇದ್ದಾರೆ. ಮಲ್ಲಪ್ಪನವರು ಈ ಕಲೆಯ ವಿಕಾಸಕ್ಕಾಗಿ ಶ್ರಮಿಸುತ್ತಾ ತಮ್ಮ ಗ್ರಾಮದ ಸಮೀಪದ ಕನ್ನಡ ಶಾಲೆಗಳಲ್ಲಿ ವೀರಗಾಸೆ ಕಲೆಯನ್ನು ಶಾಸ್ತ್ರೋಕ್ತವಾಗಿ ಕಲಿಸುತ್ತಿರುವುದು ವಿಶೇಷ. ಶಾಲೆಯ ಪ್ರತಿಭಾ ಕಾರಂಜಿ ಮೊದಲಾದ ಸಾಂಸ್ಕೃತಿಕ ಸಮಾರಂಭಗಳಿಗೆ ವೀರಗಾಸೆ ಕಲೆಯನ್ನು ಪ್ರದರ್ಶಿಸುತ್ತಾ ಕಲೆಯ ಉಳಿವಿಗಾಗಿ ತೋರಿರುವ ಗೌರವ, ಸಾಹಸ ಅಭಿನಂದನಾರ್ಹವಾದುದು.

ಮಲ್ಲಪ್ಪನವರ ಮೂವರು ಗಂಡುಮಕ್ಕಳೂ ಒಳ್ಳೆಯ ವೀರಗಾಸೆ ಕಲಾವಿದರು. ಎಂ. ಕಲ್ಲೇಶಪ್ಪ ಉತ್ತಮವಾದ ಖಡ್ಗ ವಾಚಕರಾದರೆ ಕೊನೆಯ ಮಗ ಎಂ. ಲಿಂಗಮೂರ್ತಿ ಚಮ್ಮೇಳ ಡೋಲಕ್ ಕಲಾವಿದರು. ಆಕರ್ಷಕವಾದ ನೃತ್ಯ ಕಲಾವಿದರೂ ಹೌದು. ತಂದೆ, ಮೂವರು ಮಕ್ಕಳು ಊರಿನ ಯುವಕ ರೈತರೊಡಗೂಡಿ ರಾತ್ರಿಯಿಡೀ ವೀರಗಾಸೆ ಕುಣಿತ ನಡೆಸುವುದು ಈ ಇಳಿವಯಸ್ಸಿನ ರೋಚಕ ಪ್ರಸಂಗವಾಗಿದೆ.

ಚಿತ್ರದುರ್ಗದ ಬೃಹನ್ಮಠದಿಂದ ಸಿರಿಗೆರೆಯ ತರಳಬಾಳು ಮಠದಿಂದಲೂ ವಿಶೇಷ ಗೌರವ, ಪುರಸ್ಕಾರ ಪಡೆದಿರುವ ಮಲ್ಲಪ್ಪನವರ ವೀರಗಾಸೆ ನೃತ್ಯ ಪ್ರಸಂಗ ಚಿತ್ರದುರ್ಗದ ಆಕಾಶವಾಣಿಯಿಂದಲೂ ಆ ಮುಂಚೆ ಭದ್ರಾವತಿಯ ಆಕಾಶವಾಣಿಯಿಂದಲೂ ಪ್ರಸಾರವಾಗಿದೆ.

ಸರ್ಕಾರದಿಂದ ಯಾವುದೇ ಸೌಲಭ್ಯವಿಲ್ಲ. ವಾದ್ಯ ಜೋಪಾನ, ರಿಪೇರಿಯೂ ಕಷ್ಟ ಎನ್ನುವ ಮಲ್ಲಪ್ಪ ಆರ್ಥಿಕವಾಗಿ ಕಷ್ಟದಲ್ಲಿದ್ದಾರೆ. ಇಂಥ ಹಿರಿಯ, ಪ್ರತಿಭಾವಂತ ಕಲಾ ಕುಟುಂಬವನ್ನು ಉಳಿಸಿ ಬೆಳೆಸಬೇಕಾದುದು ನಾಗರಿಕರ ಕರ್ತವ್ಯವೂ ಹೌದು.

**ಎಚ್. ಟಿ. ಮಲ್ಲಪ್ಪ,**
**ವೀರಗಾಸೆ ತಂಡ, ಹಿರೇಮಳಲಿ ಗ್ರಾಮ, ಚನ್ನಗಿರಿ ತಾಲೂಕು.**

## ಖಡ್ಗದ ಸಿದ್ಧಪ್ಪ

ಸಿದ್ಧಪ್ಪನವರು ಹೊನ್ನಾಳಿ ತಾಲೂಕಿನ ಗುಡ್ಡದ ಬೈರನಹಳ್ಳಿಯವರು. ವೀರಗಾಸೆ ಕಲೆಯನ್ನು ವಂಶಪಾರಂಪರ್ಯವಾಗಿ ನಡೆಸುತ್ತಾ, ಪ್ರಸರಿಸುತ್ತಾ, ಯುವಕ ಸಂಘಗಳ ಮೂಲಕ ಕಿರಿಯರಿಗೆ ಕಲಿಸುತ್ತಾ ಬರುತ್ತಿದ್ದಾರೆ.

ವೀರಶೈವ ಜನಾಂಗಕ್ಕೆ ಸೇರಿದ ಸಿದ್ಧಪ್ಪ ಅವರಿಗೆ ೭೦ ವರ್ಷ. ಆದರೂ ವೀರಗಾಸೆಯ ಹಿಡಿತ, ನೃತ್ಯ, ವೇಷ ಕಟ್ಟುವುದು, ಖಡ್ಗದ ಪದ ಹೇಳುವುದು ಇನ್ನೂ ನಿಂತಿಲ್ಲ. ತಮ್ಮ ಬೊಚ್ಚುಬಾಯಲ್ಲೂ ಶಿವಪುರಾಣವನ್ನು ಪಟಪಟನೆ ಹೇಳಿಬಿಡುವ ಈ ಕಲಾವಿದ ರಾಜ್ಯಾದ್ಯಂತ ತಿರುಗಾಟದ ಮೂಲಕ ವೀರಗಾಸೆ ಕಲೆಗೆ ಹೊಸತನ, ವೇಷಭೂಷಣದ ಆಕರ್ಷಣೆ, ಶಿವನ ರುದ್ರವೇಷ ಧರಿಸುವುದು, ಕುಣಿತ, ಚಮ್ಮೇಳ, ಢೋಲಕ್ ಇವುಗಳಲ್ಲಿ ಅಪಾರವಾಗಿ ಪಳಗಿದ್ದಾರೆ.

ಸಿದ್ಧಪ್ಪನವರಿಗೆ ನಾಲ್ಕು ಜನ ಮಕ್ಕಳು. ಇವರಲ್ಲಿ ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಗಂಡುಮಕ್ಕಳಲ್ಲಿ ಹಿರಿಯ ಮಗ ರಾಜಪ್ಪ ತಂದೆಯ ಕಲಾವೈಖರಿಯನ್ನು ಸಮರ್ಥವಾಗಿ ಮೈಗೂಡಿಸಿಕೊಂಡಿದ್ದಾರೆ. ಇನ್ನೊಬ್ಬ ಮಗನೂ ಉತ್ತಮ ಚಮ್ಮೇಳ, ಢೋಲಕ್ ಕಲಾವಿದರು. ಜೊತೆಗೆ ಸಿದ್ಧಪ್ಪನವರ ಮೊಮ್ಮಕ್ಕಳೂ ವೀರಗಾಸೆ ಕಲೆಯನ್ನು ಅಪಾರವಾಗಿ ಪ್ರೀತಿಸುತ್ತಾ ತಮ್ಮ ವಿದ್ಯಾಭ್ಯಾಸದ ಜೊತೆ ಜೊತೆಗೆ ಶಾಲಾ ಕಾಲೇಜುಗಳಲ್ಲಿ ಇತರೆ ವಿದ್ಯಾರ್ಥಿಗಳಿಗೆ ಕಲಿಸುತ್ತಿರುವುದು ಕಲಾಬಳ್ಳಿಯ ವಿಸ್ತೃತ ರೂಪವಾಗಿದೆ.

ವೀರಗಾಸೆಗೆ ಬೇಕಾದ ಪರಿಕರಗಳಾದ ಚಮ್ಮೇಳ ಹಾಗೂ ಉಡುಗೆ-ತೊಡುಗೆಯ ಬಗೆಗೂ ಪರಿಶ್ರಮ ಹೊಂದಿರುವ ಸಿದ್ಧಪ್ಪನವರು ದಾವಣಗೆರೆ, ತರೀಕೆರೆ, ಚಿತ್ರದುರ್ಗ,

ಹಾವೇರಿ ಭಾಗಗಳ ಕಲಾವಿದರಿಗೆ ಚಮ್ಮೇಳ ವಾದ್ಯ ತಯಾರಿಸಿಕೊಟ್ಟಿದ್ದಾರೆ. ವೀರಶೈವ ಸಿದ್ಧಾಂತ, ಧರ್ಮನಿಷ್ಠೆ, ಅಚಲವಾದ ಶಿವಭಕ್ತಿ ಹೊಂದಿರುವ ಸಿದ್ಧಪ್ಪನವರು ಪ್ರಮುಖ ಧಾರ್ಮಿಕ ಸಮಾರಂಭಗಳಲ್ಲಿ ಚಮ್ಮೇಳ ನುಡಿಸುವುದು ವಿಶೇಷವಾಗಿದೆ.

ಚಿತ್ರದುರ್ಗದ ಮುರುಘಾಮಠದ ಸಿರಿಗೆರೆಯ ತರಳಬಾಳು ಮಠ, ಹೊಸದುರ್ಗ ತಾಲೂಕಿನ ಸಾಣೆಹಳ್ಳಿ ಮಠಗಳಿಂದ ಕಲಾವಿದ ಪುರಸ್ಕಾರ ಪಡೆದಿದ್ದಾರೆ.

ದಾವಣಗೆರೆಯ ಜಿಲ್ಲಾ ಉತ್ಸವ, ಚಲನಚಿತ್ರ ಉತ್ಸವ, ಡಾ. ರಾಜಕುಮಾರ್ ಗೌರವ, ಸನ್ಮಾನ, ಉತ್ಸವಗಳಲ್ಲಿ ಚಿತ್ರದುರ್ಗದ ದುರ್ಗೋತ್ಸವ ಸಮಾರಂಭಗಳಿಂದ ಗೌರವ ಪುರಸ್ಕಾರ ಪಡೆದಿದ್ದಾರೆ. ಇವರ ಹಿರಿಯ ಮಗ ರಾಜಪ್ಪ, ತಂದೆಯ ಕಲಾ ಬದುಕಿಗೆ ಉತ್ತೇಜಕರಾಗಿದ್ದು ಇಪ್ಪತ್ತೈದು ಕಲಾವಿದರ ತಂಡವನ್ನು ತಮ್ಮ ಹುಟ್ಟೂರು ಗುಡ್ಡದ ಭೈರನಹಳ್ಳಿಯಲ್ಲಿ ಕಟ್ಟಿ ಆ ಮೂಲಕ ಭದ್ರಾವತಿ ಆಕಾಶವಾಣಿ, ಚಿತ್ರದುರ್ಗದ ಆಕಾಶವಾಣಿಗಳ ಮೂಲಕವೂ ವೀರಗಾಸೆ ಕಲೆಯನ್ನು ಅತ್ಯಂತ ಸಮರ್ಥವಾಗಿ ಪ್ರಸಾರ ಮಾಡುತ್ತಿದ್ದಾರೆ.

ತಮ್ಮ ಇಳಿವಯಸ್ಸಿನಲ್ಲೂ ವೀರಗಾಸೆ ಕಲೆಯ ಪ್ರಸಾರಕ್ಕಾಗಿ ತುಡಿಯುವ ಸಿದ್ಧಪ್ಪ ಖಡ್ಗದ ಪದ ಹೇಳುವುದು ವಿಶೇಷವಾಗಿದೆ. ಅಪಾರ ವೆಚ್ಚದಲ್ಲಿ ವೀರಗಾಸೆ ವೇಷಭೂಷಣ ಸಿದ್ಧಪಡಿಸಿದ್ದರೂ ಅವುಗಳ ಸಂರಕ್ಷಣೆ ಕಷ್ಟಸಾಧ್ಯ ಎಂದೇ ಹೇಳುವ ಈ ಹಿರಿಯ ಕಲಾವಿದರು, ಸರ್ಕಾರ ವೀರಗಾಸೆ ಕಲಾವಿದರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ. ಅಕಾಡೆಮಿಗಳಿಂದ ಯಾವುದೇ ಸಹಾಯವಾಗುತ್ತಿಲ್ಲ. ವೀರಗಾಸೆಯೂ ಒಂದು ಜನಪದ ಕಲೆಯಾಗಿದ್ದು ಅದನ್ನು ಬೆಳೆಸಬೇಕಾದ ಜವಾಬ್ದಾರಿಯೂ ಸರ್ಕಾರದ ಮೇಲಿದೆ. ಯಾವುದೇ ಸವಲತ್ತಿಲ್ಲದ ಕಾರಣ ಇಂಥ ಶ್ರಮ ಸಾಧ್ಯವಾದ ಕಲೆಯನ್ನು ಕಲಿಯಲು ಯುವಕರು ಇಂದಿನ ದಿನಗಳಲ್ಲಿ ಮುಂದೆ ಬರುತ್ತಿಲ್ಲ ಎಂಬ ಸಲಹೆಗಳನ್ನು ಶ್ರೀ ಸಿದ್ಧಪ್ಪನವರು ತೋಡಿಕೊಳ್ಳುತ್ತಾರೆ.

ಸಿದ್ಧಪ್ಪ,<br>ವೀರಗಾಸೆ ಕಲಾವಿದರು,<br>ಗುಡ್ಡದ ಭೈರನಹಳ್ಳಿ, ಹೊನ್ನಾಳಿ ತಾಲೂಕು.

# ಬಸಪ್ಪ

ಚನ್ನಗಿರಿ ಸಮೀಪದ ಕಂಚಿಗನಹಾಳ್ ಗ್ರಾಮದವರಾದ ಶ್ರೀ ಬಸಪ್ಪನವರು ಚನ್ನಗಿರಿಯ ತಾಲೂಕಿನ ಪ್ರಸಿದ್ಧ ವೀರಗಾಸೆ ಕಲಾವಿದರು. ಸತತವಾಗಿ ೬೫ ವರ್ಷಗಳಿಂದಲೂ ವೀರಗಾಸೆ ಕಲೆಯನ್ನು ಪ್ರದರ್ಶನ ಮಾಡುತ್ತಿದ್ದಾರೆ. ತಂದೆ, ತಾತ ಇವರೂ ವೀರಗಾಸೆಯ ಕಲಾವಿದರಾಗಿದ್ದರು. ಬಸಪ್ಪನವರಿಗೆ ಒಂದು ಹೆಣ್ಣು, ಒಂದು ಗಂಡು. ಮೊದಲ ಮಗ ಯೋಗೀಶ್ವರಪ್ಪನವರಿಗೆ ಐವತ್ತು ವರ್ಷ ಆಗಿದೆ.

ಇವರು ೪ನೇ ತರಗತಿಯಲ್ಲಿ ಓದುತ್ತಿದ್ದಾಗ ದೇವಸ್ಥಾನದಲ್ಲಿ ಯುವಕರು ಖಡ್ಗ ಕುಣಿಸುತ್ತಿದ್ದ ಜಾಗದಲ್ಲಿ ಕುಳಿತು, ಖಡ್ಗ ಕುಣಿತವನ್ನು ವೀಕ್ಷಿಸುತ್ತಿದ್ದರು. ತಂದೆಯವರು ಒಬ್ಬನೇ ಮಗ ಹೆಚ್ಚು ಓದಲಿ ಎಂಬ ಕಾರಣಕ್ಕಾಗಿ ಸ್ವತಃ ಕಲಾವಿದರಾದರೂ ಮಗನಿಗೆ ಕಲೆಯ ಗೀಳಿನಿಂದಾಗಿ ಓದಿಗೆ ತೊಂದರೆಯಾಗಬಾರದೆಂದು ಖಡ್ಗ ಕುಣಿತವನ್ನು ಹೇಳಕೊಡಲಿಲ್ಲ. ಆದರೂ ಶಾಲೆಯಲ್ಲಿ ಇತರೆಯವರ ಸಹವಾಸ, ಊರ ಯುವಕರ ಕಲಾ ಕುಣಿತ ಕಂಡ ಯೋಗೀಶ್ವರಪ್ಪನವರೂ ಇಂದು ತಂದೆಗೆ ಸರಿದೊರೆಯಾಗಿ ವೀರಗಾಸೆ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ ಮಾತ್ರವಲ್ಲ ಬೇರೆ ಬೇರೆ ತಾಲೂಕುಗಳಿಗೂ ಹೋಗಿ ವಾರಗಟ್ಟಲೆ ಇದ್ದು ಕಲೆಯನ್ನು ಕಲಿಸಿಕೊಡುತ್ತಿದ್ದಾರೆ.

ಬಸಪ್ಪನವರು ವೀರಗಾಸೆ ಕುಣಿತದೊಂದಿಗೆ ಯಕ್ಷಗಾನ ವೇಷಗಾರಿಕೆ, ಆಭರಣ, ವೇಷಭೂಷಣಗಳ ತಯಾರಿಕೆಯ ಕೆಲಸವನ್ನು ಮಾಡಿದ್ದಾರೆ. ಅತ್ಯುತ್ತಮ ಕೋಲುಪದಕಾರರೂ ಹೌದು. ಸೊಗಸಾಗಿ ಕೋಲುಮೇಳ ನಡೆಸಿಕೊಡುತ್ತಾರೆ. ಖಡ್ಗಪದ ಎಂದೇ ಕರೆಯಲ್ಪಡುವ ವೀರಗಾಸೆಯ ಮಧ್ಯೆ ಕುಣಿತ ನಿಂತಾಗ, ಪೂರಕವಾಗಿ ಶಿವನು ದಕ್ಷಬ್ರಹ್ಮನ ಸಂಹಾರ ಮಾಡಿದ ಕಥೆಯನ್ನು ವಚನಗಳ ಮೂಲಕ ಹೇಳಲಾಗುತ್ತದೆ.

ಇದಕ್ಕೆ ಖಡ್ಗಪದ ಎಂದರೇ ಕರೆಯಲಾಗುವುದು. ಈ ಬಗೆಯ ಪದ ಹೇಳುವವರು ಅತಿ ವಿರಳರು.

ಶ್ರೀ ಬಸಪ್ಪನವರು ಸಮಗ್ರ ದಕ್ಷಬ್ರಹ್ಮನ ಕಥೆಯನ್ನು ವಚನದ ಮೂಲಕ ಹೇಳುವುದು ವಿಶೇಷವಾಗಿದೆ. ಒಂದು ರಾತ್ರಿ ಪೂರಾ ದಕ್ಷಬ್ರಹ್ಮನ ಕಥೆ ಹೇಳುವ ಅಪರೂಪ ತನವೂ ಇವರಿಗೆ ಸಿದ್ಧಿಸಿದೆ. ಬಸಪ್ಪನವರು ಸಿರಿಗೆರೆ ಮಠದಲ್ಲಿ ಅಲ್ಲಿನ ಯುವಕರಿಗೆ ವೀರಗಾಸೆ ಹೇಳಿಕೊಟ್ಟಿರುವುದರ ಜೊತೆಗೆ ಕಂಚಿಗನಹಾಳ್, ಚನ್ನಗಿರಿ, ಸಂತೆಬೆನ್ನೂರು ಈ ಮೊದಲಾದ ಕಡೆಗಳಲ್ಲಿ ವಿದ್ಯಾರ್ಥಿಗಳಿಗೂ ಖಡ್ಗ ಕುಣಿತವನ್ನು ಹೇಳಿಕೊಟ್ಟಿದ್ದಾರೆ. ದಾವಣಗೆರೆ ಜಿಲ್ಲೆಯಾದ್ಯಂತ ಅಪಾರ ಶಿಷ್ಯರನ್ನು ಹೊಂದಿದ್ದಾರೆ.

ಇವರು ಶಿಷ್ಯರು, ರಾಜ್ಯದ ಹಲವು ಕಡೆಯ ಯುವಜನ ಮೇಳಗಳಲ್ಲಿ ಭಾಗವಹಿಸುತ್ತಾ ಆಕರ್ಷಕ ಪ್ರದರ್ಶನ ನೀಡಿ ಬಹುಮಾನ ಪಡೆದಿರುವುದು ವಿಶೇಷ. ಸಿಂಧನೂರು, ಶಿಕಾರಿಪುರ, ಧಾರವಾಡ ಇಲ್ಲಿ ನಡೆದ ರಾಜ್ಯಮಟ್ಟದ ಯುವಜನ ಮೇಳಗಳಲ್ಲಿ ಇವರ ನಿರ್ದೇಶನದ ಖಡ್ಗ ಕುಣಿತ ಯುವ ಪ್ರಶಸ್ತಿ ಪಡೆದಿದ್ದಾರೆ.

ಬಸಪ್ಪನವರ ಖಡ್ಗ ಪ್ರದರ್ಶನ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಭಾರತಿಯಲ್ಲಿಯೂ ಪ್ರದರ್ಶಿಸಿ ಬಸವರಾಜ ನೆಲ್ಲಿಸರ ಅವರ ಮೂಲಕ ಶಿವಮೊಗ್ಗ, ಭದ್ರಾವತಿ ಆಕಾಶವಾಣಿಗಳಿಂದಲೂ ವೀರಗಾಸೆ ಪ್ರದರ್ಶನ ನೀಡಿದ್ದಾರೆ. ಪ್ರಮುಖ ವೀರಶೈವ ಮಠಗಳೂ ಸೇರಿದಂತೆ ಚನ್ನಗಿರಿ, ಹೊನ್ನಾಳಿ, ಹರಿಹರ, ದಾವಣಗೆರೆ, ಶಿವಮೊಗ್ಗ ಜಿಲ್ಲಾಡಳಿತ ಇವರನ್ನು ಬೇರೆ ಬೇರೆ ಸಂದರ್ಭದಲ್ಲಿ ಗೌರವಿಸಿದೆ. ಸರ್ಕಾರದ ವಿವಿಧ ಕಾರ್ಯಕ್ರಮಗಳಲ್ಲಿ ಬಸಪ್ಪ ತಂಡದ ಕಲಾವಿದರಿಂದ ವೀರಗಾಸೆ ಪ್ರದರ್ಶನ ಏರ್ಪಡಿಸಿದೆ.

ವಯಸ್ಸಾದ ತಂದೆಯ ಕಲಾ ಶ್ರೀಮಂತಿಕೆಯನ್ನು ಮಗ ಯೋಗೀಶ್ವರಪ್ಪ ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ. ಖಡ್ಗ ಕುಣಿತ, ಚಮ್ಮೇಳ, ಡೋಲ್ ಈ ಎಲ್ಲ ವಿಷಯದಲ್ಲೂ ಸೈ ಅನ್ನಿಸಿಕೊಂಡಿರುವ ಇವರು ಇಂದು ಸ್ವತಃ ಕಲಾತಂಡದ ಯಜಮಾನರಾಗಿ, ಕಲಾ ಪ್ರದರ್ಶನ ನೀಡುತಿದ್ದಾರೆ.

ಬಸಪ್ಪ, ವೀರಗಾಸೆ ಕಲಾವಿದರು,<br>ಕಂಚಿನಹಾಳ್ ಗ್ರಾಮ, ಚನ್ನಗಿರಿ ತಾಲೂಕು.

## ಪಿ. ಆರ್. ಹನುಮಂತಪ್ಪ

ದಾವಣಗೆರೆ ಜಿಲ್ಲೆಯ ಹೆಸರಾಂತ ಜನಪದ ಹಾಡುಗಾರರಾದ ದೇವರಹಳ್ಳಿ ಹನುಮಂತಪ್ಪ ಲಾವಣಿ, ಜನಪದ ಗೀತೆ ಗಾಯಕರಾಗಿ ಪ್ರಸಿದ್ಧರಾಗಿದ್ದಾರೆ. ಕಲೆಯನ್ನೇ ಹವ್ಯಾಸಿ, ವೃತ್ತಿ ಎರಡನ್ನೂ ಮಾಡಿಕೊಂಡಿರುವ ಇವರು ಎಲ್ಲ ಶಾಲಾ ಕಾಲೇಜುಗಳಲ್ಲಿಯೂ ಕಲಾ ಪ್ರದರ್ಶನ ನೀಡಿರುವುದು ವಿಶೇಷವಾಗಿದೆ. ೧೯೪೨ರಲ್ಲಿ ರೈತಾಪಿ ಕುಟುಂಬದಲ್ಲಿ ಜನಿಸಿದ ಹನುಮಂತಪ್ಪ ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ನಂತರ ಅಂಗವಿಕಲತೆಯ ಕಾರಣವಾಗಿ ಶಾಲೆ ಮುಂದುವರಿಸಲಾಗದೆ ಸಂಗೀತದ ಕಡೆ ವಾಲಿದರು. ಹಾರ್ಮೋನಿಯಂ, ತಬಲಾ, ಗಿಟಾರ್ ಈ ಮೂರು ಕಲೆಯಲ್ಲಿ ಪರಿಣಿತರು. ಜೊತೆಗೆ ಜನಪದ ಗೀತಗಾಯನ ಇವರ ಪ್ರಮುಖ ಆಸಕ್ತಿಯ ನೆಲೆಯಾಗಿದೆ.

ಉಪ್ಪಾರ ಜನಾಂಗದ ದೇವರಹಳ್ಳಿ ರಂಗಪ್ಪನವರಿಗೆ ಜನಿಸಿದ ನಾಲ್ಕು ಗಂಡುಮಕ್ಕಳಲ್ಲಿ ಹನುಮಂತಪ್ಪ ಮೊದಲನೆಯವರು. ಇವರ ತಂದೆ ರಂಗಪ್ಪನವರೂ ಮೂಡಲಪಾಯ ಯಕ್ಷಗಾನ ಕಲಾವಿದರು. ಶ್ರೀಕೃಷ್ಣಗಾರುಡಿ, ವಿರಾಟಪರ್ವ, ಲವ-ಕುಶರ ಕಾಳಗ, ದುಶ್ಯಾಸನ ಕತೆಗಳಲ್ಲಿ ಧರ್ಮರಾಯ, ಲಕ್ಷ್ಮಣ, ಅರ್ಜುನನ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಇವರ ಮಗನಾದ ಹನುಮಂತಪ್ಪ ಲಾವಣಿ ಮಹನುಮಂತಪ್ಪ ಎಂದೇ ಹೆಸರುವಾಸಿ. ಭದ್ರಾವತಿ, ಚಿತ್ರದುರ್ಗ, ಹೊಸಪೇಟೆ ಆಕಾಶವಾಣಿಗಳಿಂದಲೂ ಇವರ ಲಾವಣಿಗಳು ಪ್ರಸಾರವಾಗಿವೆ. ಕುವೆಂಪು ಅವರ ಬಹುತೇಕ ಪದ್ಯಗಳನ್ನು ಕಂಠಪಾಠ ಮಾಡಿರುವ ಹನುಮಂತಪ್ಪ ಭಾವಗೀತೆಗಳನ್ನು ಸೊಗಸಾಗಿ ಹಾಡುತ್ತಾರೆ. ವಿಶ್ವಮಾನವ ಸಂದೇಶಗೀತೆ ಇವರ ಹಾಡುಗಾರಿಕೆಗೆ ವಿಶೇಷ ಮನ್ನಣೆ ತಂದುಕೊಟ್ಟಿದೆ.

ಸರ್ಕಾರದ ವಿವಿಧ ಯೋಜನೆಗಳನ್ನು ಕುರಿತು ಲಾವಣಿಗಳನ್ನು ಕಾಲಕಾಲಕ್ಕೆ ಕಟ್ಟಿ ಹಾಡುವುದು ಇವರ ವಿಶೇಷ. ಕುಟುಂಬ ಯೋಜನೆ, ಪರಿಸರ, ಪ್ರಕೃತಿ, ಆಧುನಿಕ ಕೃಷಿನೀತಿ, ವಯಸ್ಕರ ಶಿಕ್ಷಣ, ಸಣ್ಣಕುಟುಂಬ, ಅಕ್ಷರ ಕ್ರಾಂತಿ ಈ ಮೊದಲಾದ ಯೋಜನೆಗಳನ್ನು ಪದ್ಯಗಳಲ್ಲಿ ರಚನೆ ಮಾಡಿ, ವಿಶೇಷ ಶಿಬಿರ ಅಥವಾ ಇಲಾಖೆಯ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ, ಹಾಡುತ್ತಾ ಬರುತ್ತಿರುವುದು ಇವರ ವಿಶೇಷವಾಗಿದೆ. ಈ ಎಲ್ಲ ಜಾಗೃತಿ ಗೀತೆಗಳನ್ನು ಲಾವಣಿಗಳಲ್ಲಿ ಪರಿವರ್ತಿಸಿ ಹಾಡುವುದು ಇವರ ವಿಶೇಷವೂ ಹೌದು.

ಹನುಮಂತಪ್ಪ ಒಳ್ಳೆಯ ಸಂಘಟಕರೂ ಹೌದು. ಕನ್ನಡ ಸಂಸ್ಕೃತಿ ಇಲಾಖೆ, ಜಾನಪದ ಅಕಾಡೆಮಿ ಈ ಮೊದಲಾದ ಸಾಂಸ್ಕೃತಿಕ ಸಂಸ್ಥೆಗಳ ನೆರವಿನೊಂದಿಗೆ ಜನಪದ ಕಲಾಮೇಳ, ಯಕ್ಷಗಾನ, ಭಾವಗೀತೆ, ರಸಮಂಜರಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ತಾವೂ ಹಾಡುತ್ತಾ ಗ್ರಾಮೀಣ ಪರಿಸರದಲ್ಲಿ ಕಲೆ, ಕಲಾವಿದರಲ್ಲಿ ಜಾಗೃತಿ ಮೂಡಿಸುತ್ತಿರುವುದು ಇವರ ವಿಶೇಷವಾಗಿದೆ. ಸಂತೆಬೆನ್ನೂರು, ದಾವಣಗೆರೆ, ಚನ್ನಗಿರಿ ಈ ಮೊದಲಾದ ಕಡೆಗಳಲ್ಲಿ ಜನಪದ ಕಲಾಮೇಳ ಏರ್ಪಡಿಸಿರುವುದು ಇವರ ಸಾಧನೆಯೂ ಹೌದು.

ಹನುಮಂತಪ್ಪ ಅವರ ನಿರಂತರ ಕಲಾಸಾಧನೆಯನ್ನು ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಈ ಮೂರೂ ಜಿಲ್ಲೆಗಳ ಜನತೆ ಜಿಲ್ಲಾಡಳಿತ ಗುರುತಿಸಿದೆ. ಸರ್ಕಾರಿ, ಖಾಸಗಿ ಸಮಾರಂಭಗಳಲ್ಲಿ ಇವರನ್ನು ಆಹ್ವಾನಿಸಿ ಜನಪದ ಹಾಡುಗಾರಿಕೆಗೆ ಪ್ರೋತ್ಸಾಹ ನೀಡಿದೆ. ಜೊತೆಗೆ ಕನ್ನಡ ರಾಜ್ಯೋತ್ಸವ ಪುರಸ್ಕಾರವನ್ನು, ಈ ಮೂರೂ ಜಿಲ್ಲಾಡಳಿತವು ನೀಡಿ ಗೌರವಿಸಿವೆ.

ಸಂಸಾರ, ವೈವಾಹಿಕ ಬಂಧನ ಈ ಎಲ್ಲ ಜವಾಬ್ದಾರಿಗಳ ಒಳಗೂ ಉಂಡು ಉಪಚಾರಿ ಬಳಸಿ ಬ್ರಹ್ಮಚಾರಿಯಂತೆ ಸದಾ ಕಲೆ, ಕಲಾವಿದರ ಸಂಘಟನೆಯಲ್ಲಿಯೇ ತೊಡಗಿಸಿಕೊಂಡಿರುವ ಹನುಮಂತಪ್ಪ ಕರ್ನಾಟಕ ಸರ್ಕಾರದ ಕಲಾವಿದ ಮಾಸಾಶನ ಪಡೆಯುತ್ತಿರುವುದನ್ನು ಬಿಟ್ಟರೆ ಇನ್ನಾವುದೇ ಬಗೆಯ ಸೌಲಭ್ಯವನ್ನು ಈ ಕಲಾವಿದ ಪಡೆದಿಲ್ಲ. ಯಾವ ಭಾಗ್ಯವೂ ಬೇಡ, ಸರ್ಕಾರ ನನ್ನನ್ನು ಕರೆದು ಹಾಡಿಸುವ ಭಾಗ್ಯವನ್ನಾದರೂ ನೀಡಲಿ ಎಂಬುದು ಹನುಮಂತಪ್ಪನವರ ಬಯಕೆ.

ಹನುಮಂತಪ್ಪ, ಕಲಾವಿದ,
ದೇವರಹಳ್ಳಿ, ಚನ್ನಗಿರಿ ತಾಲೂಕು.

# ಕೋಲುಕಾರ ಭೀಮಪ್ಪ

ಒಂದು ನೂರಾ ಎಂಟು ವರ್ಷಗಳ ಕಾಲ ಬದುಕಿ ಜನಪದ ಗೀತೆಗಳ ಗಾರುಡಿಗನೆನಿಸಿ ಹಳ್ಳಿಯಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಜನಪದ ವಿದ್ಯಾರ್ಥಿಗಳಿಗೆ ಜನಪದ ಗೀತೆಗಳನ್ನು ಹಾಡುವ ಮೂಲಕ ಎಪ್ಪತ್ತರ ದಶಕದಲ್ಲಿ ಜನಪದದ ಬಗೆಗೆ ವಿಶೇಷ ಆಸಕ್ತಿ ಮೂಡಿಸಲು ಪ್ರೇರಕವಾದವರು ಭೀಮಪ್ಪನವರು.

ಭೀಮಪ್ಪನವರು ಜಗಳೂರು ತಾಲೂಕಿನ ಬಿಳಿಚೋಡು ಗ್ರಾಮದವರು. ಹಾಲುಮತ ಜನಾಂಗಕ್ಕೆ ಸೇರಿದ ಈ ಕಲಾವಿದ ೫೦೦ ಕುರಿಗಳ ಒಡೆಕಾರ. ಕಂಬಳಿ ಕಸುಬನ್ನು ಇವರ ಪರಂಪರೆಯವರು ಮಾಡುತ್ತಿದ್ದರು. ಆದರೆ ಭೀಮಪ್ಪ ಈ ಕೆಲಸ ಮಾಡಿದವರು. ಕುರಿ ಪಾಲನೆಯ ಜೊತೆಗೆ, ಕುರಿಗೆ ಸಂಬಂಧಿಸಿದ ಪಶು ವೈದ್ಯಕೀಯವನ್ನೂ ಮಾಡುತ್ತಿದ್ದರು. ಊರ ಕೋಲುಕಾರ ಮನೆತನವಾದುದರಿಂದ ಗ್ರಾಮದ ಪ್ರತಿಯೊಂದು ವ್ಯವಹಾರದಲ್ಲೂ ನಿಷ್ಠೆ, ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಿದ್ದ ಅಪ್ಪಟ ಜನಪದ ಕಲಾವಿದ.

ಕೋಲುಕಾರ ಭೀಮಪ್ಪನವರಿಗೆ ನಾಲ್ವರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಗಂಡುಮಕ್ಕಳು ಯಕ್ಷಗಾನ ಬಯಲಾಟ, ಕೋಲುಪದಗಳಲ್ಲಿ ಕೊಂಚ ಆಸಕ್ತಿಯಾದರೂ ತಂದೆಯ ಸ್ಥಾನವನ್ನು ತುಂಬುವ ಸಾಮರ್ಥ್ಯವನ್ನು ರೂಢಿಸಿಕೊಂಡಿಲ್ಲ.

ಒಂದು ಅಕ್ಷರವನ್ನೂ ಕಲಿಯದ ಭೀಮಪ್ಪ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರಾದರೂ ಆ ಬಗೆಗೆ ಯಾವುದೇ ದಾಖಲೆ ಸೃಷ್ಟಿಸಲಿಲ್ಲ. ರಾತ್ರಿಯೆಲ್ಲಾ ಹಾಡವುದು ಇವರಿಗೆ ವಿಶೇಷ ಗೌರವ. ವಿಶೇಷವಾಗಿ ಚಿತ್ರದುರ್ಗದ ಪಾಳೆಯಗಾರ ಮೇಲೆ ಅಧಿಕೃತವಾಗಿ ಕಥನ ಗೀತೆಗಳನ್ನು ಹಾಡುತ್ತಿದ್ದುದು ಇವರ ವಿಶೇಷತೆ.

ಪಾಳೆಯಗಾರರ ವಂಶ, ವೀರ ಮದಕರಿಯ ಸಾಮರ್ಥ್ಯ ಮುರುಘಾಮಠ, ದುರ್ಗದ ಏಕನಾಥೇಶ್ವರಿ ದೇವರಕಥನ ಇವುಗಳನ್ನು ಹಾಡುತ್ತಿದ್ದರು. ಜೊತೆಗೆ ಯಕ್ಷಗಾನ ಹಿಮ್ಮೇಳ ಕಲಾವಿದರಾಗಿ ಕೋಲುಪದ ಭಾಗವತರಾಗಿ ಕಾಡುಗೊಲ್ಲರ ಸಾಂಸ್ಕೃತಿಕ ವೀರರಾದ ಜುಂಜಪ್ಪಾ, ಎತ್ತಪ್ಪ ಇವರುಗಳ ಮೇಲೂ ಕಾವ್ಯ ಹಾಡುತ್ತಿದ್ದುದು ಇವರ ಹಾಡುಗಾರಿಕೆಯ ವಿಶೇಷ.

ಕೋಲುಕಾರ ಭೀಮಪ್ಪ ಹಾಕಿರುವ ಚಿತ್ರದುರ್ಗದ ಮೇಲಿನ ಕಥನ ಗೀತೆಗಳನ್ನು ಕರಾಕೃ ೧೯೫೨ ರಲ್ಲಿ ಮೊದಲಿಗೆ ಸಂಗ್ರಹಿಸಿ ಚಿತ್ರಕಲ್ಲು ಮದಕರಿ ಎಂಬ ಜನದಪ ಗೀತೆಗಳ ಸಂಕಲನದಲ್ಲಿ ಪ್ರಕಟಿಸಿದ್ದಾರೆ. ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ, ಭೀಮಪ್ಪನವರ ಸೊಗಸಾದ ರೇಖಾಚಿತ್ರವನ್ನು ಬಿಡಿಸಿದ್ದಾರೆ. ಹರ್ತಿಕೋಟೆಯ ತಿಪ್ಪೇಸ್ವಾಮಿಯವರ ಸಂಪರ್ಕದಿಂದಾಗಿ ಮೈಸೂರು ವಿಶ್ವವಿದ್ಯಾಲಯುದಲ್ಲೂ ಹಾಡಿದ ಇವರು ಮುರುಘಾಮಠದ ಪರಮ ಭಕ್ತರೂ ಆಗಿದ್ದವರು.

ಯಾವುದೇ ಗೌರವ ಪ್ರಶಸ್ತಿ, ಕಲಾ ಮಾಸಾಶನ, ಸ್ವಾತಂತ್ರ್ಯ, ಹೋರಾಟಗಾರರ ಸಂಭಾವನೆಗೂ ಆಸೆ ಬೀಳದೆ ಕುರಿ ಮೇಯಿಸುತ್ತಲ್ಲೇ ಪದ ಹಾಡಿಕೊಂಡು ಸತ್ತ ಭೀಮಪ್ಪ, ಜನಪದ ಕಲಾವಿದರ ಮಾರ್ಗದರ್ಶಕ ಅಪ್ಪಟ ಗ್ರಾಮೀಣ ಸೊಗಡಿನ ಜನಪದ ಸಂವಾಹಕ.

## ಚೌಡಿಕೆ ಬಸಪ್ಪ

ಚೌಡಿಕೆ ಚಿತ್ರದುರ್ಗ, ದಾವಣಗೆರೆ ಗಡಿಯಿಂದ ಆಚೆ ದಾಟಿದರೆ ಇದೊಂದು ಪ್ರಸಿದ್ಧವಾದ ಕಲೆ. ಚೌಡಿಕೆಯಲ್ಲಿ ಎರಡೂ ಬಗೆಯ ಕಲಾವಿದರಾಗಿದ್ದಾರೆ. ಕೆಲವರು ಧಾರ್ಮಿಕ ವೃತ್ತಿ ಗಾಯಕ ಕಲಾವಿದರಾಗಿ 'ಊರಾಡಿ' ಜೀವನ ನಿರ್ವಹಣೆಯ ಜೊತೆಗೆ ಧಾರ್ಮಿಕ ಆರಾಧನೆಯ ಮನಸ್ಥಿತಿಯವರೂ ಇದ್ದಾರೆ. ಜೊತೆಗೆ ಚೌಡಿಕೆಯವರಲ್ಲಿ ಪುರುಷರು, ಸ್ತ್ರೀಯರು ಎರಡೂ ಬಗೆಯನ್ನು ಕಾಣಬಹುದಾಗಿದೆ. ಈ ಇಬ್ಬರೂ ರೇಣುಕಾ ಎಲ್ಲಮ್ಮ ಅಥವಾ ಏಕನಾಥೇಶ್ವರ ಭಕ್ತರಾಗಿದ್ದು ಈ ದೇವಿಯನ್ನು ಕುರಿತು ದೀರ್ಘ ಕಥನ ಮಾಡುವುದು ಇವರ ವಿಶೇಷ. ಚೌಡಿಕೆಯವರನ್ನು ಜೋಗಪ್ಪ, ಜೋಗಮ್ಮ ಎಂಬ ವಿಶಾಲ ಅರ್ಥದಲ್ಲಿಯೂ ಕರೆಯುವ ಸಂದರ್ಭವೂ ಇದೆ. ಚಿತ್ರದುರ್ಗ, ದಾವಣಗೆರೆ, ಸಿರಾ ಈ ಭಾಗಗಳಲ್ಲಿ ಈ ಎರಡೂ ಪರಂಪರೆಯ ಕಲಾವಿದರು ವ್ಯಾಪಕವಾಗಿದ್ದಾರೆ.

ಬಸಪ್ಪ ರಾಗಿ ಮಸಾಲವಾಡದವರು. ಉಚ್ಚಂಗಿದುರ್ಗ ಇವರ ವಾಸಸ್ಥಳ. ಗಂಗಮತಸ್ಥರಾದ ಇವರು ರೇಣುಕಾ ಎಲ್ಲಮ್ಮನ ಭಕ್ತರೂ ಹೌದು. ವಿಶೇಷವಾಗಿ ರೇಣುಕಾ ದೇವಿಯ ಸ್ತೋತ್ರ ಮಾಡುವುದೆಂದರೆ ಇವರಿಗೆ ಎಲ್ಲಿಲ್ಲದ ಉತ್ಸಾಹ. ಬಾಲ್ಯದಲ್ಲಿ ಇವರ ತಂದೆಯವರಿಂದ ಪದ ಹಾಡುವುದನ್ನು ಕಲಿತರು. ರಾಮಪ್ಪನವರೂ ಜೋಗಪ್ಪನ ಪರಂಪರೆಯವರಾದರೂ ಜೋಗಪ್ಪನಾಗದೆ ಮಗನಿಗೆ ದೀಕ್ಷೆ ನೀಡಿಸ ಜೋಗಪ್ಪನನ್ನಾಗಿ ಮಾಡಿದ್ದರು. ಬಸಪ್ಪ ತಮ್ಮ ೧೫ನೇ ವಯಸ್ಸಿನಲ್ಲಿಯೇ ಚೌಡಿಕೆ ಪದ ಹಾಡುವುದನ್ನು ರೂಢಿಮಾಡಿಕೊಂಡಿದ್ದರು. ರೇಣುಕಾ ಎಲ್ಲಮ್ಮನ ಮೇಲೆ, ಚಿತ್ರದುರ್ಗದ ಏಕನಾಥೇಶ್ವರಿಯ ಮೇಲೆ, ಗೌರಸಂದ್ರದ ಮಾರಮ್ಮ, ಗುಂಟನೂರಿನ ದೇವಿ ದ್ಯಾಮಲಾಂಬೆಯ ಮೇಲೆ ಪದ ಹಾಡುತ್ತಿದ್ದರು. ಇವರು ಚೌಡಿಕೆಯಿಂದ ಪ್ರಸಿದ್ಧರಾದದ್ದು ಚಿತ್ರದುರ್ಗದ ಮದಕರಿ

ನಾಯಕನ ಮೇಲಿನ ಕಥನಗೀತೆಗಳನ್ನು ಕರಾಕೃ ಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದರು. ಪಿಆರ್‌ಟಿ ಅವರ ಆಕರ್ಷಕ ರೇಖಾಚಿತ್ರ ಇವರ ಭಾವಚಿತ್ರವನ್ನು ಚಿರಸ್ಥಾಯಿಗೊಳಿಸಿದೆ. ತರೀಕೆರೆಯಲ್ಲಿ ನಡೆದ ಜನಪದ ಸಮಾವೇಶದಲ್ಲಿ ಚೌಡಿಕೆ ಪದ ಹಾಡುವ ಮೂಲಕ ಕೆ.ಆರ್. ಲಿಂಗಪ್ಪ, ಜೀಶಂಪ ಗಮನ ಸೆಳೆದರು. ನಂತರ ಮೈಸೂರು ವಿಶ್ವವಿದ್ಯಾನಿಲಯದ ಜನಪದ ಎಂ. ಎ. ವಿದ್ಯಾರ್ಥಿಗಳಿಗಾಗಿ ಚಿತ್ರದುರ್ಗ ಪಾಳೆಯಗಾರ ಹಾಗೂ ತರೀಕೆರೆಯ ಸರ್ಜಪ್ಪ ನಾಯಕನ ಮೇಲೆ ಕಥನ ಗೀತೆ ಹಾಡಿದರು. ಜೀಶಂಪ ಇವರ ಹಾಡುಗಳನ್ನು ಸಂಗ್ರಹಿಸಿದ್ದಾರೆ. ತೊಂಬತ್ತಾರು ವರ್ಷಗಳ ಕಾಲ ಆರೋಗ್ಯವಾಗಿ ಬಾಳಿ, ಬಾಳಿನುದ್ದಕ್ಕೂ ರೇಣುಕಾ ಎಲ್ಲಮ್ಮನ ಕಥೆ ಮಾಡುತ್ತ ಗೌರವದ ಸಾವನ್ನು ಅಪ್ಪಿದ್ದು ಈ ಕಲಾವಿದನ ವಿಶೇಷ. ಆದರೆ ಮಕ್ಕಳ್ಯಾರೂ ಇವರ ಕಲೆಯನ್ನು ಮುಂದುವರಿಸಿಲ್ಲದಿರುವುದು ಅಷ್ಟೇ ವಿಷಾದಕರವಾದ ಸಂಗತಿ.

# ಗೊರಪ್ಪರ ಲಕ್ಕಮ್ಮ

ಶ್ರೀಮತಿ ಲಕ್ಕಮ್ಮ ಚನ್ನಗಿರಿ ತಾಲೂಕಿನ ಅಪರೂಪದ ಸೋಬಾನೆ ಕಲಾವಿದೆ. ಗೊರವರ ಕಲೆಯ ಪರಂಪರೆಯಿಂದ ಬಂದ ಈಕೆ ಕರಿಯಪ್ಪನವರನ್ನು ತಮ್ಮ ೨೦ನೇ ವಯಸ್ಸಿನಲ್ಲಿಯೇ ವಿವಾಹವಾದರು. ನಾಲ್ಕು ಮಕ್ಕಳ ತಾಯಿಯಾಗಿರುವ ಲಕ್ಕಮ್ಮನವರಿಗೆ ೬೫ ವರ್ಷ ವಯಸ್ಸು ಆಗಿದ್ದರೂ ಕೌಶಲ, ನೆನಪು, ಹಾಡುಗಾರಿಕೆಯ ಧಾಟಿ, ಮಧುರತೆ ಇವರನ್ನು ಇನ್ನೂ ಚಿಕ್ಕವರನ್ನಾಗಿ ಮಾಡಿದೆ.

ಲಕ್ಕಮ್ಮ ತನ್ನ ಅಜ್ಜಿ, ತಾಯಿಯವರಿಂದ ಜನಪದ ಗೀತೆ, ಹಾಡುವುದನ್ನು ಕಲಿತರು. ತನ್ನ ವ್ಯವಸಾಯದ ಕೆಲಸಗಳಾದ ಕಳೆ ಕೀಳುವುದು, ಪೈರು ನಾಟಿ ಮಾಡುವುದು, ಬೆಳೆ ಕತ್ತರಿಸುವುದು, ಕಣದಲ್ಲಿ ಕೆಲಸ ಮಾಡುವಾಗ ಗೊಲ್ಲರ ಹೆಂಗಸರು, ಹರಿಜನರ ಹೆಣ್ಣುಮಕ್ಕಳು ಹಾಡುತ್ತಿದ್ದ ಸೋಬಾನೆ, ಜನಪದ ಹಾಡುಗಳನ್ನು ಇವರುಗಳಿಂದ ಕಲಿತರು.

ಮುಂದೆ ಮದುವೆಯಾದಾಗ ಅಣಜಿಯ ಲಕ್ಷ್ಮಣಪ್ಪ, ಹರಪನಹಳ್ಳಿಯ ಎಲಿಸವ್ವ, ಸೂರಗೊಂಡನಹಳ್ಳಿ ರಂಗಮ್ಮ, ಬಿಳಿಚೋಡು ಭೀಮಪ್ಪ ಇವರುಗಳ ಹಲವು ಬಗೆಯ ಗೀತೆಗಳನ್ನು ಮದುವೆಯ ಸಂದರ್ಭ, ದೇವರ ಉತ್ಸವಗಳಲ್ಲಿ ಹಾಡುತ್ತಿದ್ದರು. ಇವರುಗಳಿಂದ ಜನಪದ ಗೀತೆ, ಹಾಡುಗಳನ್ನು ಲಕ್ಕಮ್ಮ ಕಲಿತರು. ಜೊತೆಗೆ ಗೊರವರ ಸಂಪ್ರದಾಯದ ಕುಟುಂಬವಾದುದರಿಂದ ತನ್ನ ಗಂಡ ಕರಿಯುಪ್ಪನವರೂ ಮೈಲಾರಲಿಂಗನ ಪದ, ಬೀರೇದೇವರ ಪದ, ಕೋಲಾಟದ ಪದಗಳನ್ನು ಹಾಡುತ್ತಾರೆ. ಇವುಗಳ ಪ್ರಭಾವವು ಲಕ್ಕಮ್ಮನವರಿಗೆ ಬಿದ್ದಿದೆ.

ಲಕ್ಕಮ್ಮ ಸೋಬಾನೆ ಪದಗಳನ್ನು ವೈವಿಧ್ಯ ರೀತಿಯಲ್ಲಿ ಹಾಡುತ್ತಾರೆ. ಒಬ್ಬರೇ ಕುಳಿತು ಹಾಡುವುದು ಒಂದು ಬಗೆಯಾದರೆ ಹಿಮ್ಮೇಳ, ಮುಮ್ಮೇಳದ ರೂಪದಲ್ಲಿ

ಇಬ್ಬರು ಮತ್ತು ನಾಲ್ಕು ಜನರ ತಂಡದಲ್ಲೂ ಹಾಡುತ್ತಾರೆ. ಇವರ ಜೊತೆಗೆ ಸೊಲ್ಲು ಕೊಡುವುದಕ್ಕೆ ಒಬ್ಬರು ಬೇಕಾಗುತ್ತಾರೆ. ಇಲ್ಲವಾದರೆ ಹಿಮ್ಮೇಳದ ಒಂದು ತಂಡದವರೊಂದಿಗೆ ಮುಮ್ಮೇಳವನ್ನು ಲಕ್ಕಮ್ಮನವರೇ ಹಾಡುತ್ತಾರೆ.

ಕೊರವಂಜಿ ಮೇಗಲ ಪದ, ಬೀಗರ ಕರೆಯುವ ಪದ, ಜರಿಯುವ ಪದ, ನಾಗೋಲಿ ಶಾಸ್ತ್ರದ ಪದ, ಹಸೆ ಹಚ್ಚೋ ಪದ, ಹಸೆ ಬರೆಯೋ ಪದ, ಒಸಗೆ ಹಾಕೋ ಪದ, ಧಾರೆ ಕಂಬ ತರುವಾಗ ಹಾಡುವ ಪದ, ಧಾರೆ ಪದ, ಮಲೆನೀರು ಮೇಯೋ ಪದ ಹೀಗೆ ಸೋಬಾನೆ ಪದಗಳಲ್ಲಿ ತರಾವರಿ ಪದ ಹಾಡುವುದು ಈಕೆ ವಿಶೇಷವಾಗಿದೆ.

ಜೊತೆಗೆ ಮೈಲಾರಲಿಂಗಪ್ಪನ ಮೇಗಳ ಪದ, ಬೀರದೇವರ ಪದ, ಪಾಂಡವರ ಮೇಲಿನ ಪದಗಳನ್ನು ಹಾಡುತ್ತಾರೆ. ಚನ್ನಗಿರಿಯ ಅಸುಪಾಸಿನ ಗ್ರಾಮಸ್ಥರೆಲ್ಲರೂ ತಮ್ಮ ಮನೆಗಳ ಶುಭಕಾರ್ಯದಲ್ಲಿ ಈಕೆಯಿಂದ ಪದ ಹಾಡಿಸಿದರೆ ಒಳ್ಳೆಯದೆಂಬ ನಂಬಿಕೆಯೂ ಇದೆ. ಹಾಗಾಗಿಯೇ ಲಕ್ಕಮ್ಮನವರಿಗೆ ಈ ಭಾಗದಲ್ಲಿ ಗೌರವದ ಸ್ಥಾನಮಾನ.

ಭದ್ರಾವತಿ ಆಕಾಶವಾಣಿ, ಚಿತ್ರದುರ್ಗದ ಆಕಾಶವಾಣಿಗಳಲ್ಲೂ ಸೋಬಾನೆ ಲಕ್ಕಮ್ಮನ ಪದಗಳು ಪ್ರಸಾರವಾಗಿವೆ. ಚಿತ್ರದುರ್ಗ, ಸಿರಿಗೆರೆ, ತರಳಬಾಳು ಮಠದಲ್ಲಿ, ನಡೆಯುವ ಜನಪದ ಕಲೋತ್ಸವದಲ್ಲಿ ಪ್ರತಿ ವರ್ಷವೂ ಭಾಗವಹಿಸುತ್ತಾ ಹಾಡುತ್ತಾ ಬರುತ್ತಿರುವುದು ಈ ಕಲಾವಿದೆಯ ವಿಶೇಷ.

**ಗೊರಪ್ಪನವರ ಲಕ್ಕಮ್ಮ,**
**ಗಂಡ ಕರಿಯಪ್ಪ, ದೇವರಹಳ್ಳಿ, ಚನ್ನಗಿರಿ ತಾಲೂಕು.**

## ದೊಡ್ಡಮಲ್ಲಪ್ಪ

ಬಯಲಾಟ, ಯಕ್ಷಗಾನ ಚಿತ್ರದುರ್ಗ, ಶಿವಮೊಗ್ಗಗಳಲ್ಲಿ ಪ್ರಸಿದ್ಧವಾದ ಜನಪದ ಕಲೆ, ಸುಗ್ಗಿಕಾಲ ಬಂತೆಂದರೆ ಬಯಲುಸೀಮೆಯಲ್ಲಿ ಹಬ್ಬಗಳ ಸರದಿಯ ಕಾಲ. ಗ್ರಾಮದೇವತೆ, ಶಿವರಾತ್ರಿ, ಯುಗಾದಿ, ಕಾರಬ್ಬ, ಬಸವಜಯಂತಿ ಹೀಗೆ ಸಾಲುಸಾಲಾಗಿ ಬರುವ ಹಬ್ಬಗಳಿಗೆ ನೆಂಟರು, ಆಪ್ತರ ಬರುವಿಕೆ ಅಗತ್ಯ. ಅಂಥ ಸಂದರ್ಭಕ್ಕೆ ಅವರಿಗೆಲ್ಲಾ ಮನರಂಜನೆ ಒದಗಿಸುವುದು ಗ್ರಾಮಜೀವನದ ಒಂದು ಅಂಗವಾಗುತ್ತಿತ್ತು. ಇದಕ್ಕೆ ಪೂರಕ ಜನಪದ ಕಲೆ ಎಂದರೆ ಬಯಲಾಟ ಅಥವಾ ಯಕ್ಷಗಾನ ಮೇಳ. ಯಕ್ಷಗಾನದಲ್ಲಿ ದಕ್ಷಿಣ ಕರ್ನಾಟಕದ ಬಯಲುಸೀಮೆ ಭಾಗಗಳು ಇಂದಿಗೂ ಅದೇ ಹುರುಪನ್ನು, ನಂಬಿಕೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಯಕ್ಷಗಾನ ನಾಟಕ ಊರಲ್ಲಿ ಮಾಡಿಸಿದರೆ ಊರಿಗೆ ಶಾಂತಿ, ಮಳೆ ಬೆಳೆ ಆಗುತ್ತದೆಂಬ ನಂಬಿಕೆಯೂ ಇದೆ. ಇಂಥ ಭಾವನೆಗೆ ಅರ್ಥಪೂರ್ಣವಾಗಿ ಒಪ್ಪಿಸಿಕೊಂಡವರು ದೊಡ್ಡಮಲ್ಲಯ್ಯನವರು. ದೊಡ್ಡಮಲ್ಲಯ್ಯ. ದೊಡ್ಡಮಲ್ಲಯ್ಯ ಮೋದಿಕೆರೆಯ ದಿ॥ ಸಣ್ಣಯಲ್ಲಪ್ಪನವರ ಮಗ. ಮೊದಲನೆಯ ಮಗನಾದ ಇವರಿಗೆ ಸಣ್ಣಯಲ್ಲಪ್ಪನವರು ಉತ್ತಮ ಶಿಕ್ಷಣ ಕೊಡಿಸಿ ಶಾಲಾ ಮಾಸ್ತರರನ್ನಾಗಿ ಮಾಡಬೇಕೆಂದು ಕನಸು. ಆದರೆ ಸೀಮೆಸುಣ್ಣ ಹಿಡಿದು ಪಾಠ ಹೇಳಬೇಕಾದ ದೊಡ್ಡಮಲ್ಲಯ್ಯ ತಾಳಹಿಡಿದು ಯಕ್ಷಗಾನದ ಪದ, ನೃತ್ಯದ ಪಾಠ ಕಲಿಸುತ್ತಿರುವುದು ವಿಶೇಷವಾಗಿದೆ.

ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ ತಮ್ಮ ಗ್ರಾಮದಲ್ಲಿ ಆಗಾಗ ಪ್ರದರ್ಶಿಸುತ್ತಿದ್ದ ಗಾಂಧಾರಿ ಪರಿಣಯ, ಕರ್ಣಾರ್ಜುನರ ಕಾಳಗ, ಶಿವಜಲಂಧರ, ಪಾಂಡುವಿಜಯ ಈ ನಾಟಕಗಳು ಇವರನ್ನು ವಿಶೇಷವಾಗಿ ಭಾಗವತರನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಬಾಲಕನ ಪಾತ್ರಗಳಾದ ಗಣಪತಿ, ಶಾರದೆ, ಲವ-ಕುಶ ಹೀಗೆ ಪುಟ್ಟಪುಟ್ಟ

ಪಾತ್ರಗಳಲ್ಲಿ ಅಭಿನಯ ನಂತರ ೩೫ರ ನಂತರ ಸ್ವಯಂ ಭಾಗವತರಾಗಿ ಯಕ್ಷಗಾನ ಕಲಿಸತೊಡಗಿದರು.

ಶಶಿಪ್ರಭಾವ, ಕರ್ಣಾರ್ಜುನರ ಕಾಳಗ, ದ್ರೌಪದಿ ವಸ್ತ್ರಾಪಹರಣ, ನಾರದ ವಿಜಯ, ಲವ-ಕುಶ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು. ಭದ್ರಾವತಿ ಆಕಾಶವಾಣಿಯಿಂದಲೂ ಇವರ ದೊಡ್ಡಾಟ ಯಕ್ಷಗಾನ ಪ್ರಸಾರವಾಗಿದೆ. ಸರ್ಕಾರದ ಮಾಸಾಶನವನ್ನೂ ಪಡೆಯುತ್ತಿರುವ ೬೫ ವರ್ಷ ತುಂಬಿರುವ ಈ ಹಿರಿಯ ದೊಡ್ಡಾಟ ಕಲಾವಿದನಿಗೆ ಆಸ್ತಿ ಹೋದರೂ ಪರವಾಗಿಲ್ಲ ಯಕ್ಷಗಾನ ಕಲೆ ಉಳಿಯಬೇಕೆಂಬ ಅದಮ್ಯ ಉತ್ಸಾಹ. ರೈತಾಪಿ ಬದುಕಿನಲ್ಲಿಯೇ ೧೦ ಜನರ ಕುಟುಂಬ ಸದಸ್ಯರೊಂದಿಗೆ ಕಾಲ ಕಳೆಯುತ್ತಿರುವ ದೊಡ್ಡ ಮಲ್ಲಯ್ಯ ದೈಹಿಕವಾಗಿ ಸವೆದರೂ ಮಾನಸಿಕವಾಗಿ ಬಲಾಢ್ಯರಾಗಿ ಕಲೆಯನ್ನು ಉಳಿಸುವಲ್ಲಿ ಶ್ರಮಿಸುತ್ತಿರುವುದು ವಿಶೇಷವಾಗಿದೆ.

**ದೊಡ್ಡಮಲ್ಲಪ್ಪ,**
**ಮೋದಿಗೆರೆ ಗ್ರಾಮ, ಚನ್ನಗಿರಿ ತಾಲೂಕು.**

## ಗಂಗಾಧರಯ್ಯ

ಶ್ರೀ ಗಂಗಾಧರಯ್ಯ, ಜಗಳೂರು ತಾಲೂಕಿನ ಪ್ರಮುಖ ಚೌಡಿಕಿ ಕಲಾವಿದ. ವೃತ್ತಿ ಹಾಗೂ ಧಾರ್ಮಿಕ ಈ ಎರಡೂ ಪರಂಪರೆಯಲ್ಲಿ ಚೌಡಿಕೆ ಕಲೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಗಂಗಾಧರಯ್ಯ ಅವರಿಗೆ ೬೦ ವರ್ಷಗಳು. ತನ್ನ ಈ ಕಳೆದ ಒಟ್ಟು ಬದುಕನ್ನು ಚೌಡಿಕೆ ವಾದ್ಯದೊಂದಿಗೆ ಕಲೆಗಾಗಿಯೇ ಮೀಸಲಿಟ್ಟಿರುವುದಾಗಿ ಹೇಳಿಕೊಳ್ಳುತ್ತಾರೆ. ತನ್ನ ತಾತ, ತಂದೆ ಕೊನೆಗೆ ತಾನೂ ಇದೇ ಕಲೆಯನ್ನು ಮುಂದುವರಿಸುವುದು ನನಗೆ ಹೆಮ್ಮೆ ಅನ್ನಿಸುತ್ತದೆ ಎನ್ನುತ್ತಾರೆ ಈ ಕಲಾವಿದರು. ಗಂಗಾಧರಯ್ಯ ಓದು-ಬರಹ ತಿಳಿದವರಲ್ಲ. ಕೂಲಿ ಬದುಕಿನ ಅಪ್ಪ-ಅಮ್ಮ ಜೊತೆಗೆ ಚೌಡಿಕಿ ಹಿಡಿದು ಒಂದೆರಡು ಊರಾಡಿದರೆ ಹೊಟ್ಟೆ ತುಂಬಾ ಅನ್ನ, ರೊಟ್ಟಿ ಇದೇ ಸಂತೃಪ್ತವಾಗಿ ಕಂಡು ಶಾಲೆ ಕಲಿಯಬೇಕೆಂಬ ಆಸೆಯೇ ಬರಲಿಲ್ಲ ಎನ್ನುತ್ತಾರೆ. ಗಂಗಾಧರಯ್ಯ ತಮ್ಮ ವಾದ್ಯ ನುಡಿಸುವುದನ್ನು ಹತ್ತನೇ ವಯಸ್ಸಿನಲ್ಲಿಯೇ ಕಲಿತರು. ಮೊದಲು ರೇಣುಕಾದೇವಿ ಚರಣವನ್ನು ಒಂದೆರಡು ಸಾಲು ಹೇಳಿ ಮುಂದೆ ಹೋಗುತ್ತಿದ್ದರು. ಅಥವಾ ಅದನ್ನೇ ತಿರುಗಿ-ಮಗುಚಿ ಹಾಡಿದ್ದೂ ಉಂಟು. ಆದರೆ ಇಪ್ಪತ್ತನೇ ವಯಸ್ಸಿನ ನಂತರ ಈ ಕಲೆಯ ಬಗೆಗೆ ನಿಜವಾದ ಶ್ರದ್ಧೆ, ಭಯ, ಭಕ್ತಿ ಉಂಟಾಯಿತು. ಚಿತ್ರದುರ್ಗದ ಏಕನಾಥೇಶ್ವರಿ ಮೇಲೆ ಪದ ಹಾಡುವುದನ್ನು ಮೊದಲು ರಾಮಯ್ಯ ಎಂಬುವವರಿಂದ ಕಲಿತೆ. ನಂತರ ರೇಣುಕಾ ಎಲ್ಲಮ್ಮನ ಮೇಲೆ ಪದ ನಿಂಬೂರಿನವರೇ ಆದ ನರಸಿಂಗಯ್ಯ ಎಂಬುವವರಿಂದ ಕಲಿತಿದ್ದಾಗಿ ಹೇಳುತ್ತಾರೆ.

ದೇವಿ ರೇಣುಕೆ ಎಲ್ಲಮ್ಮ, ಏಕನಾಥೇಶ್ವರಿ, ಉಚ್ಚಂಗಮ್ಮ ಈ ದೇವತೆಗಳ ಕುರಿತು ಸಮಗ್ರವಾಗಿ ಕಾವ್ಯ ಹಾಡುವುದು ಇವರ ವಿಶೇಷವಾಗಿದೆ. ಯಕ್ಷಗಾನ ಭಾಗವಂತಿಕೆಗೆ ಹಿಮ್ಮೇಳ ಕಲಾವಿದರಾಗಿಯೂ ಕೆಲಸ ಮಾಡಿರುವ ಗಂಗಾಧರಪ್ಪ ಮಾರೆವ್ವನನ್ನು ಕುರಿತು

ಸಮಗ್ರವಾಗಿ ಪದ ಹಾಡುತ್ತಾರೆ. ಮಾರೆಮ್ಮ ಶೂದ್ರ ಹುಡುಗನನ್ನು ವಿವಾಹವಾದ ಕತೆ, ಆ ಹುಡುಗ ತನ್ನ ತಂದೆ ತಾಯಿಯರೊಂದಿಗೆ ಮತ್ತೆ ಒಂದಾದದ್ದು ನಂತರ ಹೆಂಡತಿಗೆ ತನ್ನ ಗಂಡ ಶೂದ್ರ ಎನ್ನುವ ಅರಿವಾದದ್ದು, ಕೊನೆಗೆ ಮಾರಮ್ಮ ತನ್ನ ಗಂಡ ಮಕ್ಕಳು ಎಲ್ಲರನ್ನೂ ಆಹುತಿ ತೆಗೆದುಕೊಂಡ ಕತೆಯನ್ನು ಚೌಡಿಕೆ ವಾದ್ಯ ಬಾರಿಸಿಕೊಂಡು ರಸವತ್ತಾಗಿ ಹಾಡುತ್ತಾರೆ. ಗೌರಸಂದ್ರದ ಮಾರೆಮ್ಮ, ಗೊರ್ಲತ್ತಿನ ಮಾರೆಮ್ಮನ ಬಗೆಗೂ ಕಥನಗೀತೆ ಹಾಡುತ್ತಾರೆ. ಭದ್ರಾವತಿ, ಚಿತ್ರದುರ್ಗ ಈ ಎರಡೂ ಆಕಾಶವಾಣಿ ಕೇಂದ್ರಗಳಿಂದಲೂ ಇವರ ಚೌಡಿಕೆ ಕಥೆ ಪ್ರಸಾರವಾಗಿದೆ. ಸರ್ಕಾರದ ಹಲವು ಸಭೆ ಸಮಾರಂಭಗಳಲ್ಲಿ ಇಂದಿಗೂ ಸುಶ್ರಾವ್ಯವಾಗಿ ಹಾಡುವ ಈ ಕಲಾವಿದ ಚೌಡಿಕೆಯ ಕಲೆಯನ್ನು ಮುಂದುವರಿಸುತ್ತಿರುವ ಅಪರೂಪದ ಕಲಾಕಾರ.

**ಗಂಗಾಧರಯ್ಯ,**

**ನಿಂಬೂರು, ಜಗಳೂರು ತಾಲೂಕು.**

# ಶಾರದಮ್ಮ

ಶಾರದಮ್ಮನವರು ಜನಪದ ಗಾಯಕರು, ಚನ್ನಗಿರಿ ತಾಲೂಕಿನ ಹಾರೋನಹಳ್ಳಿಯವರು. ಪ್ರಾಥಮಿಕ ಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿರುವ ಇವರು ಅರವತ್ತು ವರ್ಷಗಳ ವಯೋಮಿತಿಯವರು.

ಶಾರದಮ್ಮನವರು ಜಾನಪದ ಗೀತ ಪ್ರಕಾರದ ಎಲ್ಲಾ ಭಾಗಗಳಲ್ಲೂ ಹಾಡುತ್ತಾರೆ. ಹಾಡುವುದೇ ಕಾಯಕ ಎಂಬಂತೆ ಭಾವಿಸಿರುವ ಈ ಕಲಾವಿದೆ, ಭದ್ರಾವತಿ ಹಾಗೂ ಚಿತ್ರದುರ್ಗ ಆಕಾಶವಾಣಿಗಳಿಂದಲೂ ಹಾಡುತ್ತಿರುತ್ತಾರೆ. ಸೋಬಾನೆ, ಕೃಷಿ ಪದ, ಲಾವಣಿ ರೂಪಕ, ಇವುಗಳ ಜೊತೆಗೆ ಬೆಳದಿಂಗಳ ಪದ, ಮಕ್ಕಳ ಲಾಲಿ ಹಾಡುಗಳನ್ನೂ ಪ್ರತ್ಯೇಕ ಕಂಠದಲ್ಲಿ ಹಾಡುವುದು ವಿಶೇಷ. ಶಾರದಮ್ಮನವರು ಒಳ್ಳೆಯ ಸಂಘಟಕರೂ ಹೌದು. ಹತ್ತಾರು ಕಲಾಸಕ್ತರನ್ನು ಒಂದೆಡೆ ಕಲೆ ಹಾಕಿ, ಭಜನೆ, ಜನಪದ ಗೀತೆಗಳನ್ನು ಕಲಿಸುವ ಕೆಲಸವನ್ನು ಮಾಡುತ್ತಾರೆ. ಕಲಾವಿದರಿಗೆ ಮಾಸಾಶನ ಬರಬೇಕೆಂಬ ದಿಟ್ಟ ಹೋರಾಟದ ರೂಪವನ್ನು ತೋರುವ ಶಾರದಮ್ಮ ಹತ್ತಾರು ಕಲಾವಿದರಿಗೆ ಮಾಸಾಶನ ದೊರಕಿಸಿಕೊಡುವಲ್ಲಿ ಅರ್ಥಪೂರ್ಣವಾಗಿ ಸಹಕರಿಸಿದ್ದಾರೆ.

ಚಿತ್ರದುರ್ಗ, ದಾವಣಗೆರೆ, ಭದ್ರಾವತಿ, ಶಿವಮೊಗ್ಗ, ಹರಿಹರ, ಹೊನ್ನಾಳಿಗಳಲ್ಲಿ ಜರುಗುವ ಪ್ರಮುಖ ಧಾರ್ಮಿಕ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಹ್ವಾನಿತರಾಗಿ ಭಾಗವಹಿಸಿ ಜನಪದ ಗೀತೆ ಹಾಡುವ ಇವರು ಸುವರ್ಣ ಕರ್ನಾಟಕ ಸಂಸ್ಕೃತಿ ದಿಬ್ಬಣದ ಸಂದರ್ಭದಲ್ಲಿ ಕಲಾ ಯಾತ್ರೆಯಲ್ಲಿಯೂ ಭಾಗವಹಿಸಿದ್ದರು.

ಮದಗದ ಕೆಂಚಮ್ಮ, ಗುಣಸಾಗರಿ, ಚಿತ್ರದುರ್ಗದ ಮುರುಘಾಮಠದ ಬಗೆಗೂ ಕಥನ ಗೀತೆ ಹಾಡುವ ಶಾರದಮ್ಮ, ಪ್ರಸಕ್ತ ಜನಪದ ಕಲೆ, ಸಂಸ್ಕೃತಿಯ ಉಳಿವಿಗಾಗಿ

ಶ್ರಮಿಸುತ್ತಿರುವ ಒಳ್ಳೆಯ ಜನಪದ ಸಂಘಟಕಿ, ಶಾಲಾ ಕಾಲೇಜುಗಳಲ್ಲಿ ಜನಪದ ಉಳಿಯಬೇಕೆಂಬ ಬಯಕೆಯನ್ನು ಹೊಂದಿರುವುದು ಈಕೆಯ ವಿಶೇಷತೆ.

ಶಾರದಮ್ಮ, ಕಲಾವಿದೆ,
ಹಾರೋನಹಳ್ಳಿ ಚನ್ನಗಿರಿ ತಾಲೂಕು.

# ಲಾವಣಿ ಬುಡನ್ ಸಾಬ್

ಲಾವಣಿ ಜನಪದ ಸಾಹಿತ್ಯ ಪ್ರಕಾರದಲ್ಲಿ ಪ್ರಸಿದ್ಧವಾದ ಕಲೆ. ಇತಿಹಾಸ, ಕಥನ, ಈ ಎರಡನ್ನೂ ಒಟ್ಟಿಗೆ ಸೇರಿ ಸಾಹಿತ್ಯ ಬೆಳೆಯುತ್ತಾ ಹೋಗುವುದು ಇಲ್ಲಿನ ವಿಶೇಷ. ಹಾಗಾಗಿ ಲಾವಣಿ ಸಾಹಿತ್ಯದಲ್ಲಿ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಟಿಪ್ಪು ಸುಲ್ತಾನ್, ಮಾಗಡಿ ಕೆಂಪೇಗೌಡ, ಇವರು ಪ್ರಸಿದ್ಧರಾಗಿರುವುದು ಲಾವಣಿ ಹಾಡುಗಾರಿಕೆಯಿಂದಲೇ.

ತಮಟೆಯ ಆಕೃತಿಯ, ಅದಕ್ಕೂ ಚಿಕ್ಕದಾದ ಚರ್ಮವಾದ್ಯವನ್ನು ಲಯಕ್ಕೆ ತಕ್ಕ ಹಾಗೆ ಬಾರಿಸುತ್ತಾ ಲಾವಣಿಯ ಶೃತಿಗೆ ಪೂರಕವಾಗಿ ಹಾಡುತ್ತಾ ಸಾಗುವುದು ಲಾವಣಿಯ ವಿಶೇಷವಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಈ ಬಗೆಯ ಲಾವಣಿಕಾರರು ಹಲವರಿದ್ದಾರೆ. ಸಿದ್ದನ ಮಠದ ಯುಗಧರ್ಮ ರಾಮಣ್ಣ, ಪಲವನಹಳ್ಳಿ ಹನುಮಂತಪ್ಪ, ಹರಿಹರದ ಫಕೀರಪ್ಪ, ಮೂಡಲಗೇರಿ ನಾರಾಯಣಪ್ಪ, ಕೆಂಚನಹಳ್ಳಿ ರಾಮಚಂದ್ರಪ್ಪ, ನಿಟ್ಟುವಳ್ಳಿಯ ಬುಡನ್ ಸಾಬ್ ಪ್ರಮುಖರು.

ಲಾವಣಿ ಬುಡನ್‌ಸಾಬ್ ಎಂದೇ ಅನ್ವರ್ಥದಿಂದ ಕರೆಯಲ್ಪಡುವ ಬುಡನ್ ಸಾಬ್, ನಿಟ್ಟುವಳ್ಳಿಯವರು. ಅರವತ್ತರ ಹಂಚಿನಲ್ಲಿರುವ ಈ ಕಲಾವಿದರಿಗೆ ನಾಲ್ವರು ಮಕ್ಕಳು. ರೈತಾಪಿ ಬದುಕು. ಧಾರ್ಮಿಕ ಚಟುವಟಿಕೆ, ಎರಡರಲ್ಲೂ ಭಾಗಿಯಾಗುತ್ತಾರೆ. ಲಾವಣಿ ಕಲೆಯ ಪ್ರಸಾರ ಅಭಿವೃದ್ಧಿಗಾಗಿ ತೊಡಗಿಸಿಕೊಂಡಿರುವ ಬುಡನ್‌ಸಾಬ್ ತಮ್ಮ ದರ್ಗಾಗಳಲ್ಲೂ ಕವಾಲಿಯ ಜೊತೆಗೆ ಮಹಮದ್ ಪೈಗಂಬರ್ ಬಗೆಗೆ, ಟಿಪ್ಪು ಸುಲ್ತಾನ್‌ನ ಬಗೆಗೆ ಚಿತ್ರದುರ್ಗದ ಪಾಳೆಯಗಾರರ ಬಗೆಗೆ ಲಾವಣಿ ಹಾಡುವುದು ಈತನ ಕಲಾ ಬದುಕು.

೩ನೇ ತರಗತಿಯ ತನಕ ಮಾತ್ರ ವ್ಯಾಸಂಗ ಮಾಡಿರುವ ಬುಡನ್ ಸಾಬ್ ಇತಿಹಾಸವನ್ನು ಲಾವಣಿಗಳ ಮೂಲಕ ಕಟ್ಟುವ ಅದನ್ನು ರಾಗಕ್ಕಿಳಿಸಿ, ಲಾವಣಿಯ ಮೂಲಕ ಸೊಗಸಾಗಿ ಹಾಡುವುದು ಈತನ ಉದ್ಯೋಗವೂ ಹೌದು.

ಲಾವಣಿ ಬುಡನ್ ಸಾಬ್ ರೈತಾಪಿ ಬದುಕಿನಲ್ಲೂ ನಿಸ್ಸೀಮರು. ಒಕ್ಕಲ ಮಕ್ಕಳ ನಾಡಿ ಮಿಡಿತವನ್ನು ಚೆನ್ನಾಗಿ ಅರಗಿಸಿಕೊಂಡು ರೈತರಾಗಿ ಉಪಯುಕ್ತ ಕಾಯಕವನ್ನು ಮಾಡುತ್ತಿದ್ದಾರೆ. ಬುಡನ್ ಸಾಬ್ ಚಿತ್ರದುರ್ಗ ಹಾಗೂ ಭದ್ರಾವತಿಯ ಆಕಾಶವಾಣಿಯಿಂದ ಕಳೆದ ಹತ್ತು ವರ್ಷಗಳಿಂದ ಕಾರ್ಯಕ್ರಮ ನೀಡುತ್ತಿದ್ದಾರೆ.

ಲಾವಣಿಗಳಲ್ಲಿ ಕೃಷಿ ಪದ್ಧತಿಯಲ್ಲಿ ಆಧುನಿಕತೆ ರಸಗೊಬ್ಬರದ ನಿಯಂತ್ರಣ, ಸಾವಯವ ಗೊಬ್ಬರದ ಬಳಕೆ, ಮಿತ ಸಂತಾನ, ಪರಿಸರ ಮಾಲಿನ್ಯ ಇವುಗಳ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆಗಾಗಿ ಸದಾ ತುಡಿಯುತ್ತಾ ಲಾವಣಿಗಳನ್ನೇ ಕಟ್ಟಿ ಹಾಡುವುದು ಇವರ ವಿಶೇಷ ಗುಣ.

ಹಿಂದು-ಮುಸ್ಲಿಂ ಎರಡೂ ಸಮುದಾಯಗಳಲ್ಲಿ ಅಪಾರವಾಗಿ ಪ್ರೀತಿಸುವ ಬುಡನ್ ಸಾಬ್, ಒಂದು ಬಗೆಯಲ್ಲಿ ಜನಾಂಗೀಯ ಸೌಹಾರ್ದತೆಯ ಪ್ರತೀಕವಾಗಿದ್ದಾರೆ. ಜಿಲ್ಲಾಡಳಿತ ಚಿತ್ರದುರ್ಗ, ದಾವಣಗೆರೆ ಉತ್ಸವ ಹಾಗೂ ಇತರೆ ಪ್ರಮುಖ ಸಂಘ ಸಂಸ್ಥೆಗಳಿಂದ ಇವರಿಗೆ ಗೌರವ ಸನ್ಮಾನ ದೊರೆತಿದೆ.

ತನ್ನಂತೆ ತನ್ನ ಮಕ್ಕಳ್ಯಾರೂ ಹಾಡುವುದಿಲ್ಲ, ನನ್ನ ಕಲೆಯನ್ನು ಮುಂದುವರಿಸಬೇಕೆಂಬುದು ಬುಡನ್‌ಸಾಬ್‌ರ ಬಯಕೆ. ಕಲೆ ಉಳಿಯಲಿ ಕಲಾವಿದ ಬದುಕಲಿ ಎಂಬುದು ಇವರ ಹಾರೈಕೆ.

**ಲಾವಣಿ ಬುಡನ್ ಸಾಬ್,**
**ನಿಟ್ಟುವಳ್ಳಿ ದಾವಣಗೆರೆ ತಾಲೂಕು.**

## ಚಿಕ್ಕಸಿದ್ಧಪ್ಪ

ಚಿಕ್ಕಸಿದ್ಧಪ್ಪನವರು ಕಿನ್ನರಿ ಜೋಗಿ ಕಲೆಯ ವಿರಳ ಕಲಾವಿದರು. ಚಿತ್ರದುರ್ಗ ಜಿಲ್ಲೆಯ ಎನ್. ದೇವರಹಳ್ಳಿ ನಾಯಕನಹಟ್ಟಿ ಪರಿಸರ ಬಿಟ್ಟರೆ ದಾವಣಗೆರೆ ಜಿಲ್ಲೆಯಲ್ಲಿ ಈ ಕಲಾ ಪ್ರಕಾರದವರು ಸಿಗುವುದು ವಿರಳವೆಂದೇ ಹೇಳಬಹುದು. ಈ ಬಗೆಯ ಕಿನ್ನರಿ ಕಲೆಯ ವಿರಳ ಕಲಾವಿದರಲ್ಲಿ ಚಿಕ್ಕಸಿದ್ಧಪ್ಪ ಒಬ್ಬರು.

ಚನ್ನಗಿರಿ ತಾಲೂಕು ನಲ್ಲೂರು ಗ್ರಾಮದ ಚಿಕ್ಕಸಿದ್ಧಪ್ಪನವರು ಕಳೆದ ನಲವತ್ತು ವರ್ಷಗಳಿಂದಲೂ ಕಿನ್ನರಿ ಜೋಗಿ ಕಲೆಯನ್ನು ಪ್ರಸಾರ ಮಾಡುತ್ತಿದ್ದಾರೆ. ಜೊತೆಗೆ ನಲ್ಲೂರು ಗ್ರಾಮದಲ್ಲಿ ಕಿನ್ನರಿ ಜೋಗಿಗಳ ಕಲಾ ಸಂಘವನ್ನು ಸ್ಥಾಪಿಸಿದ್ದಾರೆ. ಕಿನ್ನರಿ ಒಂದು ಆಕರ್ಷಕ ಕಲೆ. ಮಹಾರಾಜರ ಪೋಷಾಕಿನ ಹಾಗೆ ಆಕರ್ಷಕ ಉಡುಗೆ ತೊಡುಗೆಯ ಜೊತೆಗೆ ತಂತಿ ವಾದ್ಯ, ಬೆರಳಲ್ಲಿ ಕಿರುಗೆಜ್ಜೆಯಿಂದಾಗಿ ಒಂದು ರೋಚಕ ಸಂಗೀತ ಲಹರಿಯನ್ನು ನಿರ್ಮಿಸಿ ಬಿಡುತ್ತದೆ.

ಜೊತೆಗೆ ಮಹಾಭಾರತ, ರಾಮಾಯಣ ಹಾಗೂ ಸ್ಥಳೀಯ ಪುರಾಣಗಳಿಂದ ಆಯ್ದ ಕಥಾನಕಗಳಿಗೆ ಒಂದೊಂದು ಸಂದರ್ಭವನ್ನು ನಿರ್ಮಿಸುತ್ತಾ ವಾದ್ಯದ ಲಯದೊಂದಿಗೆ ಹಾಡುವುದು ಪ್ರೇಕ್ಷಕರಲ್ಲಿ ರೋಮಾಂಚನವನ್ನುಂಟು ಮಾಡುತ್ತದೆ. ಇತ್ತೀಚಿನ ದಿನಗಳಲ್ಲಿ ಇಲ್ಲವಾಗುತ್ತಿರುವ ಕಿನ್ನರ ಜೋಗಿ ಕಲೆಯನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬರುತ್ತಿರುವ ಕಲಾವಿದರೆಂದರೆ ಚಿಕ್ಕಸಿದ್ಧಪ್ಪನವರು.

ನಲ್ಲೂರು ಗ್ರಾಮದ ಜೋಗಿ ಮನೆತನಕ್ಕೆ ಸೇರಿದ ಸಿದ್ಧಪ್ಪನವರ ಮಕ್ಕಳಾದ ಚಿಕ್ಕಸಿದ್ಧಪ್ಪ, ತನ್ನ ತಂದೆ ತಾತನವರ ಕಾಲದಿಂದಲೂ ಕಿನ್ನರ ಜೋಗಿ ಕಲೆಯನ್ನು ರೂಢಿಸಿಕೊಂಡು ಬಂದವರು. ತನ್ನ ತಾತ ದೊಡ್ಡಸಿದ್ಧಪ್ಪ, ಮೈಸೂರು ಮಹಾರಾಜರ

ಕಾಲದಿಂದಲೂ, ಕಿನ್ನರಿಜೋಗಿ ಕಲೆಯನ್ನು ಪ್ರಸಾರ ಮಾಡುತ್ತಾ ಬಂದವರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸುಗ್ಗಿಯ ಕಾಲದಲ್ಲಿ ಹಳ್ಳಿಗಳಿಗೆ ಆಹ್ವಾನದ ಮೇರೆಗೆ ಹೋಗಿ, ಕಿನ್ನರಿ ಜೋಗಿ ಕಲೆಯನ್ನು ರಾತ್ರಿ ಇಡೀ ಹಾಡುತ್ತಿದ್ದವರು.

ತಾತನ ನಂತರ ತಂದೆ ಈಗ ಮಗ, ಈ ಮೂರೂ ತಲೆ ಮಾರು ನಿರಂತರವಾಗಿ ಈ ಕಲೆ ಉಳಿಸಿ ಬೆಳೆಸುತ್ತಾ ಬಂದಿರುವುದು ವಿಶೇಷ.

ಚಿಕ್ಕಸಿದ್ಧಪ್ಪನವರು ಅರ್ಜುನ ಜೋಗಿ ಪ್ರಸಂಗ, ಲವಕುಶರ ಕಥೆ, ಪಾಂಡವರ ವನವಾಸ ಪ್ರಸಂಗ, ಇವುಗಳ ಜೊತೆಗೆ ಸ್ಥಳೀಯ ಜನಪದ ಕತೆಗಳನ್ನು ಆಧರಿಸಿ ಕತೆ ಮಾಡುವುದು, ಹಾಡು ಕಟ್ಟುವುದು ಇವರ ವಿಶೇಷವಾಗಿದೆ.

ಭದ್ರಾವತಿ ಆಕಾಶವಾಣಿ, ಚಿತ್ರದುರ್ಗದ ಆಕಾಶವಾಣಿಗಳಿಂದಲೂ ಇವರ ತಂಡದ ಕಿನ್ನರಿ ಜೋಗಿ ಕಲೆ ಪ್ರಸಾರವಾಗುತ್ತಿದೆ. ಚಿತ್ರದುರ್ಗದ ಉತ್ಸವ, ದಾವಣಗೆರೆ ಜಿಲ್ಲೆ ಕಲೋತ್ಸವ, ಶಿವಮೊಗ್ಗದ ಸಾಂಸ್ಕೃತಿಕ ಮೇಳಗಳಲ್ಲಿ ಇವರು ಭಾಗವಹಿಸಿ ಕಲಾ ಪ್ರದರ್ಶನ ನೀಡಿದ್ದಾರೆ. ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ ನಡೆದ ಮಲೆನಾಡ ಜಾನಪದ ಕಲಾಮೇಳ, ಜಾನಪದ ಸಂಭ್ರಮ, ಉತ್ಸವಗಳಲ್ಲೂ ಇವರು ಭಾಗವಹಿಸಿ ಕಲಾ ಪ್ರದರ್ಶನ ನೀಡಿರುವುದು ವಿಶೇಷ.

ಇವರು ಹಾಡಿರುವ ಜೋಗಿ ಹಾಡುಗಳನ್ನು ಕುವೆಂಪು ವಿಶ್ವವಿದ್ಯಾನಿಲಯದ ಜಾನಪದ ಪ್ರಾಧ್ಯಾಪಕ ಡಾ॥ ಬಸವರಾಜು ನೆಲ್ಲಿಸರ ಸಂಗ್ರಹಿಸಿದ್ದಾರೆ.

**ಚಿಕ್ಕಸಿದ್ಧಪ್ಪ,**
**ನಲ್ಲೂರು, ಚನ್ನಗಿರಿ ತಾಲೂಕು.**

## ಲಕ್ಷ್ಮಪ್ಪ

ಜೋಡಲಗೆಯ ಸರದಾರ ಎಂದೇ ಹೆಸರುವಾಸಿಯಾಗಿರುವ ತಮಟೆಯ ಲಕ್ಷ್ಮಪ್ಪ ಹರಿಹರ ತಾಲೂಕಿನ ಕೊಕ್ಕನೂರು ಗ್ರಾಮದವರು. ತಂದೆ ದಿ॥ ಪರಸಪ್ಪ, ತಾಯಿ ಕೆಂಚಮ್ಮ.

ಇವರು ಇಬ್ಬರು ಗಂಡುಮಕ್ಕಳಾದ ರಾಮಪ್ಪ, ಲಕ್ಷ್ಮಪ್ಪ ಇಬ್ಬರೂ ತಮಟೆ ಕಲಾವಿದರೆ. ಶ್ರೀ ಲಕ್ಷ್ಮಪ್ಪ ತಮಟೆ ಕಟ್ಟುವ, ತಮಟೆ ವಿದ್ಯೆ ಹೇಳಿಕೊಡುವ ಹಾಗೂ ತಮಟೆ ಕಲಾವಿದರನ್ನು ಸಂಘಟಿಸುವ ಕೆಲಸವನ್ನು ಕಳೆದ ಐವತ್ತು ವರ್ಷಗಳಿಂದಲೂ ಮಾಡುತ್ತಾ ಬರುತ್ತಿದ್ದಾರೆ. ಯುವಕರಿಗೂ ತಮಟೇ ಕಲೆಯ ರುಚಿ ಹಿಡಿಸುವ ಮೂಲಕ ಮಕ್ಕಳ ತಮಟೆ ತಂಡವನ್ನು ಕಟ್ಟಿರುವುದು ಇವರ ವಿಶೇಷ.

ಲಕ್ಷ್ಮಣಪ್ಪನವರ ತಂಡದಲ್ಲಿ ೧೨ ತಮಟೆ ಕಲಾವಿದರಿದ್ದು ಅವರೆಲ್ಲರೂ ಶಾಸ್ತ್ರೀಯವಾಗಿ ಏಕಕಾಲದಲ್ಲಿ ತಮಟೆ ಬಾರಿಸುವುದು ವಿಶೇಷವಾಗಿದೆ. ಎಮ್ಮೆಯ ಚರ್ಮದಿಂದ ದೇಶೀ ಶೈಲಿಯಲ್ಲಿ ತಮಟೆವಾದ್ಯ ಸಿದ್ಧ ಪಡಿಸಿಕೊಂಡು ಶುಭಕಾರ್ಯಕ್ಕೆ ನಿಂತರೆ ಅದೊಂದು ಸಂಗೀತದ ರಸಧಾರೆ. ಹನ್ನೆರಡು ಜನರೂ ಒಂದೇ ಲಯ, ಶೃತಿ, ಧಾಟಿ, ವೇಷಭೂಷಣ, ಮಧ್ಯೆ ಸಣ್ಣ ಕುಣಿತವೂ ಇರುತ್ತದೆ. ಹಲವು ಸರ್ಕಸ್‌ಗಳ ಮಾದರಿಯ ಕಲಾ ಪ್ರದರ್ಶನದ ವೈಖರಿ ಇವರಿಗೆ ಸಿದ್ಧಿಸಿದ್ದು ಹಾಗಾಗಿಯೇ ಈ ಭಾಗದಲ್ಲಿ ಜೋಡು ಹಲಗೆ ಕಲೆ ಎಂದೇ ಕರೆಯುವ ಪರಂಪರೆಗೆ ಶ್ರೀ ಲಕ್ಷ್ಮಪ್ಪ ಕಾರಣವಾಗಿದ್ದಾರೆ.

ಲಕ್ಷ್ಮಪ್ಪ-ರಾಮಪ್ಪ ಕೊಕ್ಕನೂರಿನ ದಿ॥ ಪರಸಪ್ಪನವರ ಮಕ್ಕಳು. ಇಬ್ಬರಿಗೂ ೭೦ ವರ್ಷ ವಯಸ್ಸು. ಆದರೂ ತಮಟೆಯನ್ನು ಕೈಲಿ ಹಿಡಿದು ಸಣ್ಣನೆಯ ಉರಿಗೆ ಬಿಸಿ ಮಾಡಿಕೊಂಡು ಹದ ಹಿಡಿದು, ಸಣ್ಣಗೆ ಬಾರಿಸುತ್ತಾ ನಿಂತರೆ ಅಲ್ಲೊಂದು ಕಲಾಜಾತ್ರೆ

ಸೇರುತ್ತದೆ. ೧೨ ಹಲಗೆ, ೧೨ ತಮಟೆ ಬಾರಿಸುವ ಕಲಾವಿದರು ಕೊಡುವುದು ವಿಶಿಷ್ಟವಾದ ಸಂದರ್ಭ.

ಲಕ್ಷ್ಮಪ್ಪನವರ ಕಲಾತಂಡದಲ್ಲಿ ಕೊಕ್ಕನೂರಿನವರೇ ಆದ ದಿ|| ಕಂಟೆಪ್ಪ ದುರ್ಗಮ್ಮನವರ ಮಕ್ಕಳಾದ ಗದ್ದಿಗಪ್ಪ ಸಮಾನ ಆಸಕ್ತಿಯ, ಅನುಭವದ ಕಲಾವಿದರು. ಇವರ್ರಿಗೆ ೮೦ ವರ್ಷ ವಯಸ್ಸು. ತಮಟೆ ಕೈಲಿ ಹಿಡಿದರೆ ಯುವಕರನ್ನೂ ಮೀರಿಸುವ ಉತ್ಸಾಹ.

ಲಕ್ಷ್ಮಪ್ಪನವರ ತಂಡದಲ್ಲಿರುವ ಇತರ ಕಲಾವಿದರೆಂದರೆ ಶಿವಪ್ಪ, ರಾಮಪ್ಪ, ಹನುಮಂತ, ಸಣ್ಣಹನುಮಂತಯ್ಯ, ದೊಡ್ಡಹನುಮಂತಯ್ಯ, ದುರ್ಗಯ್ಯ, ರಾಮಣ್ಣ ಈ ಮೊದಲಾದ ಪಳಗಿದ ಕಲಾವಿದರ ತಂಡವನ್ನು ಸಮರ್ಥವಾಗಿ ಕಟ್ಟಿ ಬೆಳೆಸಿದ ಕೀರ್ತಿ ಶ್ರೀ ಲಕ್ಷ್ಮಪ್ಪನವರಿಗೆ ಸಲ್ಲುತ್ತದೆ. ಇವರಿಗೆ ಗುರು ಹಾಗೂ ಮಾರ್ಗದರ್ಶಕ ತಂದೆ ಪರಸಪ್ಪ ಹಾಗೂ ಮಾವ ಗದ್ದಿಗಪ್ಪನವರು.

ಬಾಲ್ಯದಲ್ಲಿಯೇ ತಮಟೆ ಕಲೆ ರೂಢಿಸಿಕೊಂಡು ಬರುಬರುತ್ತಾ ಅದರಲ್ಲಿಯೇ ವಿಶೇಷ ವರಸೆ ಅಭ್ಯಾಸ ಮಾಡಿ ತಮಟೆ ಕಲೆಗೆ ಹೊಸ ರೂಪು ನೀಡಿರುವು ವಿಶೇಷವಾಗಿದೆ.

ಇವರ ತಮಟೆ ವಾದ್ಯ ಕಾರ್ಯಕ್ರಮ, ಬೆಂಗಳೂರಿನ ಚಂದನ ದೂರದರ್ಶನ, ಸಿರಿಗಂಧ ದೂರದರ್ಶನದಲ್ಲಿ, ಭದ್ರಾವತಿ, ಹೊಸಪೇಟೆ, ಚಿತ್ರದುರ್ಗದ ಆಕಾಶವಾಣಿಗಳಲ್ಲೂ ಪ್ರಸಾರವಾಗಿದೆ.

**ಲಕ್ಷ್ಮಪ್ಪ,**
**ಕೊಕ್ಕನೂರು, ಹರಿಹರ ತಾಲೂಕು.**

## ಮಹೇಶ್ವರಪ್ಪ

ಯಕ್ಷಗಾನ ಭಾಗವಂತಿಕೆ, ಬಯಲು ಸೀಮೆಯ ಗಂಡು ಕಲೆ, ರೌದ್ರ, ವೀರ, ಅದ್ಭುತ, ಶಾಂತ, ಶೋಕ, ಶೃಂಗಾರ, ಹಾಸ್ಯ ಕರುಣ ಹೀಗೆ ನವ ರಸಗಳನ್ನು ಅಭಿನಯದ ಮೂಲಕ ನೀಡುತ್ತಾ ಪ್ರೇಕ್ಷಕರ ಮನದಾಳವನ್ನು ಕಲಕುತ್ತಾ, ಭಾವನೆಗೆ ಪ್ರಚೋದಿಸುತ್ತಾ ಕಥಾ ಸಂದರ್ಭ ಬಹುಕಾಲದವರೆಗೆ ನಿಲ್ಲುವಂತೆ ಮಾಡುವುದು ಯಕ್ಷಗಾನ ಕಲೆಯ ಮಹತ್ವದ ಆಶಯ.

ಬಯಲು ಸೀಮೆ ಪ್ರದೇಶಗಳಾದ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ತುಮಕೂರು, ಕೋಲಾರ, ಹಾಸನ, ಮಂಡ್ಯ, ಮೈಸೂರು ಭಾಗಗಳಲ್ಲಿ ಇಂದಿಗೂ ವಿರಳವಾಗಿರುವ ಈ ಕಲೆ ಮೂಡಲಪಾಯ ಯಕ್ಷಗಾನ, ಬಯಲು ಕತೆ, ಬಯಲಾಟ ಎಂತಲೂ ಕರೆಯುತ್ತಾರೆ. ಸುಗ್ಗಿಯ ಸಂಭ್ರಮವನ್ನು ಹಬ್ಬದ ಉತ್ಸವವನ್ನು, ಬೀಗರ ಆಗಮನದ ಚೇತನವನ್ನು ಯಕ್ಷಗಾನ ಪ್ರದರ್ಶನ ಮೂಲಕ ಆಗು ಮಾಡುವುದು. ಈ ಕಲೆಯ ಪ್ರಮುಖ ಉದ್ದೇಶ. ಮಳೆ, ಬೆಳೆ, ಫಲ, ಸಮೃದ್ಧಿಯ ಸೂಚಕವಾಗಿಯೂ ಯಕ್ಷಗಾನ ಪ್ರದರ್ಶನ ಮಾಡುವುದುಂಟು.

ಈ ಮಹೇಶ್ವರಪ್ಪ ಅವರು ಚನ್ನಗಿರಿ ತಾಲೂಕಿನ ಮೇದಿಕೆರೆ ಗ್ರಾಮದವರು. ಅರವತ್ತು ವರ್ಷಗಳನ್ನು ಪೂರೈಸಿರುವ ಹಿರಿಯ ಕಲಾವಿದರು. ಇವರ ತಂದೆ ಈಶ್ವರಪ್ಪನವರೂ ಯಕ್ಷಗಾನ ಕಲೆಯ ಹಿಮ್ಮೇಳ ಭಾಗವತರು. ಮೃದಂಗ ವಿದ್ವಾಂಸರು.

ಪ್ರಾಥಮಿಕ ಶಿಕ್ಷಣ ಪಡೆದಿರುವ ಮಹೇಶ್ವರಪ್ಪ, ಬಾಲ್ಯದಿಂದಲೇ ಯಕ್ಷಗಾನ ಕಲೆಯ ಬೆನ್ನುಹತ್ತಿದರು. ತಮ್ಮ ಗ್ರಾಮದಲ್ಲಿ ಪ್ರದರ್ಶನವಾಗುತ್ತಿದ್ದ ಶಿವಕಥೆ, ದಕ್ಷ ಬ್ರಹ್ಮ, ಗಿರಿಜಾ ಕಲ್ಯಾಣ, ಮೋಹಿನಿ, ಭಸ್ಮಾಸುರ, ಲಂಕಾದಹನ ಈ ಮೊದಲಾದ ಪ್ರಸಂಗಗಳಲ್ಲಿ

ಬಾಲಪಾತ್ರದಲ್ಲಿ ಆರಂಭಿಕ ಅಭಿನಯ ನೀಡಿದರು. ನಂತರ ಮೃದಂಗದ ಅಭ್ಯಾಸವೂ ಆಗಿ ಮುಂದೆ, ತಂದೆಯೊಂದಿಗೆ ಇವರೂ ಹಿಮ್ಮೇಳ ಭಾಗವಂತಿಕೆ ಮಾಡಗೊಡಗಿದರು. ಮುಂದೆ ೧೯೭೦ರಿಂದ ಸ್ವತಃ ಭಾಗವತರಾಗಿ ಯಕ್ಷಗಾನ ಕಲಿಸುತ್ತಾ ಬರುತ್ತಿದ್ದಾರೆ.

ಮಹೇಶ್ವರಪ್ಪ ಯಕ್ಷಗಾನ ಮಟ್ಟುಗಳನ್ನು ಕಂದಗಳನ್ನು ರಚಿಸುವ ಪ್ರತಿಭೆಯನ್ನು ಹೊಂದಿದ್ದಾರೆ. ಮೂಲ ಕಥೆಗೆ ಬೇಕಾದ ಸಾಂದರ್ಭಿಕ ಮಟ್ಟುಗಳನ್ನು ಕಂದ ಪದ್ಯಗಳನ್ನು ಯಕ್ಷಗಾನ ದಾಟಿಯಲ್ಲಿ ರಚಿಸಿ, ಪ್ರದರ್ಶನಗಳಲ್ಲಿ ಬಳಸಿಕೊಳ್ಳುವುದು ವಿಶೇಷವಾಗಿದೆ.

ಶಿವಜಲಂಧರ, ಗಿರಿಜಾ ಕಲ್ಯಾಣ, ಲವಕುಶರ ಕಾಳಗ, ಪಾಂಡು ವಿಜಯ, ಕರ್ಣಾರ್ಜುನರ ಕಾಳಗ, ಇವರು ನಿರ್ದೇಶಿಸಿ, ಪ್ರದರ್ಶಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು, ನೃತ್ಯ, ಹಾಡು, ಮತ್ತು ತೀರಾ ಹಳೆಯದಾಗಿ, ಜನರಿಗೆ ಅರ್ಥವಾಗುವಲ್ಲಿ ತೊಂದರೆಯಾಗದಂತೆ ಸಾಂದರ್ಭಿಕ ದೃಶ್ಯ ನಿರ್ಮಿಸುವ, ಇವರ ಯಕ್ಷಗಾನ ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಶಿವರಾತ್ರಿ, ರಾಮನವಮಿ, ಯುಗಾದಿ ಹಬ್ಬಗಳ ಸಂದರ್ಭದಲ್ಲಿ, ಶ್ರಾವಣ ಹಾಗೂ ಕಾರ್ತಿಕ ಮಾಸದಲ್ಲೂ ಯಕ್ಷಗಾನ ಪ್ರದರ್ಶಿಸುತ್ತಿದ್ದರು. ಆದರೆ ಈಗ ಜನರ ಅನಾಸಕ್ತಿಯಿಂದಾಗಿ ಈ ಕಲೆ ಸೊರಗುತ್ತಿದೆ ಎನ್ನುವ ಮಹೇಶ್ವರಪ್ಪನವರು ಸರ್ಕಾರ ಯಕ್ಷಗಾನ ಉಳಿಸುವುದಕ್ಕೆ ಏನಾದರೂ ಯೋಜನೆ ಹಾಕಿಕೊಳ್ಳಬೇಕೆನ್ನುತ್ತಾರೆ.

ಕೈತುಂಬಾ ರೈತಾಪಿ ಬದುಕು, ಮಕ್ಕಳ ಜವಾಬ್ದಾರಿ, ಇವುಗಳ ಮಧ್ಯೆಯೂ ನೆರೆಯ ಗ್ರಾಮಗಳಿಗೆ ಹೋಗಿ ಯಕ್ಷಗಾನ ಕಲಿಸುತ್ತಾ, ಯಕ್ಷಗಾನ ಕಲಾ ಪ್ರಸಾರಕ್ಕೆ ತಮ್ಮದೇ ಆದ ಮೌಲಿಕ ಕೊಡುಗೆ ನೀಡಿರುವ ಮಹೇಶ್ವರಪ್ಪ, ಈ ಭಾಗದಲ್ಲಿ ಮರೆಯಾಗುತ್ತಿರುವ, ವಿರಳವಾಗಿರುವ ಯಕ್ಷಗಾನ ಕಲಾವಿದ, ಭಾಗವತ ಮಹೇಶ್ವರಪ್ಪ.

**ಎನ್. ಇ. ಮಹೇಶ್ವರಪ್ಪ,**
**ಮೇದಿಕೆರೆ, ಚನ್ನಗಿರಿ ತಾಲೂಕು.**

## ಎಂ.ಎಸ್. ವೀರಪ್ಪ

ನಂದಿಕೋಲು ಅಥವಾ ನಂದಿಧ್ವಜ ಎಂದು ಕರೆಯುವ ಈ ಕೋಲು ಸ್ವಯಂ ಶಿವನೇ ಎಂದು ಭಾವಿಸುವುದು ಜನಪದರ ನಂಬಿಕೆ ಪ್ರಧಾನವಾಗಿ ವೀರಶೈವ ಸಂಪ್ರದಾಯದಲ್ಲಿ ಯಾವುದೇ ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳಲ್ಲಿ ನಂದಿಪೂಜೆ ಅಥವಾ ವೀರಭದ್ರನ ಪೂಜೆ ಮೊದಲು ನೆರವೇರುತ್ತದೆ. ನಂದಿಪೂಜೆ ನಂದಿಧ್ವಜವಾಗಿ, ವೀರಭದ್ರನ ಪೂಜೆ, ವೀರಭದ್ರನ ಕುಣಿತ ಅಥವಾ ಲಿಂಗದಬೀರರ ಕತೆಯಾಗಿ ಕಲೆಯಾಗಿದೆ. ಹಾಗಾಗಿ ಈ ಎರಡೂ ಕಲೆಗಳು ಶಿವನಿಗೆ ಪ್ರಿಯವಾದ ಕಲೆ ಎಂತಲೇ ಪರಿಭಾವಿಸಲಾಗಿದೆ.

ನಂದಿಧ್ವಜ ೧೫ ರಿಂದ ೨೦ ಅಡಿ ಎತ್ತರದ ಬಿದಿರುಗಳು. ಇದಕ್ಕೆ ಕಂಚು ಇಲ್ಲವೇ ಹಿತ್ತಾಳೆಯಿಂದ ಮಾಡಿಸಿದ ಹಿಡಿ ಕಟ್ಟು ಅಥವಾ ಮೇಲು ಹೊದಿಕೆ. ಗಳದ ತುದಿಯಲ್ಲಿ ಉದ್ದನೆಯ ಕೆಂಪು ವಸ್ತ್ರ ಧ್ವಜವಾಗಿ ಇಳಿಬಿಡಲಾಗುತ್ತದೆ. ಧ್ವಜದ ಕೆಳಭಾಗದಲ್ಲಿ ನಂದಿಯ ಆಕೃತಿಯ ಕಂಚಿನ ವಿಗ್ರಹವನ್ನು ಗಳಕ್ಕೆ ಲಗತ್ತಿಸಿ, ದಾರದಿಂದ ಬಿಗಿದು ಕಟ್ಟಲಾಗುತ್ತದೆ.

ಬಗಲ ಮೇಲೆ ಉದ್ದನೆಯ ಚೀಲವನ್ನು ಹಾಕಿಕೊಂಡು ನಂದಿಧ್ವಜವನ್ನು ಆ ಚೀಲದ ಒಳಗೆ ಸಿಕ್ಕಿಸಿಕೊಂಡು ಚಮ್ಮೇಳ, ಕರಡಿ ಮಜಲು, ನಾಗಸ್ವರ ಈ ಬಗೆಯ ವಾದ್ಯಗಳ ತಾಳ, ಲಯ, ಮಾಧುರ್ಯಕ್ಕೆ ತಕ್ಕಂತೆ ಅರ್ಥಪೂರ್ಣ ನಂದಿಧ್ವಜವನ್ನು ಕುಣಿಸಲಾಗುತ್ತದೆ.

ಎಂ. ಎಸ್. ವೀರಪ್ಪ, ಚನ್ನಗಿರಿ ತಾಲ್ಲೂಕಿನ ನೀತಿಗೆರೆ ಗ್ರಾಮದವರು. ೬೫ರ ವಯೋಮಿತಿಯ ಈ ಕಲಾವಿದರ ತಂದೆ ಶ್ರೀ ಶಿವಲಿಂಗಪ್ಪನವರೂ ಒಳ್ಳೆಯ ನಂದಿಧ್ವಜ,

ಚಮ್ಮೇಳ ಕಲಾವಿದರು. ಹತ್ತು ಜನರ ಕಲಾ ತಂಡದೊಂದಿಗೆ ಹಲವು ಕಡೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಿರುವುದು ಇವರ ವಿಶೇಷ.

ವೀರಪ್ಪನವರು ಮಾಧ್ಯಮಿಕ ಶಾಲೆಯ ಹಂತದವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಕೃಷಿ ಕಾಯಕದ ಜೊತೆಗೆ ಹವ್ಯಾಸಿಯಾಗಿ ನಂದಿಧ್ವಜದ ಕುಣಿತದ ಕಲೆಯನ್ನು ಕಳೆದ ೩೦ಕ್ಕೂ ಹೆಚ್ಚು ವರ್ಷಗಳಿಂದಲೂ ಪ್ರದರ್ಶಿಸುತ್ತಾ ಬರುತ್ತಿದ್ದಾರೆ.

ನಂದಿಧ್ವಜ ಕುಣಿಸುವುದು ಒಂದು ಕಲೆ. ಉದ್ದನೆಯ ಹಾಗೂ ಭಾರವಾದ ಧ್ವಜವನ್ನು ಎತ್ತಿಹಿಡಿದು ಎದೆಗೆ ಆನಿಸಿಕೊಂಡು ಒಂದೇ ಕೈಯಲ್ಲಿ ಹಿಡಿದು ವಾದ್ಯಗಳ ಲಯಕ್ಕೆ ತಕ್ಕಹಾಗೆ ನಂದಿಧ್ವಜದ ಲಯ, ಹೆಜ್ಜೆಯ ಲಯ ಎರಡೂ ಸೇರಿ ಕುಣಿಯಬೇಕು. ಹಾಗಾಗಿಯೇ ಶ್ರಮ ಸಾಧ್ಯವಾದ ಈ ಕಲೆಯನ್ನು ಇಂದಿಗೂ ನೋಡುವುದು ದುರ್ಲಭವಾಗುತ್ತಿದೆ.

ಇಂಥ ಪರಿಶ್ರಮದ ಕಲೆಗೆ ತಾತ್ವಿಕವಾಗಿ ದಾವಣಗೆರೆ ಜಿಲ್ಲೆಯಲ್ಲಿ ಒಂದು ರೂಪು ನೀಡಿದ ಹಿರಿಮೆ ನೀತಿಗೆರೆ ವೀರಪ್ಪ ಅವರಿಗೆ ಸಲ್ಲುತ್ತದೆ.

ವೀರಪ್ಪನವರು ಈ ಕಲೆಯನ್ನು ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ ಈ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಲ್ಲಿ ಏರ್ಪಡಿಸುವ ಪ್ರಮುಖ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ. ಚಿತ್ರದುರ್ಗದ ಮುರುಘಾಮಠ, ಸಿರಿಗೆರೆಯ ತರಳಬಾಳು ಮಠ, ಹೊನ್ನಾಳಿ ಮಠಗಳ ಧಾರ್ಮಿಕ ಸಮಾರಂಭದಲ್ಲಿ ತಪ್ಪದೆ ಕಾರ್ಯಕ್ರಮ ನೀಡುತ್ತಿರುವುದು ಇವರ ವಿಶೇಷ.

ಎಂ. ಎಸ್. ವೀರಪ್ಪ,
ನೀತಿಗೆರೆ, ಚನ್ನಗಿರಿ ತಾಲೂಕು.

## ಜಿ. ಆರ್. ವೀರಣ್ಣ

ಸೂತ್ರದ ಗೊಂಬೆ, ತೊಗಲು ಗೊಂಬೆ, ಒಂದು ಕಾಲದ ಚಲನ ಚಿತ್ರಗಳು. ಚಲನ ಚಿತ್ರಗಳ ವಿಕಾಸಕ್ಕೆ ಇವುಗಳೇ ಮೂಲ ಆಧಾರ ಎಂದು ಹೇಳಲಾಗುತ್ತಿದೆ. ಸಣ್ಣ ಸಣ್ಣ ಬಿದಿರು ಕಡ್ಡಿಗಳಿಂದ ತಯಾರಿಸಿದ ಪೌರಾಣಿಕ, ಐತಿಹಾಸಿಕ, ವ್ಯಕ್ತಿಗಳ ಚಿತ್ರವನ್ನು ದಾರದ ಸಹಾಯದಿಂದ ಕೈ ಕೀಲು, ಕಾಲು ಕೀಲುಗಳು, ತಲೆ, ಎದೆ, ಸೊಂಟಗಳಿಗೆ ದಾರ ಪೋಣಿಸಿ, ಅವುಗಳನ್ನು ಕಥಾ ಪ್ರಸಂಗಕ್ಕೆ ಹೊಂದಿಸಿಕೊಂಡು ರಾತ್ರಿ ಪ್ರದರ್ಶನ ನೀಡುವ ಹಳ್ಳಿ ಮುಂಭಾಗ, ದೇವಾಲಯದ ಸಮೀಪ, ಪುಟ್ಟ ಗೂಡಿನಂತಹ ಚಪ್ಪರ ಹಾಕಿ, ಅದಕ್ಕೆ ಬಿಳಿ ಪಂಚೆಯ ಪರದೆ ಮಾಡಿಕೊಂಡು, ಪರದೆಯ ಹಿಂದಿನಿಂದ ಲಾಟೀನ್ ಅಥವಾ ಬಲ್ಬಿನ ದೀಪದ ಬೆಳಕಿನಲ್ಲಿ ಗೊಂಬೆಗಳನ್ನು ಸೂತ್ರ ಅಂದರೆ ದಾರದಿಂದ ಕುಣಿಸುವುದನ್ನು ಸೂತ್ರ ಗೊಂಬೆ ಆಟ ಎಂದು ಕರೆಯಲಾಗುವುದು.

ಹಿಂದಿನಿಂದ ಪಾತ್ರ, ಸಂದರ್ಭಕ್ಕೆ ಅನುಗುಣವಾಗಿ ಮಾತು, ಸಂಭಾಷಣೆ, ಹಾಡುಗಳು, ಸಂಗೀತ, ಪರಿಕರಗಳ ಸಮೇತ ಇರುತ್ತದೆ. ಇದೊಂದು ಗ್ರಾಮೀಣರಿಗೆ ಅಚ್ಚು ಮೆಚ್ಚಿನ ಕಲೆ. ಆದರೆ ಆಧುನಿಕ ಪರಿಸರದಲ್ಲಿ ಇಂಥ ಜನ ಮೆಚ್ಚುವ ಕಲೆ ಇಲ್ಲವಾಗುವುದು ಅಪಾಯಕರ ಸಂಗತಿಯಾಗಿದೆ.

ಹಲುವಾಗಲೂ ವೀರಣ್ಣನವರು ಸೂತ್ರ ಗೊಂಬೆ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಅಪಾರ ಕಾಳಜಿ ಹೊಂದಿರುವ ಕಲಾವಿದರು. ಹಲವಾಗಲು ಸೂತ್ರದ ಗೊಂಬೆ, ತೊಗಲು ಗೊಂಬೆ ತಯಾರಿಕೆ, ಪ್ರದರ್ಶನ ಎರಡಕ್ಕೂ ಪ್ರಸಿದ್ಧಿಯಾಗಿದೆ. ಇದೇ ಗ್ರಾಮದ ದೇವೇಂದ್ರಪ್ಪನವರು ಈ ಕಲೆಯಿಂದಾಗಿ ರಾಷ್ಟ್ರೀಯ ಪುರಸ್ಕಾರ ಪಡೆದವರು. ಪಂಜಾಬ್, ಭೂಪಾಲ್, ಮದ್ರಾಸ್, ದೆಹಲಿ, ಬಾಂಬೆ ಇಲ್ಲೆಲ್ಲಾ ಸರ್ಕಾರದ ಆಹ್ವಾನಿತ ಕಲಾವಿದರಾಗಿ

ತಿರುಗಾಟದ ಮೂಲಕ ಸೂತ್ರದ ಗೊಂಬೆ ಕಲೆಯನ್ನು ಪ್ರದರ್ಶಿಸಿ ಬಂದಿರುವುದು ಹೆಮ್ಮೆಯ ಸಂಗತಿ.

ಜಿ. ಆರ್. ವೀರಣ್ಣನವರೂ ಇದೇ ಕುಟುಂಬದ ಹಿನ್ನೆಲೆಯಿಂದ ಬಂದವರು. ಪರಂಪರಾಗತ ಕಲೆಯನ್ನು ಮುಂದುವರಿಸುವ ದೀಕ್ಷೆ ತೊಟ್ಟವರು, ಜೊತೆಗೆ ಸೂತ್ರದ ಗೊಂಬೆ ಕಲೆಗೆ ಹೊಸ ಹೊಸ ಆವಿಷ್ಕಾರಗಳ ಮೂಲಕ ಮತ್ತೊಮ್ಮೆ ಈ ಕಲೆಯನ್ನು ಜನಪ್ರಿಯ ಕಲೆಯನ್ನಾಗಿಸಬೇಕೆಂಬ ಅಚಲ ವಿಶ್ವಾಸ ಹೊಂದಿದವರು.

೧೯೬೩ ರಲ್ಲಿ ದೇವೇಂದ್ರಪ್ಪನವರು ಆರಂಭಿಸಿದ ಆದಿಶಕ್ತಿ ಗೊಂಬೆ ಆಟ ಮಂಡಳಿಯ ಸದಸ್ಯರಾಗಿ, ಆ ಮಂಡಳಿ ಪ್ರದರ್ಶಿಸುತ್ತಿದ್ದ ನಾಟಕಗಳಲ್ಲಿ ಹಿನ್ನೆಲೆ ಸಂಗೀತ ಕಲಾವಿದರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ರಾಮ-ರಾವಣರ ಯುದ್ಧ, ಗಿರಿಜಾ ಕಲ್ಯಾಣ, ಸೀತಾಪಹರಣ, ದುಶ್ಯಾಸನ ಕತೆ, ಗಜಗೌರಿ ವ್ರತ, ಸೀತಾ ಸ್ವಯಂವರ ಇವರು ಪ್ರದರ್ಶಿಸುವ ಪ್ರಮುಖ ಸೂತ್ರದ ಗೊಂಬೆ ಆಟಗಳು.

ಹರಪನಹಳ್ಳಿ, ದಾವಣಗೆರೆ, ಕೊಟ್ಟೂರು, ಹೊಸಪೇಟೆ, ಧಾರವಾಡ, ರಾಣಿಬೆನ್ನೂರು, ಹಾವೇರಿ ಈ ಸ್ಥಳಗಳಲ್ಲಿ ಸೂತ್ರದ ಗೊಂಬೆ ಕಲಾ ಮೇಳವನ್ನು ಕನ್ನಡ ಸಂಸ್ಕೃತಿ ಇಲಾಖೆಯ ಮೂಲಕ ಏರ್ಪಡಿಸಿದ್ದಾರೆ. ಇದಲ್ಲದೆ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಹಲವು ಕಡೆ ಇವರ ಸೂತ್ರದ ಗೊಂಬೆ ಪ್ರದರ್ಶನ ಏರ್ಪಾಡಾಗಿದೆ.

ಅವತ್ತರ ಗಡಿ ದಾಟುತ್ತಿರುವ ಈ ಅಪರೂಪದ ಹಿರಿಯ, ಸೂತ್ರದ ಗೊಂಬೆ ಕಲಾವಿದನ, ಸಾಹಸಕ್ಕೆ ಗೊಂಬೆ ಕಲೆಯ ಉಳುವಿಗೆ ಸರ್ಕಾರ ಸಾರ್ವಜನಿಕ ಬೆಂಬಲ, ಸಹಕಾರ ಕೋರುತ್ತಿದ್ದಾರೆ. ಇದರ ಅಗತ್ಯವೂ ತುರ್ತಾಗಿದೆ.

**ಜಿ. ಆರ್. ವೀರಣ್ಣ,**
**ಹಲುವಾಗಲು ಗ್ರಾಮ, ಹರಪನಹಳ್ಳಿ ತಾಲೂಕು.**

## ನರಸಿಂಹಮೂರ್ತಿ

ಡೊಳ್ಳು ಕಲೆಯನ್ನು ವಂಶವಾಹಿ ಕಲೆಯಾಗಿ ರೂಢಿಸಿಕೊಂಡು ಬರುತ್ತಿರುವ ಕಲಾವಂತ ಕುಟುಂಬ ಆರುಂಡಿ ನರಸಿಂಹಮೂರ್ತಿ ಅವರದು. ತಾತ, ತಂದೆಯವರೂ ಡೊಳ್ಳು ಕಲೆಯನ್ನು ದೈವ ಕಲೆಯಾಗಿ ಊರಿನ ಆಂಜನೇಯ, ಬೀರೇಶ್ವರ ದೇವಾಲಯಗಳ ಪೂಜೆ ಉತ್ಸವ, ಜಾತ್ರೆ, ಮೊದಲಾದ ಧಾರ್ಮಿಕ ಸಮಾರಂಭ ಮಾತ್ರ ಡೊಳ್ಳು ಕಲೆಯನ್ನು ಪ್ರದರ್ಶಿಸುತ್ತಾ ಬಂದರು. ಆದರೆ ಅದಕ್ಕೊಂದು ಹೊಸ ಆಕೃತಿ ನೀಡಿ, ಡೊಳ್ಳು ಕಲೆಯನ್ನು ಮನರಂಜನೆ, ಕಲಾ ಸ್ಪರ್ಧೆಗೆ ಒಡ್ಡಿದ್ದು ನರಸಿಂಹಮೂರ್ತಿ ಅವರು.

ನರಸಿಂಹಮೂರ್ತಿ ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಬೀರೇಶ್ವರ ಡೊಳ್ಳು ಕಲಾ ತಂಡವನ್ನು ಕಟ್ಟಿ, ಸುಮಾರು ಇಪ್ಪತ್ತು ಯುವಕರಿಗೆ ಸಮರ್ಪಕವಾಗಿ ಡೊಳ್ಳು ಕಲಾ ತಂಡವನ್ನು ಕಟ್ಟಿ, ಸುಮಾರು ಇಪ್ಪತ್ತು ಯುವಕರಿಗೆ ಸಮರ್ಪಕವಾಗಿ ಡೊಳ್ಳು ಕಲೆಯನ್ನು ಕಲಿಸುವ, ಪ್ರಸಾರ ಮಾಡುವ ಕಾಯಕವನ್ನು ಕೈಗೊಂಡಿದ್ದಾರೆ.

ಕೃಷಿ ಬದುಕಿನ ನರಸಿಂಹಮೂರ್ತಿಗೆ ಡೊಳ್ಳು ಕಲೆ ಹವ್ಯಾಸಿ ಕಲೆ, ಆದರೂ ಗಣಪತಿ ಉತ್ಸವ, ರಾಜ್ಯೋತ್ಸವ ಹಾಗೂ ಸರ್ಕಾರಿ, ಖಾಸಗಿ ಸಮಾರಂಭಗಳಿಗೆ ತಮ್ಮ ತಂಡದೊಂದಿಗೆ ಹೋಗಿ ಪ್ರದರ್ಶನ ನೀಡಿ ಬರುವುದು ಇವರ ಕಾಯಕವಾಗಿದೆ.

ಬೀರೇದೇವರ ಭಕ್ತರು ಮಾತ್ರ ಡೊಳ್ಳು ಕಟ್ಟುವ, ಬಡಿಯುವ ಕಾಯಕವಾಗಬೇಕು. ಅದನ್ನು ಬಿಟ್ಟು, ಅವಕಾಶ, ಹಣ ಸಂಪಾದನೆಯ ದಂಧೆಗೆ ಬೇಕು ಬೇಕಾದವರೆಲ್ಲರೂ ಡೊಳ್ಳು ಕಲೆಯನ್ನು ವ್ಯಾಪರೀಕರಣ ಮಾಡಿಕೊಳ್ಳುವುದು ಸರಿಯಲ್ಲ ಎನ್ನುವ

ನರಸಿಂಹಮೂರ್ತಿ, ತಮ್ಮ ಗ್ರಾಮದ ಸಮೀಪದ ಹಲವು ಯುವಕರಿಗೆ, ಡೊಳ್ಳು ಕಲೆಯನ್ನು ಉಚಿತವಾಗಿ ಹೇಳಿ ಕೊಡುತ್ತಿರುವುದು ಇವರ ವಿಶೇಷತೆ.

ತಮ್ಮ ತಂದೆ ಇಡೀ ಬೀರೇದೇವರ ಪುರಾಣವನ್ನು ಕರಗತ ಮಾಡಿಕೊಂಡು ಬಂದವರು. ಡೊಳ್ಳಿನ ಪದಗಳನ್ನು ಹೇಳುತ್ತಲೇ. ಆದರೆ ಸಭೆ ಸಮಾರಂಭಗಳಲ್ಲಿ ನಮ್ಮ ಹಾಡಿಗಿಂತ ಕುಣಿತಕ್ಕೆ ಮಹತ್ವ ಎನ್ನುವ, ನರಸಿಂಹಮೂರ್ತಿ ಅವರು ಹೀಗಾಗಿಯೇ ಡೊಳ್ಳಿನ ಪದ, ಈ ಮೂಲಕ ಬೀರೇದೇವರ ಪುರಾಣ, ಕತೆ ಜನಪದರಿಂದ ಅಳಸಿ ಹೋಗುತ್ತವೆ ಎನ್ನುತ್ತಾರೆ.

ಅರುಂಡಿಯ ಮಾಧ್ಯಮಿಕ ಶಾಲೆಯ ಮಕ್ಕಳಿಗೆ ಡೊಳ್ಳು ಕಲೆಯನ್ನು ಕಲಿಸಿ, ಹೊನ್ನಾಳಿಯಲ್ಲಿ ಪಡೆದ ಪ್ರತಿಭಾ ಕಾಲೇಜಿನಲ್ಲಿ ಬಹುಮಾನ ಪಡೆದ ಹಿರಿಮೆಯೂ ಇವರಿಗೆ ಸಲ್ಲುತ್ತದೆ. ಜೊತೆಗೆ ಡೊಳ್ಳು ಕಲೆಯನ್ನು ಸರ್ಕಾರ ನಿರ್ಲಕ್ಷಿಸುತ್ತಿದೆ ಎಂಬ ಆರೋಪವನ್ನು ಮಾಡುತ್ತಾರೆ.

ಭದ್ರವಾತಿ, ಅಜ್ಜಂಪುರ, ತರೀಕೆರೆ, ಚಿತ್ರದುರ್ಗ, ಹೊನ್ನಾಳ್ಳಿ, ಹರಿಹರ, ಕಾಗಿನೆಲೆ, ಹೊಸದುರ್ಗ, ದಾವಣಗೆರೆ, ಇಲ್ಲಿ ನಡೆದ ಸಮಾರಂಭಗಳಲ್ಲಿ ತಮ್ಮ ತಂಡದೊಂದಿಗೆ ಹೋಗಿ ಕಲಾ ಪ್ರದರ್ಶನ ನೀಡಿ ಬಂದಿದ್ದಾರೆ.

ಡೊಳ್ಳು ಕಟ್ಟುವ, ರಿಪೇರಿ ಕೆಲಸವನ್ನು ಮಾಡುತ್ತಿರುವ ಈ ಕಲಾವಿದ, ಡೊಳ್ಳು ಕಟ್ಟುವುದಕ್ಕಾಗಲಿ, ರಿಪೇರಿಗಾಗಲೀ ವಿಶೇಷ ಖರ್ಚು ಮಾಡದೆ, ಚರ್ಮ, ಬಿಳಿ ಪಟ್ಟಿ, ಮತ್ತಿತರ ಸಣ್ಣ ಪುಟ್ಟ ಖರ್ಚುಗಳನ್ನು ಮಾತ್ರ ತೆಗೆದುಕೊಂಡು ಡೊಳ್ಳು ಕಟ್ಟಿಕೊಡುವುದು ಈತನ ವಿಶೇಷವಾಗಿದೆ.

**ನರಸಿಂಹಮೂರ್ತಿ,**
**ಆರುಂಡಿ ಗ್ರಾಮ, ಹೊನ್ನಾಳಿ ತಾಲೂಕ.**

# ಪಾಪಮ್ಮ

ಸೋಬಾನೆ ಕಲೆಗೆ ಹೆಸರು ವಾಸಿಯಾಗಿರುವ ಪಾಪಮ್ಮನವರು ದಾವಣಗೆರೆ ತಾಲೂಕಿನ ಮಲ್ಲಾಪುರ ಗ್ರಾಮದವರು. ಅನಕ್ಷರಸ್ಥೆಯಾದ ಇವರು, ಜನಪದ ಸಂಗೀತದ ಎಲ್ಲಾ ಪ್ರಕಾರಗಳಲ್ಲೂ ಹಾಡುವುದು ಈಕೆಯ ವಿಶೇಷ. ತಾನು ಹುಟ್ಟಿದ್ದು ಬೆಳೆದು ಮದುವೆಯಾದದ್ದು ಇದೇ ಮಲ್ಲಾಪುರ ಗ್ರಾಮ. ರೈತಾಪಿ ಬದುಕಿನ ಮನೆ, ಅತ್ತೆಯೂ ಸೋಬಾನೆ ಪದ ಹಾಡುತ್ತಿದ್ದರು. ಹಾಗಾಗಿ ನಾನು ಬಾಲ್ಯದಲ್ಲಿ ಕಲಿತ ಪದಗಳಿಗೆ ಮುಂದೆಯೂ ಒಳ್ಳೆಯ ಪ್ರಚಾರಸಿಕ್ಕಿತು ಎನ್ನುತ್ತಾರೆ ಪಾಪಮ್ಮ.

ಪಾಪಮ್ಮನವರಿಗೆ ಅರವತ್ತು ವರ್ಷ ವಯಸ್ಸು. ಕಳೆದ ಹತ್ತು ವರ್ಷಗಳಿಂದಲೂ ಚಿತ್ರದುರ್ಗದ ಆಕಾಶವಾಣಿಯಿಂದ ಜನಪದ ಸಂಗೀತ, ಸೋಬಾನೆ ಪದ ಹಾಡುತ್ತಾ ಬರುತ್ತಿದ್ದಾರೆ. ಇವರೊಂದಿಗೆ ನಾಲ್ವರು ಹೆಂಗಸರ ತಂಡವೂ ಇದೆ. ಆದರೆ ಹಿಮ್ಮೇಳ, ಮುಮ್ಮೇಳ ಎರಡನ್ನೂ ಪಾಪಮ್ಮ ಹಾಡುತ್ತಾರೆ. ಸೊಲ್ಲು ತಿರುಗಿಸಿಕೊಳ್ಳಲು ಮಾತ್ರ ಹಿಮ್ಮೇಳದ ಅವಶ್ಯಕತೆ ಎಂದು ಹೇಳುವ ಇವರಿಗೆ ಜೊತೆಗೆ, ಈ ಕಲಾವಿದೆ ಹೆಂಗಸರನ್ನು ಕರೆದೊಯ್ಯುವುದು ತ್ರಾಸದಾಯಕ. ಒಬ್ಬರು ಬಂದರೆ ಇನನೊಬ್ಬರು ಬರುವುದಿಲ್ಲ. ಎಷ್ಟೋ ಬಾರಿ ಆಕಾಶವಾಣಿಗೂ ನಾನೊಬ್ಬಳೇ ಹೋಗಿ ಗುಣ್ಯಮ್ಮ ಅಂದರೆ ಗುಣಸಾಗರಿ, ಕತೆ ಮಾಡಿ ಬಂದಿದ್ದೇನೆ ಅನ್ನುತ್ತಾರೆ.

ಪಾಪಮ್ಮನವರು, ಗುಣಸಾಗರಿ, ಮದುಗದ ಕೆಂಚಮ್ಮ, ಗುಂಟನೂರು ದ್ಯಾನಮ್ಮ, ಗೌರಸಂದ್ರದ ಮಾರಮ್ಮ, ದುರ್ಗಮ್ಮ ಇವರುಗಳ ಮೇಲೆ ಕಥನ ಗೀತೆಗಳನ್ನು ಹಾಡುತ್ತಾರೆ. ಚಿತ್ರದುರ್ಗದ ಪಾಳೆಯಗಾರರಲ್ಲಿ ಮದಕರಿನಾಯಕನನ್ನು ಕುರಿತು ಒಂದಿಷ್ಟು ಪದ ಹಾಡುತ್ತಾರೆ. ಅದೆಲ್ಲವೂ ಕೋಲು ಪದದ ಧಾಟಿಯಲ್ಲಿರುತ್ತದೆ. ಮದಕರಿ ನಾಯಕ ಸೂಳೆ ಮನೆಗೆ ಹೋದ ಪರಸಂಗ, ಏಕನಾಥೇಶ್ವರಿ ಮಹಿಮೆ, ಮುರುಘಾಮಠಕ್ಕೆ ಒಕ್ಕಲಾದ

ಪ್ರಸಂಗದ ಅಷ್ಟಿಷ್ಟು ವಿವರಗಳ ಕಥನ ಗೀತೆಗಳನ್ನು ಹೇಳುತ್ತಾ ಸಾಗುತ್ತಾರೆ. ಕೋಲು ಪದದ ದಾಟಿ ಇಲ್ಲಿರುತ್ತದೆ.

ಸೋಬಾನೆ ಪಾಪಮ್ಮ ಎಂದೇ ಹೆಸರು ವಾಸಿಯಾಗಿರುವ ಪಾಪಮ್ಮ, ವಿವಾಹ, ಒಸಗೆ, ಮೈನೆರೆಯುವುದು, ಗುಡ್ಲುಶಾಸ್ತ್ರ, ಉಡಿ ತುಂಬುವುದು, ಸೋದರ ಮಾವನ ಮಹತ್ವ, ಈ ಎಲ್ಲಾ ವಿವರಗಳನ್ನು ಒಳಗೊಂಡು ಒಂದೊಂದು ಪ್ರಕಾರದಲ್ಲೂ ಖಚಿತ ಹಾಗೂ ಆಕರ್ಷಕವಾಗಿ ಪದ ಹೇಳುವುದು ಈಕೆಯ ವಿಶೇಷವಾಗಿದೆ.

ಜೊತೆಗೆ ಮೈನೆರೆದ ಹುಡುಗಿಯ ವಿವರ, ತಂದೆ ಸೋದರ ಸಂಬಂಧಿ, ವಾರಿಗೆಯ ಹುಡುಗನಿದ್ದರೆ ಆತನ ಹೆಸರಿನ ಮೇಲೆ ಗಿರಿಜಾ ಕಲ್ಯಾಣ, ಸೋಬಾನವೆ ಎಂಬ ಪಲ್ಲವಿಯಿಂದ ಆರಂಭಿಸಿ ಹೆಸರು ಕಟ್ಟಿ ಹಾಡುವುದು ಈಕೆಯ ವಿಶೇಷತೆ. ಹೀಗಾಗಿಯೇ ಈಕೆಯ ಹಾಡಿಗೆ ವಿಶೇಷ ಆಸಕ್ತಿ ಗೌರವ.

ದಾವಣಗೆರೆ, ಚಿತ್ರದುರ್ಗ, ಹರಿಹರ ಈ ಮೊದಲಾದ ಸ್ಥಳಗಳಲ್ಲಿ ಸಾಂಸ್ಕೃತಿಕ ಸಮಾರಂಭದಲ್ಲಿ ಹಾಡಿರುವ ಪಾಪಮ್ಮ ಸಿರಿಗೆರೆಯಲ್ಲಿ ನಡೆಯುವ ಜಾನಪದ ಸಮಾವೇಶದಲ್ಲಿ ಪ್ರತಿ ವರ್ಷವೂ ಭಾಗವಹಿಸುತ್ತಾ ಬಂದಿದ್ದಾರೆ.

ಶ್ರೀಮತಿ ಪಾಪಮ್ಮ,
ಮಲ್ಲಾಪುರ, ದಾವಣಗೆರೆ ತಾಲೂಕು.

## ದೇವಿಕೆರೆ ಭೀಮಕ್ಕ

ಜನಪದರ ಬದುಕಿನಲ್ಲಿ ಸೋಬಾನೆಗೆ ವಿಶಿಷ್ಟ ಸ್ಥಾನ. ಯಾವುದೇ ಮಂಗಳ ಕಾಯಕವಿರಲಿ, ಅಲ್ಲೆಲ್ಲ ಹಾಡು ಪದಗಳ ಮುಂದೆ 'ಸೊ' ಎಂದರೆ ಸೋಬಾನ ಎಂಬ ನಂಬಿಕೆಯೂ ಜನಪದರ ಬದುಕಿನಲ್ಲಿ ಜನಜನಿತವಾಗಿದೆ. ಚಿತ್ರದುರ್ಗ, ದಾವಣಗೆರೆ, ತುಮಕೂರು ಈ ಜಿಲ್ಲೆಗಳಲ್ಲಿ ಸೋಬಾನೆ ಕಲಾವಿದರು, ವ್ಯಾಪಕವಾಗಿದ್ದಾರೆ. ವಿಶೇಷವಾಗಿ ಬುಡುಕಟ್ಟು ವರ್ಗದ ಹಟ್ಟಿಗಳಲ್ಲಿ ಸೋಬಾನದ ಸಂಗೀತ ಶಾಲೆಗಳಂತೆ ಕಂಡು ಬರುತ್ತವೆ. ಪುರಾಣ, ಇತಿಹಾಸ, ವರ್ತಮಾನದ ವ್ಯಕ್ತಿಗಳ ಮೇಲೂ ಸೋಬಾನೆ ಪದ ಕಟ್ಟಿ ಹಾಡುವುದು ಜನಪದರ ಪ್ರತಿಭಾಸಕ್ತತೆಗೆ ಸಾಕ್ಷಿಯಾಗಿದೆ.

ಭೀಮಕ್ಕ ಜಗಳೂರು ತಾಲೂಕಿನ ದೇವಿಕೆರೆ ಗ್ರಾಮದವರು. ಅರವತ್ತರ ಪ್ರಾಯದ ಈ ಹೆಣ್ಣು ಮಗಳು, ತನ್ನ ಜೀವನವನ್ನೇ ಸೋಬಾನೆ ಹೇಳುವುದರಲ್ಲಿಯೇ ಕಳೆದಿದ್ದಾರೆ. ಜಗಳೂರು, ಮೊಳಕಾಲ್ಮೂರು, ಚಳ್ಳಕೆರೆ, ಈ ಭಾಗಗಳಲ್ಲಿ ಜರುಗುವ ಧಾರ್ಮಿಕ, ಉತ್ಸವ, ಮದುವೆ ಕಾರ್ಯಗಳಲ್ಲಿ ತಪ್ಪದೆ ಭಾಗವಹಿಸುವುದು ಇವರ ಕಾಯಕವಾಗಿದೆ. ರೈತಾಪಿ ಬದುಕಿನ ಬೇರೆ ಬೇರೆ ಜಾತಿಯ ಮೂವತ್ತಕ್ಕೂ ಹೆಚ್ಚು ಹೆಂಗಸರಿಗೆ ಸೋಬಾನೆ ಪದ ಕಲಿಸಿದ ಹೆಸರೂ ಭೀಮಕ್ಕ ಅವರಿಗಿದೆ.

ಭೀಮಕ್ಕನವರು ಸೋಬಾನೆ ಪದ ಹಾಡುವುದನ್ನು ಹತ್ತನೇ ವಯಸ್ಸಿನಿಂದಲೇ ಕಲಿತಿದ್ದಾರೆ. ಅಜ್ಜಿ ತಿಪ್ಪಮ್ಮ, ತಾಯಿ ಸಣ್ಣಮ್ಮ ಇವರುಗಳೇ ಈಕೆ ಪದ ಹಾಡಲು ಸ್ಫೂರ್ತಿ, ಕುಟ್ಟುವಾಗ, ಬೀಸುವಾಗ, ತಾಯಿ ಪದ ಹೇಳುತ್ತಿದ್ದರು. ನಂತರ ಮದುವೆ ಮನೆಗೆ ತನ್ನ ಅಜ್ಜಿಯನನು ಕರೆದುಕೊಂಡು ಹೋಗುತ್ತಿದ್ದರು.

ಒಮ್ಮೊಮ್ಮೆ ಅಜ್ಜಿಯ ಹಿಂದೆ ಹೋಗುತ್ತಿದ್ದುದ್ದರಿಂದ ನಿಧಾನವಾಗಿ ಪದ ಕಲಿಯಲು ಸಹಾಯವಾಯಿತು ಎನ್ನುತ್ತಾರೆ. ಜೊತೆಗೆ ಊರಲ್ಲೂ ಸೋಬಾನೆ,

ಕೋಲುಪದ, ಜನಪದ ಗೀತೆಗಳನ್ನು ಹೇಳುತ್ತಿದ್ದ ಹೆಂಗಳೆಯರ ಮಧ್ಯೆ ತಾನೂ ಕುಳಿತು ಹಿಮ್ಮೇಳಕ್ಕೆ ಸೊಲ್ಲು ಕೊಡುವ ಆರಂಭಿಕ ಕೆಲಸ ಮಾಡಿದರು. ಇದರಿಂದ ರಾಗ, ಭಾವ, ಮೊದಲಿಗೆ ಸಿದ್ದಿಸಿತು. ನಂತರ ಯಾವ ಕತೆಗಳನ್ನು ಹೇಗೆ ವಿಂಗಡಿಸಿ ಹಾಡಬೇಕು. ಮಂಗಳ ಹೇಗೆ ಮಾಡಬೇಕೆಂಬುದನ್ನು ಸ್ವಲ್ಪ ತಡವಾಗಿ ಕಲಿತರು.

ತಿಪ್ಪೇಸ್ವಾಮಿ, ಗಾದರಿ ಪಾಲನಾಯಕ, ಚಿತ್ರದುರ್ಗದ ಪಾಳೆಯಗಾರರ ಮೇಲೂ ಪದ ಹಾಡುವ ಈ ಕಲಾವಿದೆ, ಪ್ರಧಾನವಾಗಿ, ಐತಿಹಾಸಿಕ ಕಥೆಯನ್ನು ಹಿನ್ನೆಲೆಯಾಗಿ ಪದ ಹಾಡುತ್ತಾರೆ.

ಇವರು ಚಿತ್ರದುರ್ಗದ ಆಕಾಶವಾಣಿಯಲ್ಲಿ ಕಳೆದ ಹತ್ತು ವರ್ಷಗಳಿಂದಲೂ ಹಾಡುತ್ತಿರುವುದು ವಿಶೇಷ. ಯಾವುದೇ ಸಭೆ ಸಮಾಂಭದಲ್ಲಿ ಸಂಕೋಚವಿಲ್ಲ, ಗಟ್ಟಿ ಧ್ವನಿಯಲ್ಲಿ ಸ್ವರ ಎತ್ತಿ ಹಾಡಬೇಕು, ಅದೇ ಕಲೆ ಎಂದು ಸೋಬಾನೆ ಪದ ಅಂತರಾಳವನ್ನು ಬಿಡಿಸಿ ಹೇಳುವ ಭೀಮಕ್ಕ ಈಗ ಕಲಿಸಿರುವ ಮೂವತ್ತಕ್ಕೂ ಹೆಚ್ಚು ಮಹಿಳೆಯರು, ಒಬ್ಬೊಬ್ಬರಿಗೆ ಕಲಿಸಿದರೆ ಅದೆಷ್ಟೆ ಸಾಕು ಬಹುಮಾನ ಎನ್ನುತ್ತಾರೆ.

**ದೇವಿಕೆರೆ ಭೀಮಕ್ಕ,**
**ದೇವಿಕೆರೆ, ಜಗಳೂರು ತಾಲೂಕು.**

## ಸಿ. ಮಲ್ಲಿಕಾರ್ಜುನ

'ನಂದಿಕೋಲು' ಕುಣಿತ ಬಯಲು ಸೀಮೆಯ ವಿಶಿಷ್ಟ ಜನಪದ ಕಲೆ. ಚಮ್ಮೇಳ, ನಾಗಸ್ವರ, ಹಲಗೆ, ಚರ್ಮವಾದ್ಯಗಳಿಗೂ ತಕ್ಕನಾಗಿ, ಲಯಬದ್ಧವಾಗಿ, ಕುಣಿಯುವ ಈ ಕಲೆ, ದೈವ ಸಂಬಂಧಿ ಕಲೆಯೂ ಹೌದು. ಮೊದಲಿಗೆ ದೇವರ ಉತ್ಸವಗಳಲ್ಲಿ ಮಾತ್ರ ಕುಣಿಸುತ್ತಿದ್ದ ನಂದಿ ಧ್ವಜವನ್ನು ಇತ್ತೀಚೆಗೆ ಎಲ್ಲ ಸಭೆ ಸಮಾರಂಭಗಳಲ್ಲೂ ಕುಣಿಸುವ ಸಂಪ್ರದಾಯವನ್ನು ರೂಢಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ಮಲ್ಲಿಕಾರ್ಜುನಯ್ಯ, ಹರಪನಹಳ್ಳಿಯ ಬೆಳ್ಳಿಗೆರೆ ಗ್ರಾಮದವರು. ತಂದೆ ಚನ್ನಪ್ಪನವರೂ ನಂದಿ ಕೋಲು, ಚಮ್ಮೇಳ, ವೀರಗಾಸೆಯ ಕಲಾವಿದರಾಗಿದ್ದವರು. ತಂದೆಯ, ತಾತನವರ ಕಾಲದಿಂದಲೂ ನಂದಿ ಕೋಲಿನವರ ಮನೆ ಎಂದು ಖ್ಯಾತವಾಗಿದ್ದ ಮನೆತನ ಇದಾಗಿತ್ತು. ಆ ಪರಂಪರೆಯ ಜೊತೆಗೆ, ಕರ್ನಾಟಕದ ಬಹುತೇಕ ಭಾಗಗಳಲ್ಲಿನ ಸಾಂಸ್ಕೃತಿಕ, ಧಾರ್ಮಿಕ, ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ನಂದಿಧ್ವಜ, ವೀರಗಾಸೆ, ಚಮ್ಮೇಳ ವಾದ್ಯ ಸಂಗೀತ ನೀಡುವ ಪರಂಪರೆಯನ್ನು ಪಾಲಿಸಿಕೊಂಡು ಬಂದವರು ಮಲ್ಲಿಕಾರ್ಜುನ. ಮಾಧ್ಯಮಿಕ ಶಾಲೆಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದಾರೆ. ಆದರೂ, ಶಿವಪುರಾಣ, ದಕ್ಷ ಬ್ರಹ್ಮಯಾಗ, ವೀರಭದ್ರ ಪುರಾಣ, ಇವುಗಳನ್ನು ಖಡ್ಗದ ಪದದ ಮಾದರಿಯಲ್ಲಿ ಚಮ್ಮೇಳದೊಂದಿಗೆ ಹಾಡುವುದು ಇವರ ವಿಶೇಷ. ದಕ್ಷಯಾಗದ ಪ್ರಸಂಗವನ್ನು ಇಡೀ ರಾತ್ರಿ ವೀರಗಾಸೆ, ಚಮ್ಮೇಳನದ ಮೂಲಕ ಹೇಳುತ್ತಾರೆ. ನೃತ್ಯ, ಮಾತು ಕಥೆ, ಅದಕ್ಕೊಪ್ಪುವ ವೇಷ ಭೂಷಣಗಳಿಂದ ಸುಲಭವಾಗಿ ಆಕರ್ಷಣೆಗೆ ಒಳಗಾಗುವ ಕಲೆ ಚಮ್ಮೇಳನ. ಬಹುತೇಕ ವೀರಶೈವ ಜನಾಂಗದವರೇ ನುಡಿಸುವ ಈ ಚರ್ಮ ವಾದ್ಯ ಶಿವನ ಪ್ರಿಯವಾದ್ಯ ಎಂಬ ನಂಬಿಕೆಯೂ ಇದೆ. ಹೀಗಾಗಿ ಶೈವ ಸಂಬಂಧಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಂದಿ ಧ್ವಜ ಅಥವಾ ನಂದಿಕೋಲಿಗೆ

ಮೊದಲು ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ಮಲ್ಲಿಕಾರ್ಜುನಯ್ಯನವರು, ತಂದೆ ಚನ್ನಪ್ಪನವರು ತರೀಕೆರೆಯಲ್ಲಿ ನಡೆದ ಜಾನಪದ ಸಮಾವೇಶದಲ್ಲಿ ಭಾಗವಹಿಸಿದ್ದರು. ಇವರ ನಂತರ ಮಲ್ಲಿಕಾರ್ಜುನಯ್ಯ ಮತ್ತು ತಂಡ ಹಂಪಿಯ ಉತ್ಸವ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಅಜ್ಜಂಪುರ, ಹಾವೇರಿ, ಲಕ್ಕುಂಡಿ ಉತ್ಸವ, ಮುದೇನೂರು, ಇಲ್ಲೆಲ್ಲಾ ಆಹ್ವಾನಿತ ಕಲಾ ತಂಡವಾಗಿ ಕಾರ್ಯಕ್ರಮ ನೀಡಿದ್ದಾರೆ. ಬೆಳ್ಳಿಗೆರೆ ಹಾಗೂ ಸಮೀಪದ ಗ್ರಾಮಗಳಲ್ಲಿ ಶಾಲಾ ಮಕ್ಕಳಿಗೂ ಚಮ್ಮೇಳನ ವಾದ್ಯ ತಯಾರಿಕೆ, ನುಡಿಸುವ ಮೂಲಕ ಈ ಭಾಗದ ಪ್ರಮುಖ ಚರ್ಮ ವಾದ್ಯ ಕಲಾವಿದರಾದ ಮಲ್ಲಿಕಾರ್ಜುನಯ್ಯ ಅವರಿಂದ, ಈ ಕ್ಷೇತ್ರಕ್ಕೆ ಗಣನೀಯ ಕೊಡುಗೆಯನ್ನು ನಿರೀಕ್ಷಿಸಬಹುದು.

ಸಿ. ಮಲ್ಲಿಕಾರ್ಜುನ,<br>ಬೆಳ್ಳಿಗೆರೆ.

# ಮಲ್ಲಪ್ಪ ಅಸಗೋಡು

ಭಜನೆ, ದೇವರನಾಮ, ಸಂಕೀರ್ತನೆಯ ರೂಪದ ಒಂದು ಕಲೆ. ಸಾಹಿತ್ಯ, ಭಾಷೆ, ವಸ್ತು ಈ ಮೂರು ವಿಷಯಗಳಲ್ಲಿ ಆಧ್ಯಾತ್ಮಿಕ ದಟ್ಟ ಪರಿಕಲ್ಪನೆ, ಭಕ್ತಿ ಭಾವದ ನಿರೂಪಣೆ ಇಲ್ಲಿ ಪ್ರಧಾನ. ಶಿವಭಜನೆ, ಪಂಡರಾಪುರಿ ಭಜನೆ ಹೀಗೆ ಆಯಾಯಾ ಪರಿಸರಕ್ಕೆ ತಕ್ಕಂತೆ ಭಜನೆ ರೂಪುಗೊಳ್ಳುತ್ತದೆ. ಶ್ರೀಮಾನ್ ರಮಾರಮಣ ಗೋವಿಂದ ಎಂಬ ಸೊಲ್ಲಿನಿಂದ ಆರಂಭಿಸಿ ಹರಹರ ನಮಃ ಪಾರ್ವತಿ ಪತಯೇ ಹರಹರ ಮಹಾದೇವ ಎಂಬ ಸೊಲ್ಲಿನೊಂದಿಗೆ ಮುಕ್ತಾಯ ಅಥವಾ ಆರಂಭಿಕವಾಗಿ ಕಥೆ ಆರಂಭಿಸುವುದು ಇಲ್ಲಿ ಪ್ರಧಾನ. ಆರೇಳು ಜನರ ಗುಂಪು, ಮೃದಂಗ ಹಾರ್ಮೋನಿಯಂ, ತಾಳ ತಂಬೂರಿ ಅಥವಾ ಏಕತಾರಿಗಳನ್ನೂ ಬಳಸುತ್ತಾರೆ. ಇಲ್ಲಿ ಮುಮ್ಮೇಳ ಕಲಾವಿದ ಪ್ರಧಾನ. ಆತನನ್ನು 'ಗುರುಮಗ' ಎಂದೂ ಕರೆಯಲಾಗುವುದು.

ಚಿತ್ರದುರ್ಗ, ತುಮಕೂರು ಈ ಬಯಲುಸೀಮೆ ಜಿಲ್ಲೆಗಳಲ್ಲಿ ಭಜನೆ ಕಲೆ ಪ್ರಸಿದ್ಧವಾದುದು. ಕೋಳಿ ಕೂಗುವ ಹಳ್ಳಿಗಳಲ್ಲೂ ಭಜನೆ ಕಲಾತಂಡ ಇದ್ದೇ ತೀರುತ್ತದೆ. ಇವರನ್ನು ಸತ್ಸಂಗ ಎಂತಲೂ ಕರೆದು ಇವರನ್ನು ಆಧ್ಯಾತ್ಮಿಕ ವ್ಯಕ್ತಿಗಳ ಹಾಗೆ ಭಾವಿಸವುದು ಇದೆ.

ಜಗಳೂರು ತಾಲೂಕಿನ ಅಸಗೋಡು ಗ್ರಾಮದ ಶ್ರೀ ಮಲ್ಲಪ್ಪನವರು ಈ ಭಾಗದ ಪ್ರಮುಖ ಭಜನೆ ಕಲಾವಿದರು. ಸುಮಾರು ೬೫ ವರ್ಷ ವಯೋಮಿತಿಯ ಈ ಕಲಾವಿದ ಜಗಳೂರು ತಾಲೂಕಿನ ಪ್ರತಿ ಹಳ್ಳಿಗಳಲ್ಲಿಯೂ ಪ್ರಸಿದ್ಧರು. ನೂರಾರು ಭಜನೆ ಭಕ್ತರಿಗೆ ಇಂದಿಗೂ ಪ್ರೀತಿಯ ಗುರು.

ಮಲ್ಲಪ್ಪನವರು ಹೆಚ್ಚೇನೂ ಓದಿದವರಲ್ಲ. ಕನ್ನಡ ಓದುವ, ಸಾಧಾರಣವಾಗಿ ಬರೆಯುವ ಸಾಮರ್ಥ್ಯವಿದೆ. ಆದರೆ ಪುರಾಣ, ಐತಿಹಾಸಿಕ, ಭಗವದ್ಗೀತೆ ಇವುಗಳ

ಬಗೆಗೆ ಬಲವಾದ ಹಿಡಿತವಿದೆ. ಅಷ್ಟೇ ಅಲ್ಲ, ಪೌರಾಣಿಕ ಹಲವು ಪ್ರಸಂಗಗಳನ್ನು ಬಿಡಿಸುವ, ವ್ಯಾಖ್ಯಾನದ ಮೂಲಕ ಉಪಕತೆ ಹೇಳುವುದು ಈತನ ವಿಶೇಷತೆ.

ನಾಯಕನಟ್ಟಿ ತಿಪ್ಪೇಸ್ವಾಮಿ, ಕಂದಿಕೆರೆ ಶಾಂತಪ್ಪ ತಾತ, ಉಕ್ಕಡಗಾತ್ರಿಯ ಕರಿಬಸವೇಶ್ವರ ಸ್ವಾಮಿಗಳ ಕುರಿತು ವಿಶೇಷವಾಗಿ ಪದಕಟ್ಟಿ ಹಾಡುವುದು ಈತನ ವಿಶೇಷವಾಗಿದೆ. ಉಳಿದಂತೆ ಜುಂಜಪ್ಪ, ಮೈಲಾರ ಲಿಂಗಪ್ಪ, ಚಿತ್ರಲಿಂಗನ ಮೇಲೂ ಪದ ಹಾಡುತ್ತಾರೆ. ಪುರಾಣದ ಕೃಷ್ಣಸಂಧಾನ, ಪಾಂಡವರ ವನವಾಸದ ಪ್ರಸಂಗಗಳನ್ನೂ ಭಜನೆ ಪದಗಳಿಗೆ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಕೋಲುಪದ, ಜನಪದ ಹಾಸ್ಯಕತೆ, ದೇವರ ಉತ್ಸವಗಳಲ್ಲಿ ದೇವರು ಕರೆಯುವ ಪದಗಳನ್ನು ಹೇಳುತ್ತಾರೆ.

ಚಿತ್ರದುರ್ಗ ಆಕಾಶವಾಣಿಯಿಂದ ಇವರ ಹಲವು ತತ್ವಪದಗಳು ಪ್ರಸಾರವಾಗುತ್ತಿವೆ. ಇವರ ಜೊತೆಗೆ ದೊಣ್ಣೆಹಳ್ಳಿಯ ಹೆಚ್. ಎನ್. ಜಯದೇವಮೂರ್ತಿ, ದೇವಿಕೆರೆ ಭೀಮಕ್ಕ, ಕೆಂಚನಹಳ್ಳಿ ರಾಮಚಂದ್ರಪ್ಪ ಈ ಭಾಗದ ಪ್ರಮುಖ ತತ್ವಪದಕಾರರು. ಈ ಎಲ್ಲ ಕಲಾವಿದರೂ ಒಂದುಗೂಡಿ ಕಾರ್ಯಕ್ರಮ ನೀಡುವುದೂ ಇದೆ. ಆಕಾಶವಾಣಿಯಲ್ಲಿ ಬಿಡಿಬಿಡಯಾಗಿಯೂ ಒಟ್ಟಾಗಿಯೂ ಕಾರ್ಯಕ್ರಮ ನೀಡುತ್ತಿದ್ದಾರೆ.

ಮಲ್ಲಪ್ಪ,
ಜನಪದ ಕಲಾವಿದರು,
ಅಸಗೋಡು, ಜಗಳೂರು ತಾಲೂಕು.

## ಮಾಹಿತಿ ನೀಡಿದವರು :

1. ಶ್ರೀ ಯುಗಧರ್ಮ ರಾಮಣ್ಣ,
   ಸಿದ್ಧನಮಠ, ಚನ್ನಗಿರಿ
2. ಶ್ರೀ ಡಿ. ಮಧುಸೂಧನ,
   ಸಂಶೋಧನಾ ವಿದ್ಯಾರ್ಥಿ, ಚಿತ್ರದುರ್ಗ
3. ಶ್ರೀ ಕುಂ. ಬ. ಸದಾಶಿವಯ್ಯ,
   ಗೋಸಾಯಿ ಗುಡ್ಡ, ಹರಪನಹಳ್ಳಿ
4. ಶ್ರೀಮತಿ ಬೋವಿ ಜಯಮ್ಮ, ಚಿತ್ರದುರ್ಗ
5. ಶ್ರೀಮತಿ ನೀಲಮ್ಮ,
   ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
   ದಾವಣಗೆರೆ
6. ಕಾರ್ಯಕ್ರಮ ನಿರ್ವಾಹಕರು,
   ಆಕಾಶವಾಣಿ, ಚಿತ್ರದುರ್ಗ
7. ಶ್ರೀ ಈಶ್ವರಾನಂದಪುರಿ ಶ್ರೀಗಳು, ಹೊಸದುರ್ಗ
8. ಶ್ರೀ ಮೃತ್ಯುಂಜಯ, ಹರ್ತಿಕೋಟೆ, ಹಿರಿಯೂರು
9. ಶ್ರೀ ಗದ್ದಿಗಪ್ಪ, ಕೊಕ್ಕನೂರು ಹರಿಹರ
10. ಲಿಂಗಮೂರ್ತಿ, ಹಿರೇಮಳಲಿ ಗ್ರಾಮ, ಚನ್ನಗಿರಿ
11. ಬಾಳಪ್ಪ, ಬಸಾಪುರ
12. ರಾಮಪ್ಪ, ಮತ್ತಿ ಗ್ರಾಮ, ದಾವಣಗೆರೆ
13. ಎಲ್. ಕೃಷ್ಣಪ್ಪ, ಕಲಮರಹಳ್ಳಿ, ಚಳ್ಳಕೆರೆ
14. ಲಕ್ಷ್ಮಪ್ಪ, ಕೊಕ್ಕನೂರು, ಹರಿಹರ
15. ಈಶ್ವರಪ್ಪ, ಮೇದಿಕೆರೆ, ಚನ್ನಗಿರಿ
16. ನರಸಿಂಹಮೂರ್ತಿ,
    ಡೊಳ್ಳು ಕಲಾವಿದರು, ಆರುಂಡಿ, ಹೊನ್ನಾಳಿ



ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ–ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ “ಜಾನಪದ ತಲೆಮಾರು” ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ.

**ಕೆರೆಮನೆ ಶಂಭು ಹೆಗಡೆ**
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

